ಅಧ್ಯಕ್ಷರು: ಬೇಡಿಕೆಗಳ ಬಗ್ಗೆ ಒಬ್ಬೊಬ್ಬರು ಒಂದೊಂದು ಇಲಾಖೆಯ ಮೇಲೆ ಮಾತನಾಡಿ. ಎಲ್ಲರೂ ಪ್ರತಿಯೊಂದು ಬೇಡಿಕೆಯ ಬಗ್ಗೆ ಮಾತನಾಡುವುದು ಬೇಡ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ನಾವು ಅದೇ ರೀತಿ ವ್ಯವಸ್ಥೆ ಮಾಡಿದ್ದೇವೆ. ಬೇರೆ ಬೇರೆ ಇಲಾಖೆ ಮೇಲೆ ಬೇರೆ ಬೇರೆ ಶಾಸಕರು ಮಾತನಾಡುವ ರೀತಿಯಲ್ಲಿ ಮಾಡಿಕೊಂಡಿದ್ದೇವೆ.

+ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರ್ಕಾರದ 2000-2001 ನೇ ವರ್ಷದ ಆಯವ್ಯಯದ ಮೇಲೆ ಚರ್ಚೆಗೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಿದ್ದೇನೆ. ಇವತ್ತು ನಾನು ಪಂಚಾಯತ್ ರಾಜ್ ಇಲಾಖೆಯಿಂದ ನನ್ನ ಭಾಷಣವನ್ನು ಪ್ರಾರಂಬ ಮಾಡುತ್ತೇನೆ. ಬಹುಶಃ ಪಂಚಾಯತ್‌ರಾಜ್ ವ್ಯವಸ್ಥೆ ಮುಖಾಂತರ ಅಧಿಕಾರ ವಿಕೇಂದ್ರೀಕರಣ ಮತ್ತು ಸಮಾಜದ ಸರ್ವ ವರ್ಗದ ಸರ್ವ ಜನರಿಗೂ ಕೂಡ ಅಧಿಕಾರವನ್ನು ಚಲಾಯಿಸತಕ್ಕ ಮತ್ತು ಅಧಿಕಾರದ ಮುಖಾಂತರ ಸಾಮಾನ್ಯ ಜನರ ಕಷ್ಟಸುಖಗಳಿಗೆ ಭಾಗಿಯಾಗಲಿಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಹೇಳುವಂಥ ದೊಡ್ಡ ಹಿನ್ನೆಲೆಯಲ್ಲಿ, ಈ ಒಂದು ಅಧಿಕಾರ ವಿಕೇಂದ್ರೀಕರಣ ನಡೆದಿದೆ ಎಂದು ನಾನು ಭಾವಿಸುತ್ತಿದ್ದೇನೆ. ಸುಮಾರು 5,675 ಗ್ರಾಮಪಂಚಾಯಿತಿಗಳನ್ನು ಹೊಂದಿರುವಂಥ ಈ ಒಂದು ಪಂಚಾಯತ್‌ರಾಜ್ ವ್ಯವಸ್ಥೆ ಬಹುಶಃ ಇವತ್ತು ನಮ್ಮ ನಿರೀಕ್ಷೆ ಏನು ಇದೆ, ಆ ನಿರೀಕ್ಷೆಯ ದಾರಿಯಲ್ಲಿ ಹೋಗುತ್ತಿಲ್ಲ. ಪಂಚಾತ್‌ರಾಜ್ ವ್ಯವಸ್ಥೆಗೆ ತಮ್ಮ ಆಯವ್ಯಯದಲ್ಲಿ ಮೀಸಲಾಗಿಟ್ಟಂಥ ಆ ಒಂದು ಮೊತ್ತಗಳು ಇವತ್ತಿನ ಆ ಒಂದು ಸಾಮಾಜಿಕ ವ್ಯವಸ್ಥೆಗೆ ಪೂರಕವಾದಂಥ ರೀತಿಯಲ್ಲಿಲ್ಲ ಎಂದು ಹೇಳುವಂಥದ್ದು ನನ್ನ ಅನಿಸಿಕೆ. ಪ್ರಾಯಶಃ ಇವತ್ತು ಕೇಂದ್ರಸರ್ಕಾರದ ವ್ಯವಸ್ಥೆ ಸುಮಾರು ತಮ್ಮ ಆಯವ್ಯಯದಲ್ಲಿ ಶೇಕಡ 57ರಷ್ಟು ಮೊತ್ತವನ್ನು ಈ ಗ್ರಾಮೀಣಾಭಿವೃದ್ಧಿಯ ಕಡೆಗೆ ಇಟ್ಟಂಥ ಒಂದು ದೊಡ್ಡ ಸಾಧನೆ ಬಹುಶಃ ಕಳೆದ 50 ವರ್ಷಗಳಲ್ಲಿ ಕೇಂದ್ರಸರ್ಕಾರ ಮಾಡಿದೆ. ಬಹುಶಃ ಇದರ ಒಂದು ಮೂಲಕಲ್ಪನೆ ಏನು ಎಂದರೆ ಈ ಒಂದು ಆಯವ್ಯಯದಲ್ಲಿ ಬರುವ ಮೊತ್ತಗಳು ನೇರವಾಗಿ ಸಾಮಾನ್ಯ ಜನರ ಬದುಕಿನ ಎಲ್ಲಾ ಸಮಸ್ಯೆಗಳಿಗೆ ಸ್ಪಂದನ ಕೊಡಲಿಕ್ಕೆ ಆಗಬೇಕು ಎಂದು ಹೇಳುವ ಹಿನ್ನೆಲೆಯಲ್ಲಿ ಇರಬೇಕು.

ಇವತ್ತಿನ ಪರಿಸ್ಥಿತಿ ಏನಾಗಿದೆಯೆಂದರೆ ನಮ್ಮ ಪರಿಕಲ್ಪನೆಗೆ ವಿರುದ್ಧವಾದ ವ್ಯವಸ್ಥೆ ಸಮಾಜದಲ್ಲಿದೆ. ಕುಡಿಯುವ ನೀರಿನ ಬಗ್ಗೆ ಕೂಲಂಕುಷವಾಗಿ ಚರ್ಚೆಯಾಗಿದೆ. ಆದ್ದರಿಂದ ಅದರ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಅಧಿಕಾರದ ವಿಕೇಂದ್ರೀಕರಣವಾಗಬೇಕು ಎಂಬ ಕಲ್ಪನೆಯಲ್ಲಿ ನಾವು ಚುನಾವಣೆಗಳನ್ನು ನಡೆಸಿದ್ದೇವೆ. ಆದರೆ ಇವತ್ತು ಗ್ರಾಮಪಂಚಾಯಿತಿ ಮಟ್ಟಕ್ಕೆ ಬರುವ ಮೊತ್ತವು ಎಲ್ಲಿ ಸಾಕಾಗುತ್ತದೆ? ಕೇಂದ್ರಸರ್ಕಾರವು ಸಹ ಗ್ರಾಮಪಂಚಾಯಿತಿಗಳಿಗೆ ಅನುದಾನವನ್ನು

ಕೊಡುವುದಾಗಿ ಹೇಳಿದೆ. ಅದೇ ರೀತಿ ಕರ್ನಾಟಕ ಸರ್ಕಾರವು ಒಂದು ಪಕ್ಷ ಹೆಚ್ಚಾಗಿ ಅನುದಾನ ಕೊಡುವುದಾಗಿ ಹೇಳಿದೆ. ಆದರೆ ಈ ಹಣವು ಸಾಕೆ? ಪಂಚಾಯಿತಿ ವ್ಯವಸ್ಥೆಯ ಪರಿಕಲ್ಪನೆಗೆ ಸಮರ್ಪಕವಾದ ವ್ಯವಸ್ಥೆ ಇದರಿಂದ ಆಗುತ್ತದೆಯೇ ಎಂಬ ಬಗ್ಗೆ ನೋಡಬೇಕಾಗಿದೆ. ಎರಡು ಮೂರು ಹಂತಗಳಲ್ಲಿ ಗ್ರಾಮಪಂಚಾಯಿತಿ ವ್ಯವಸ್ಥೆಯನ್ನು ತೆಗೆದುಕೊಳ್ಳೋಣ, ಅನಂತರ ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿ ಬಗ್ಗೆ ಬರೋಣ. ಎರಡು ಮೂರು ದೊಡ್ಡ ಕೊರತೆಗಳು ಇದಕ್ಕೆ ಕಾರಣ ಆಗಬಹುದೆಂದು ನನಗನ್ನಿಸುತ್ತಿದೆ. ಅಧಿಕಾರದಲ್ಲಿರುವ ಪಂಚಾಯಿತಿ ಕಾರ್ಯದರ್ಶಿಗಳು, ಬೇರೆ ವರ್ಗದಿಂದ ಬರುವಂಥ ಜನಪ್ರತಿನಿಧಿಗಳ ವಿದ್ಯಾಭ್ಯಾಸದ ಕೊರತೆಯ ಹಿನ್ನಲೆಯಲ್ಲಿಯೋ, ಸ್ಥಾನಮಾನದ ಹಿನ್ನಲೆಯಲ್ಲೋ, ಅವರುಗಳಿಗೆ ಸರಿಯಾಗಿ ಕೆಲಸ ಮಾಡಲು ಬಿಡದಿರುವುದನ್ನು ಮಾನ್ಯ ಸಚಿವರು ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಸಮಾಜದಲ್ಲಿ ಕೂಲಿ ಕೆಲಸ ಮಾಡುವಂಥ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಂದ ಬಂದಂಥ ಹಲವಾರು ಜನ ಅವಿದ್ಯಾವಂತರಿಗೆ ಸಹ ಅವಕಾಶವನ್ನು ಕಲ್ಪಿಸಿಕೊಟ್ಟದ್ದೇವೆ. ಇದು ನಿಜವಾಗಿಯು ಶ್ಲಾಘನೀಯ. ಆದರೆ ಇದರ ದುರುಪಯೋಗ ಪಂಚಾಯಿತಿರಾಜ್ ವ್ಯವಸ್ಥೆಯಲ್ಲಿ ಆಗುತ್ತಿದೆ. ಇದಕ್ಕೆ ಏನಾದರೂ ವ್ಯವಸ್ಥೆ ಮಾಡಲೇ ಬೇಕಾಗಿದೆ. ಇವತ್ತು ಯಾವುದೇ ಬಿಲ್ಲುಗಳು, ಖರ್ಚುವೆಚ್ಚಗಳು ಮುಂತಾದ ಬಗ್ಗೆ ಆಲೋಚನೆ ಮಾಡಿದರೆ ಪ್ರಾಯಶಃ ಅದರ ಬಗ್ಗೆ ವಿಮರ್ಶೆ ಮಾಡುವಂಥದ್ದು, ಅಧಿಕಾರ ವಾಣಿಯ ಮೂಲಕ ತಿಳಿಯಪಡಿಸಿ ಈ ರೀತಿ ಕೆಲಸ ಮಾಡಿ ಎಂದು ಹೇಳುವಂಥ ನೈತಿಕ ಜವಾಬ್ದಾರಿ ಅವರಲ್ಲಿ ಇರುವುದಿಲ್ಲ. ಏಕೆಂದರೆ ಮೂಲಭೂತವಾಗಿ ಅವರಿಗೆ ವಿದ್ಯಾಭ್ಯಾಸ ಇರುವುದಿಲ್ಲ. ಸಾಧಾರಣವಾಗಿ ಕೃಷಿ ಕಾರ್ಮಿಕರಾಗಿದ್ದವರು ಅಧ್ಯಕ್ಷ ಸ್ಥಾನಕ್ಕೆ ಬಂದಿರುತ್ತಾರೆ. ತಾವು ಅವರಿಗೇನು ತಿಂಗಳಿಗೆ ಗೌರವಧನವನ್ನು ಕೊಡುತ್ತೀರಿ ಪ್ರಾಯಶಃ ಅವರ ಸಾಮಾಜಿಕ ಸ್ಥಾನಮಾನವನ್ನು ಹೊಂದಿಕೊಂಡು ಅವರು ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಮುಂದುವರೆಯಲು ಸಾಧ್ಯವಾಗುವುದಿಲ್ಲ. ಇದನ್ನು ಎಲ್ಲರ ಬಗ್ಗೆ ಹೇಳುವುದಿಲ್ಲ. ಆದರೆ ಯಾರು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಂದ ಬಂದಿರುತ್ತಾರೆ ಯಾರು ಅವಿದ್ಯಾವಂತರಾಗಿದ್ದಾರೆ ಇವರನ್ನು ಸಮರ್ಪಕವಾಗಿ ಅವರ ಅಧಿಕಾರವನ್ನು ಚಲಾವಣೆ ಮಾಡಿ ನಿಜವಾದ ಸಮಸ್ಯೆಗೆ ಸ್ಪಂದಿಸಬೇಕೆಂದರೆ ಆ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವ ವಿದ್ಯಾಭ್ಯಾಸದ ಅರ್ಹತೆ ಅಥವಾ ಅವರಿಗೆ ಆ ರೀತಿಯಲ್ಲಿ ವಿದ್ಯಾಭ್ಯಾಸವನ್ನು ಆ ರೀತಿ ಸ್ಥಾನಮಾನ ಬಂದಮೇಲೆ ಕೊಡುವಂಥದ್ದು ಪ್ರಾಥಮಿಕ ಹಂತದಲ್ಲಿ ಆಗಲೇ ಬೇಕು. ತಮ್ಮ ಆಯವ್ಯಯದಲ್ಲಿ ಮೈಸೂರಿನ ಅಬ್ದುಲ್ ನಜೀರ್ ಸಾಬ್ ಸಂಸ್ಥೆಯಲ್ಲಿ ಈ ಕೆಲಸವನ್ನು ಮಾಡಬೇಕು ಎಂಬ ಬಗ್ಗೆ ತಿಳಿಸಿದ್ದೀರಿ. ಆದರೆ ಇದು ಯಾವಾಗ ಆಗುತ್ತದೆ. ಈ ಪರಿಕಲ್ಪನೆಯ ಹಿನ್ನಲೆಯಲ್ಲಿ ನಮ್ಮ ಕೆಲಸಕಾರ್ಯಗಳು ಮುಂದುವರೆಯಬೇಕು. ತಮ್ಮ ಮನಸ್ಸಿನ ಭಾವನೆ ಸಹ ಇದೇ ಆಗಿದೆಯೆಂದು ಭಾವಿಸುತ್ತೇನೆ. ಇವತ್ತು ಕಾರ್ಯದರ್ಶಿಗಳ ಕಾರ್ಯಚಟುವಟಿಕೆ ಯಾವ ರೀತಿಯಲ್ಲಿದೆಯೆಂದರೆ ಅವರೇ ಅಧ್ಯಕ್ಷರಂತಾಗಿದ್ದಾರೆ. ಅಲ್ಲಿ

ಮಾಡಬೇಕಾಗಿರುವ ಎಲ್ಲ ಕೆಲಸಕಾರ್ಯಗಳಲ್ಲಿ ಅಧ್ಯಕ್ಷರು ಎಲ್ಲಿ ಸಹಿ ಮಾಡಬೇಕೊ ಅಲ್ಲಿ ಮಾಡಿಸಿ ಎಲ್ಲ ಕೆಲಸವನ್ನು ಕಾರ್ಯದರ್ಶಿಗಳೆ ಮಾಡುವ ಪರಿಸ್ಥಿತಿ ಎಲ್ಲಾ ಪಂಚಾಯಿತಿಗಳಲ್ಲಿ ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದರಿಂದ ನಾವೇನು ಅನುದಾನವನ್ನು ಗ್ರಾಮಪಂಚಾಯಿತಿಗಳಿಗೆ ಕೊಡುತ್ತೇವೆ ಅದರ ಅರ್ಧ ಭಾಗವನ್ನು ಅವರುಗಳೇ ನುಂಗಿಹಾಕುವಂಥ ವ್ಯವಸ್ಥೆಯಾಗಿದೆ. ಇದರಿಂದ ಸರ್ಕಾರದಿಂದ ಬರುವ ಅನುದಾನ ನಿಜವಾಗಿ ಎಲ್ಲಿ ಉಪಯೋಗವಾಗಬೇಕೊ ಅಲ್ಲಿ ಆಗುತ್ತಿಲ್ಲ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಗೌರವಧನವನ್ನು ಹೆಚ್ಚು ಮಾಡುವ ಬಗ್ಗೆ ಗಮನಕೊಡಬೇಕು. ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಾದ ಅಧ್ಯಕ್ಷರಿಗೆ ಸಮಾಜದಲ್ಲಿ ಸಾಮಾಜಿಕ ಸ್ಥಾನಮಾನಗಳು ಅಧ್ಯಕ್ಷರು, ಉಪಾಧ್ಯಕ್ಷರಾಗಿ ಬರುವ ರೀತಿಯಲ್ಲಿ ಆಗಲು ಹೆಚ್ಚಿನ ಒತ್ತು ಕೊಡುವ ಕೆಲಸವಾಗಬೇಕು. ಯಾರು ಕೃಷಿ ಕೂಲಿ ಕಾರ್ಮಿಕರಾಗಿದ್ದು ಅವರು ಆ ಸ್ಥಾನವನ್ನು ನಿಭಾಯಿಸುತ್ತಾರೆ ಅವರಿಗೆ ದಿನನಿತ್ಯದ ಜೀವನ ನಡೆಸುವ ವ್ಯವಸ್ಥೆಯಾಗಬೇಕು. ಎಷ್ಟೋ ಸಂದರ್ಭಗಳಲ್ಲಿ ಅಧ್ಯಕ್ಷರು ಆ ಮಟ್ಟದಿಂದ ಕೆಳಗೆ ಇದ್ದ ಸಂದರ್ಭದಲ್ಲಿ ಅವರನ್ನು ದುರುಪಯೋಗ ಮಾಡಿಕೊಳ್ಳುವುದು, ಅವರಿಗೂ ಸಹ ಜೀವನ ಸಾಗಿಸಬೇಕಾಗುತ್ತದೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇದರ ಬಗ್ಗೆ ಗಮನ ಹರಿಸಿದರೆ ಮಾತ್ರ ನಮ್ಮ ವಿಕೇಂದ್ರಿಕರಣದ ಕಲ್ಪನೆ ನಿಜವಾಗಿ ಅನುಷ್ಠಾನವಾಗಲು ಸಾಧ್ಯ. ಆ ದಿಸೆಯಲ್ಲಿ ಏನಾದರು ನಿರ್ದಿಷ್ಟವಾದ ಹೆಜ್ಜೆಯನ್ನು ಇಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಕಾರ್ಯದರ್ಶಿಗಳ ನೇಮಕ ಬಹಳ ಮುಖ್ಯವಾಗಿ ಆಗಬೇಕಾಗಿದೆ. ಹಲವಾರು ಭಾಗಗಳಲ್ಲಿ ಎರಡು ಮೂರು ಪಂಚಾಯಿತಿಗಳಿಗೆ ಒಬ್ಬರು ಕಾರ್ಯದರ್ಶಿಗಳು ಇದ್ದಾರೆ. ಇದು ಕಾರ್ಯದರ್ಶಿಗಳಿಗೆ ಅನುಕೂಲವನ್ನು ಮಾಡಿಕೊಟ್ಟಂತೆ ಆಗುತ್ತದೆ. ಯಾವುದಾದರೂ ಒಂದು ಪಂಚಾಯಿತಿಯಲ್ಲಿ ಕೇಳಿದರೆ ಅವರು ಇನ್ನೊಂದು ಪಂಚಾಯಿತಿಯಲ್ಲಿದ್ದಾರೆ, ಆ ಪಂಚಾಯಿತಿಯಲ್ಲಿದ್ದರೆ ಇನ್ನೊಂದು ಪಂಚಾಯಿತಿಯಲ್ಲಿ ಇರಲಿಲ್ಲ ಎಂದು ಹೇಳುವಂಥದ್ದು ಆಗುತ್ತದೆ. ನಮ್ಮ ಭಾಗದಲ್ಲಿ ಎರಡು ಮೂರು ಪಂಚಾಯಿತಿಗಳಿಗೂ ಒಬ್ಬ ಕಾರ್ಯದರ್ಶಿ ಇರುವುದನ್ನು ನೋಡುತ್ತಿದ್ದೇವೆ. ಕಾರ್ಯದರ್ಶಿಗಳ ಅಧಿಕಾರ ದುರುಪಯೋಗಕ್ಕೆ ಜನರಿಂದ ತಪ್ಪಿಸಿಕೊಳ್ಳಲು, ಸಾರ್ವಜನಿಕ ಕೆಲಸದಿಂದ ದೂರ ಹೋಗಲು ಇದರಿಂದ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಎಲ್ಲ ಪಂಚಾಯಿತಿಗಳಿಗೂ ಕಾರ್ಯದರ್ಶಿಗಳ ನೇಮಕ ಕಡ್ಡಾಯವಾಗಿ ಆಗಬೇಕು. ಪಂಚಾಯಿತಿ ವ್ಯವಸ್ಥೆಯ ಪರಿಕಲ್ಪನೆ ಪೂರ್ಣವಾಗಬೇಕೆಂದರೆ ಪಂಚಾಯಿತಿ ಕಾರ್ಯದರ್ಶಿ ವಾರದ ಎಲ್ಲ ದಿವಸಗಳಲ್ಲಿ ಅವರ ಕಛೇರಿಯಲ್ಲಿ ಲಭ್ಯವಿರಬೇಕು. ಆ ರೀತಿ ಆಗಬೇಕೆಂದರೆ ಎಲ್ಲಾ ಪಂಚಾಯಿತಿಗಳಲ್ಲಿ ಒಬ್ಬರು ಕಾರ್ಯದರ್ಶಿಗಳು ಇರಬೇಕು. ಕಾರ್ಯದರ್ಶಿಗಳ

ಕೊರತೆ ತುಂಬ ಇರುವುದರಿಂದ ತಕ್ಷಣವೇ ಇವರ ನೇಮಕಾತಿ ಆಗಬೇಕು. ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಬೇಕಾದಷ್ಟು ಯೋಜನೆಗಳು ಗ್ರಾಮಪಂಚಾಯಿತಿಯ ವತಿಯಿಂದ ಆಗಿದೆ. ಆದರೆ, ಇರುವ ಸೀಮಿತ ಅನುದಾನದಿಂದ ಬಿಲ್ಲನ್ನು ಪಾವತಿ ಮಾಡಲು ಆಗುತ್ತಿಲ್ಲ. ಆದ್ದರಿಂದ ಹಲವಾರು ಕಡೆಗಳಲ್ಲಿ ಅದನ್ನು ನಿಲ್ಲಿಸಬೇಕೆಂದು ಇಲ್ಲವೆ ಹೊಸ ಸಂಪರ್ಕವನ್ನು ಕೊಡುವುದನ್ನು ತಡೆಹಿಡಿಯುವ ಮಟ್ಟಕ್ಕೆ ಕೆ.ಇ.ಬಿ ರವರು ಹೋಗಿದ್ದಾರೆ. ಆದ್ದರಿಂದ ನನ್ನ ವಿನಂತಿ ಏನೆಂದರೆ ಕುಡಿಯುವ ನೀರಿನ ವಿಭಾಗದಲ್ಲಿ ವಿದ್ಯುತ್ ಬಿಲ್ಲನ್ನು ಜಿಲ್ಲಾಪಂಚಾಯಿತಿ ವತಿಯಿಂದ ನೇರವಾಗಿ ಪಾವತಿ ಮಾಡುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಸೆಪರೇಟ್ ಹೆಡ್‌ನ ಮೂಲಕ ವಿದ್ಯುತ್ ಬಿಲ್ಲನ್ನು ಪಾವತಿ ಮಾಡಲು ಬೇಕಾದ ಮೊತ್ತವನ್ನು ಸರ್ಕಾರ ಭರಿಸಲು ಕ್ರಮ ತೆಗೆದುಕೊಳ್ಳಬೇಕು. ಆ ರೀತಿ ಮಾಡಿದರೆ ಮಾತ್ರ ನಮ್ಮ ಕಲ್ಪನೆಯ ಪಂಚಾಯಿತಿರಾಜ್ ವ್ಯವಸ್ಥೆ ಬರಲು ಸಾಧ್ಯತೆ ಇದೆ. ಇನ್ನು ತಾಲ್ಲೂಕು ಪಂಚಾಯಿತಿ ವ್ಯವಸ್ಥೆ ಬಗ್ಗೆ ಹೇಳುವುದಾದರೆ, ನಮ್ಮ ಮೂರು ಸ್ಥರದ ವ್ಯವಸ್ಥೆಯಲ್ಲಿ ತಾಲ್ಲೂಕು ಪಂಚಾಯಿತಿಗೆ ಹೆಚ್ಚಿನ ಆದ್ಯತೆ ಇದೆ. ಆದರೆ ತಾಲ್ಲೂಕು ಪಂಚಾಯಿತಿಗೆ ಎಷ್ಟರಮಟ್ಟಿಗೆ ಜವಾಬ್ದಾರಿ ಇದೆ ಎಂಬ ಬಗ್ಗೆ ನಾವು ಆಲೋಚನೆ ಮಾಡಬೇಕಾಗಿದೆ. ತಾಲ್ಲೂಕು ಪಂಚಾಯಿತಿಯಲ್ಲಿ ಯಾವುದಾದರೂ ಕಾಮಗಾರಿ ಆಗಬೇಕಾದರೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ಗೆ ಜಿಲ್ಲಾಪಂಚಾಯಿತಿಯವರ ಹತ್ತಿರ ಹೋಗಬೇಕು. ಜಿಲ್ಲಾಪಂಚಾಯಿತಿಯಲ್ಲಿ ಎಷ್ಟೊ ದಿವಸ ಕಡತಗಳು ಕೊಳೆಯುತ್ತವೆ. ತಾಲ್ಲೂಕಿನ ಕಾರ್ಯ ನಿರ್ವಾಹಣ ಅಧಿಕಾರಿಗಳಿಗೆ ಯಾವುದೇ ವಿಚಾರದ ಬಗ್ಗೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಡುವ ಅಧಿಕಾರ ಇಲ್ಲ. ತಾಲ್ಲೂಕು ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ ಹೋಗಿಬರಬೇಕಾಗುತ್ತದೆ. ಇದರಲ್ಲಿ ವಿಕೇಂದ್ರೀಕರಣ ಆಗುವ ವ್ಯವಸ್ಥೆ ಮಾಡಬೇಕು. ಪ್ರತಿಯೊಂದು ಕೆಲಸಗಳಲ್ಲಿ, ಸಣ್ಣಪುಟ್ಟ ಕೆಲಸಗಳು ಆಗಬೇಕೆಂದರೆ ಜಿಲ್ಲಾಪಂಚಾಯಿತಿಗೆ ಹೋಗಿಬರುವ ವ್ಯವಸ್ಥೆ ನಿಲ್ಲಬೇಕು. ಒಂದು ತಾಲ್ಲೂಕಿನ ಜವಾಬ್ದಾರಿ ಇರುವ ಅಧಿಕಾರಿಗೆ ಒಂದು ನಿರ್ದಿಷ್ಟ ಮೊತ್ತದ ಕಾಮಗಾರಿಗೆ, ಅದು ಐವತ್ತು ಸಾವಿರದ ಒಳಗಡೆ ಇರಬಹುದು, ಒಂದು ಲಕ್ಷದ ಒಳಗಿನ ಕಾಮಗಾರಿ ಇರಬಹುದು ಆ ಕಾಮಗಾರಿಯನ್ನು ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟು ಮಾಡಿಸುವ ಜವಾಬ್ದಾರಿಯನ್ನು ಅವರಿಗೆ ಕೊಡಬೇಕು. ದೊಡ್ಡ ಮೊತ್ತದ್ದಾದರೆ ಹೆಚ್ಚು ಜವಾಬ್ದಾರಿಗಳು ಇರುತ್ತದೆ. ಜಿಲ್ಲಾಪಂಚಾಯಿತಿಯಲ್ಲಿ ಇಂಜಿನಿಯರಿಂಗ್ ವಿಭಾಗ ಇದೆ. ತಾಂತ್ರಿಕವಾಗಿ ಪರಿಶೀಲನೆ ಮಾಡಲು ಸಹಾಯಕ ಅಭಿಯಂತರುಗಳು ಇರುವುದನ್ನು ನೋಡುತ್ತಿದ್ದೇವೆ. ಇದರಿಂದ ನಾವು ಅಲ್ಲಲ್ಲಿ ಓಡಾಟ ಮಾಡಲು, ಸಮಯದ ಪರಿಪಾಲನೆ ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ವಿನಂತಿಸುವೆ. ತಾಲ್ಲೂಕು ಪಂಚಾಯಿತಿಗೆ ಸಂಬಂಧಪಟ್ಟಂತೆ ಕಾರ್ಯನಿರ್ವಾಹಣಾಧಿಕಾರಿಗಳ ಮೇಲೆ ಜವಾಬ್ದಾರಿ ಇದ್ದರು ಸಹ ಇಲಾಖೆಗಳು ಒಂದೊಂದು ಕಡೆ ಇರುತ್ತದೆ. ತಾಲ್ಲೂಕು ಪಂಚಾಯಿತಿಗೆ ಸಂಬಂಧಪಟ್ಟಂತೆ,

ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಈ ರೀತಿ ಬೇರೆ ಬೇರೆ ಇಲಾಖೆಗಳು ಒಂದೆಡೆ ಇರುವುದಿಲ್ಲ. ಬೇರೆ ಬೇರೆ ಕಡೆ ಅದು ಇರುತ್ತದೆ. ಆದ್ದರಿಂದ ಆ ಇಲಾಖೆಗಳ ಅಧಿಕಾರಿಗಳು ಯಾವಾಗಲೂ ತಾಲ್ಲೂಕು ಪಂಚಾಯಿತಿಯ ಕಾರ್ಯವ್ಯಾಪ್ತಿಗೆ ಲಭ್ಯವಾಗುವುದು ಬಹಳ ಕಡಿಮೆ. ಸಾಮಾನ್ಯವಾಗಿ ತಾಲ್ಲೂಕು ಪಂಚಾಯಿತಿಗೆ ಸಂಬಂಧಪಟ್ಟಂತೆ ಬರುವ ಎಲ್ಲಾ ಇಲಾಖೆಗಳು ಒಂದೆ ಕಡೆಯಲ್ಲಿ ಇದ್ದರೆ ಎಲ್ಲ ಕಾರ್ಯಕಲಾಪಗಳನ್ನು ನೆರವೇರಿಸಲು ಸಾಧ್ಯವಾಗುತ್ತದೆ. ನಮ್ಮ ಮುಂದೆ ವಿಚಾರಗಳು ಇರಬೇಕು, ಅದರ ಮೂಲಕ ಅದರ ಅನುಷ್ಠಾನ ಮಾಡುವ ಪ್ರಯತ್ನಗಳು ಆಗಬೇಕು. ವಿಶೇಷವಾಗಿ ಸಮಾಜ ಕಲ್ಯಾಣ ಇಲಾಖೆ. ಬಹುಶಃ ಸಮಾಜ ಇಕಲ್ಯಾಣ ಇಲಾಖೆ ನಮ್ಮ ತಾಲ್ಲೂಕು ಪಂಚಾಯಿತಿಯ ಜೊತೆ ಎಲ್ಲ ಕೆಲಸಕಾರ್ಯಗಳನ್ನು ಮಾಡಬೇಕಾಗಿದೆ. ಆ ಇಲಾಖೆಯ ಅಧಿಕಾರಿಗಳು ನಮಗೆ ಲಭ್ಯವಿರುವ ನಿಟ್ಟಿನಲ್ಲಿ ಕ್ರಮವನ್ನು ತೆಗೆದುಕೊಂಡರೆ ನಮಗೆ ಎಲ್ಲ ರೀತಿಯಲ್ಲಿ ತಾಲ್ಲೂಕು ಪಂಚಾಯಿತಿಯ ಕಾರ್ಯಗಳು ಯಶಸ್ವಿಯಾಗಿ ನಡೆಯಲು ಸಾಧ್ಯವಾಗುತ್ತದೆ.

5-00 ಪಿ.ಎಂ

ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯತಿಗೆ ಸಂಬಂಧಪಟ್ಟ ಹಾಗೆ ತಾಲ್ಲೂಕುಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಲ್ಲಿ ಕೆಲಸಗಳು ನಿರೀಕ್ಷಿತ ಮಟ್ಟದಲ್ಲಿ ಫಲಕಾರಿ ಆಗುತ್ತಿಲ್ಲ. ಬಹುಶಃ ನಮಗೆಲ್ಲಾ ಗೊತ್ತಿದ್ದ ಹಾಗೆ ಮೂರನೆಯ ಒಂದಂಶ ಗ್ರಾಮ ಪಂಚಾಯತಿಯ ಅಧ್ಯಕ್ಷರುಗಳು ರೊಟೇಶನ್ ಸಿಸ್ಟಂನಲ್ಲಿ ಅವರು ತಾಲ್ಲೂಕು ಪಂಚಾಯತಿಯ ಸಮಿತಿ ಸಭೆಗೆ ಬರುವಂತಹ ಒಂದು ವ್ಯವಸ್ಥೆಗಳು ಇರುತ್ತವೆ. ಎಲ್ಲಾ ಸಭೆಗಳಿಗೆ ಅವರಿಗೆ ಹಾಜರು ಆಗಲಿಕ್ಕೆ ಅವಕಾಶಗಳು ಇರುವುದಿಲ್ಲ. ಈ ಒಂದು ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸಬೇಕು ಎಂದು ಹೇಳಿದರೆ ಬಹುಶಃ ಕನಿಷ್ಟ ಎರಡು ತಿಂಗಳಿಗೊಮ್ಮೆ ಮೂರು ತಿಂಗಳಿಗೊಮ್ಮೆಯಾದರೂ ಕೂಡ ತಾಲ್ಲೂಕು ಪಂಚಾಯತ್‌ನಲ್ಲಿ ಎಲ್ಲ ಗ್ರಾಮ ಪಂಚಾಯತಿಯ ಅಧ್ಯಕ್ಷರುಗಳನ್ನು ಒಟ್ಟಿಗೆ ಸೇರಿಸಿ ಆ ಗ್ರಾಮ ಪಂಚಾಯತಿಯ ಒಂದು ವಿಶೇಷ ಒತ್ತು ಕೊಡುವ ರೀತಿಯಲ್ಲಿ ಎಲ್ಲಾ ಕಾರ್ಯಕ್ರಮಗಳೂ ಒಂದೇ ರೀತಿಯಲ್ಲಿ ನಡೆಯುವಂತಹ ವ್ಯವಸ್ಥೆಗಳು ಆಗುವಂತಹ ರೀತಿಯಲ್ಲಿ ಅವರಿಗೆ ಒಂದು ಯೋಜನೆಯನ್ನು ತಿಳಿಸುವಂತಹ ಕೆಲಸಗಳು ಆಗಬೇಕು. ಅನೇಕ ಕಡೆಗಳಲ್ಲಿ ತಾಲ್ಲೂಕು ಪಂಚಾತ್‌ನಲ್ಲಿರುವಂತಹ ಯೋಜನೆಗಳೇನು ಎಂದು ಗ್ರಾಮ ಪಂಚಾಯತ್‌ನವರಿಗೆ ಗೊತ್ತಿಲ್ಲ. ಗ್ರಾಮ ಪಂಚಾಯತಿಯಲ್ಲಿ ಏನೆಲ್ಲ ಅನುಷ್ಠಾನ ಆಗಬೇಕು ಎಂದು ಹೇಳುವಂತಹ ಪೂರ್ತಿ ಮಾಹಿತಿ ಬರುವುದಿಲ್ಲ. ಈ ವಿಚಾರಗಳಲ್ಲಿ ಒಂದು ಹೊಂದಾಣಿಕೆ ಬೇಕು. ಏಕೆಂದರೆ ಪಂಚಾಯತ್ ವ್ಯವಸ್ಥೆಯ ಪರಿಕಲ್ಪನೆಯೇ ಹಾಗೆ. ಈ ಮೂರು ತರಹದ ಪಂಚಾಯತ್ ವ್ಯವಸ್ಥೆಯಲ್ಲಿ ಮೇಲಿನಿಂದ ಕೆಳಗಿನವರೆಗೆ ಒಬ್ಬರಿಗೊಬ್ಬರು ಹೊಂದಾಣಿಕೆಯಿಂದ ಕೆಲಸ ಮಾಡಿದರೆ ಚೆನ್ನ.

ಶ್ರೀ ಎಂ.ವೈ.ಘೋರ್ಪಡೆ: ಛೇರ್ಮನ್ ಅವರು ಮೂರರಲ್ಲಿ ಒಂದು ಭಾಗ ಎಕ್ಸ್-ಅಫಿಷಿಯೋ ಮೆಂಬರ್ ಆಗಿರಬೇಕು ಎಂದು ಮಾಡಿದ್ದೇವೆ. ಉದ್ದೇಶ ಅದೇ ಸಂಪರ್ಕ ಇರಲಿ ಎಂದು ಮಾಡಿದ್ದೇವೆ.

ಶ್ರೀ ಡಿ.ವಿ.ಸದಾನಂದಗೌಡ: ನಾನು ಅದೇ ಮೂರನೆಯ ಅಂಶ ಹೇಳುವುದಕ್ಕೆ ಹೊರಟ್ಟಿದ್ದೇನೆ. ಆದರೆ ಎರಡು ಮಾರು ತಿಂಗಳಿಗೊಮ್ಮೆ ಎಲ್ಲಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರನ್ನು ಒಟ್ಟಿಗೆ ಸೇರಿಸಿ ಆ ತಾಲ್ಲೂಕಿಗೆ ಬಂದಂತಹ, ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮುಂತಾದ ಯೋಜನೆಗಳನ್ನು ಸಮಿತಿಗಳ ಮುಖಾಂತರ ನಾವು ವಿತರಣೆ ಮಾಡುವಂತಹ ಕೆಲಸಗಳನ್ನು ಮಾಡುತ್ತೇವೆ. ಈ ಒಂದು ಕಾರ್ಯಕ್ರಮಗಳು ಸಮಗ್ರವಾಗಿ ಆ ತಾಲ್ಲೂಕಿನಲ್ಲಿರುವಂತಹ ಎಲ್ಲ ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೆ ಗೊತ್ತಿರಬೇಕು. ನಮ್ಮ ತಾಲ್ಲೂಕಿಗೆ ಇಷ್ಟು ಮನೆಗಳು ಬಂದಿವೆ. ಇಷ್ಟು ಹಣ ಬಿಡುಗಡೆ ಆಗಿದೆ ಇಷ್ಟು ಹಣವನ್ನು ಪಡೆದುಕೊಳ್ಳಬೇಕು ಎಂದು ಗೊತ್ತಿರಬೇಕು. ಏನಾಗುತ್ತದೆ ಎಂದು ಹೇಳಿದರೆ ಯಾರು ಸ್ವಲ್ಪ ಬಲಾಢ್ಯ ಅಧ್ಯಕ್ಷರು ಇದ್ದಾರೆ, ಆ ಬಲಾಢ್ಯ ಅಧ್ಯಕ್ಷ ತಾಲ್ಲೂಕು ಪಂಚಾಯತಿಯಲ್ಲಿ ತನ್ನೆಲ್ಲಾ ಕೆಲಸಗಳನ್ನು ಮಾಡಿಕೊಳ್ಳುತ್ತಾನೆ. ಯಾರಾದರೂ ಒಂದು ಗ್ರಾಮ ಪಂಚಾಯತ್‌ನಲ್ಲಿನ ಅಧ್ಯಕ್ಷ ಸ್ವಲ್ಪ ಬಲಾಢ್ಯ ಅಲ್ಲದಿರುವಂತಹವನಿಗೆ ಎಲ್ಲ ಕೆಲಸಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ರಾಜಕೀಯವಾಗಿ ಕೂಡ ಯಾರು ಬಲಾಢ್ಯವಾಗಿ ತಾಲ್ಲೂಕ ಪಂಚಾಯತಿಯ ಅಧ್ಯಕ್ಷರಿಗೆ ಬೇಕಾದವರು ಇಲ್ಲಿದ್ದರೆ ಕೂಡಲೇ ಅವರು ತಕ್ಷಣ ಕೆಲಸಗಳನ್ನು ಮಾಡಿಕೊಳ್ಳುತ್ತಾರೆ. ಆದರೆ ಸಮಗ್ರ ಚಿಂತನೆಗಳು ಇರಬೇಕು. ಎಲ್ಲ ಗ್ರಾಮ ಪಂಚಾಯತಿಗಳಲ್ಲೂ ಮೂಲಭೂತವಾದಂತಹ ವ್ಯವಸ್ಥೆಗಳು ಸಮರ್ಪಕವಾಗಿ ಜಾರಿಗೆ ಬರಬೇಕು ಎಂದು ಹೇಳಿದ್ದರೆ ಬಹುಶಃ ನಾವು ಈ ಎಲ್ಲ ವಿಚಾರಗಳನ್ನು ಆಗಾಗ ತಲುಪಿಸುವಂತಹ ಕೆಲಸಗಳು ಆಗಬೇಕು. ತಾವೊಂದು ಮಾತನ್ನು ಗ್ರಾಮ ಸಭೆಯ ಬಗ್ಗೆ ಮೊನ್ನೆ ಹೇಳಿದಿರಿ. ನಮಗೆ ನಿಜವಾಗಿ ತುಂಬಾ ಸಂತೋಷವಾಗಿದೆ. ಗ್ರಾಮ ಸಭೆಗಳಿಗೆ ಹೆಚ್ಚಿನ ಒತ್ತುಗಳನ್ನು ಕೊಡುವಂತಹದು, ಆ ಗ್ರಾಮ ಸಭೆಗಳನ್ನು ನಿರ್ದಿಷ್ಟ ಅವಧಿಯಲ್ಲಿ ಮಾಡುವಂತಹದು ಆಗಬೇಕು. ಆ ಗ್ರಾಮದಲ್ಲಿರುವಂತಹ ಎಲ್ಲರಿಗೆ ಕೂಡ ಗ್ರಾಮ ಸಭೆಯ ಮಾಹಿತಿಗಳನ್ನು ಕೊಡುವುದರ ಮುಖಾಂತರ ಅದರಲ್ಲಿ ಪಾರ್ಟಿಸಿಪೇಟ್ ಮಾಡಲಿಕ್ಕೆ ಒಂದು ಅವಕಾಶವನ್ನು ಕಲ್ಪನೆ ಮಾಡಿಕೊಡುವಂತಹದು ಆಗಬೇಕು. ಇವತ್ತು ಕಾಟಾಚಾರಕ್ಕೆ ಗ್ರಾಮ ಸಭೆಗಳು ಆಗುತ್ತಿವೆ ಎಂದು ನಮಗೆಲ್ಲಾ ಗೊತ್ತಿದೆ. ಊರಿನಲ್ಲಿ ಗ್ರಾಮ ಸಭೆ ವಿಚಾರ ಕೇಳಿದಾಗ ಒಂದು ನಿರ್ದಿಷ್ಟ ಜನಗಳನ್ನು ಕೋರಂಗೋಸ್ಕರ ಸೇರಿಸುವುದು. ಅದೂ ಕೂಡ ಯಾರು ಆ ಒಂದು ಮಧ್ಯವರ್ತಿಗಳು ಎಂದು ಹೇಳುವಂತಹ ಜನ ಹಿಂದಿನಿಂದ ಬಂದವರು ಇರುತ್ತಾರೆ. ಅವರಿಗೆ ಇದೆಲ್ಲಾ ಗೊತ್ತಿರುತ್ತದೆ. ಯಾರ್ಯಾರಿಗೆ ಮನೆ ಕೊಟ್ಟರೆ ಏನೆಲ್ಲಾ ಮಾಡಬಹುದು. ಯಾರ್ಯಾರಿಗೆ ಮನೆ ಕೊಟ್ಟರೆ ಯಾವ ರೀತಿ ರಾಜಕೀಯ ಬೇಳೆ ಬೇಯಿಸಿಕೊಳ್ಳಬಹುದು ಇಂತಹದು

ಇರುತ್ತದೆ. ಇದು ಒಂದೊಂದು ಪಾರ್ಟಿಗೆ ಸೀಮಿತ ಎಂದಲ್ಲ. ಎಲ್ಲ ಪಾರ್ಟಿಗೆ ಸೀಮಿತ ಆಗಿರುವಂತಹದು. ಈ ರೀತಿಯ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಗ್ರಾಮ ಸಭೆಗಳು ನಡೆಯುತ್ತಿದ್ದಾವೆ. ಇದಕ್ಕೆ ವಿಶೇಷ ಒತ್ತುಗಳನ್ನು ಮೊನ್ನೆ ತಾವು ಹೇಳಿದ ಹಾಗೆ ಕೊಡಬೇಕು. ಗ್ರಾಮಸಭೆಯಲ್ಲಿ ಕನಿಷ್ಟ ಕೋರಂ ಸಂಖ್ಯೆಯನ್ನು ಹೆಚ್ಚಿಸುವಂತಹ ಕೆಲಸಗಳನ್ನು ಮಾಡಬೇಕು. ಮತ್ತು ಎಲ್ಲ ಭಾಗದ ಜನರೂ ಅದರಲ್ಲಿ ಸೇರುವಂತಹ ಕೆಲಸಗಳಿಗೆ ಹೆಚ್ಚು ಒತ್ತು ಕೊಟ್ಟರೆ ಮಾತ್ರ ಗ್ರಾಮ ಪಂಚಾಯತ್‌ನ ವ್ಯವಸ್ಥೆ ಸರಿಯಾಗಿ ನಡೆಯಲಿಕ್ಕೆ ಸಾಧ್ಯ. ಇದಕ್ಕಾಗಿ ಗ್ರಾಮ ಸಭೆ, ಗ್ರಾಮ ಪಂಚಾಯತ್ ಮತ್ತು ತಾಲ್ಲೂಕುಗಳಲ್ಲಿ ನಿರ್ದಿಷ್ಟ ಸಂಬಂಧಗಳನ್ನು ಹೆಚ್ಚಿಸುವಂತಹ ಪ್ರಯತ್ನಗಳಿಗೆ ಹೆಚ್ಚು ಒತ್ತು ಕೊಡುವಂತಹ ಕೆಲಸಗಳು ಆಗಬೇಕು ಎಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಜಿಲ್ಲಾ ಪಂಚಾಯತ್‌ಗಳ ವಿಚಾರ. ಬಹುಶಃ ಜಿಲ್ಲಾ ಪಂಚಾಯತ್‌ನಲ್ಲಿ ಕೇಂದ್ರೀಕೃತ ವ್ಯವಸ್ಥೆ ಇದೆ. ಯಾವುದೇ ವ್ಯವಸ್ಥೆಗಳು ಆದರೂ ಕೂಡ ಜಿಲ್ಲಾ ಪಂಚಾಯತಿಗೆ ಹೋಗಿ ಅಲ್ಲಿಂದಲೇ ಎಲ್ಲಾ ವ್ಯವಸ್ಥೆಗಳೂ ಆಗುವಂತಹ ಸಂದರ್ಭಗಳು ಈಗ ಆ ರೀತಿ ಇದೆ, ಈಗಿನ ವ್ಯವಸ್ಥೆಗಳು. ಈಗ ಯಾವುದೇ ಕಾಮಗಾರಿಗಳು ಇರಬಹುದು ಜಿಲ್ಲಾ ಪಂಚಾಯತ್‌ನಲ್ಲಿ ಹೋಗುವುದು, ಅಲ್ಲ ಆಗಿ ಬರುವಂಥದು ಮತ್ತೊಂದನ್ನೆಲ್ಲಾ ನಾವು ನೋಡುತ್ತಿದ್ದೇವೆ. ಇದರ ಬಗ್ಗೆ ಸ್ವಲ್ಪ ಹೆಚ್ಚಿನ ಕಾಳಜಿಯನ್ನು ವಹಿಸಬೇಕಾಗಿದೆ. ವಿಕೇಂದ್ರೀಕರಣದ ಮೂಲಭೂತ ಉದ್ದೇಶ ಯಾರು ಆ ಕೊನೆಯ ಸ್ಥರದ ವ್ಯವಸ್ಥೆ ಇದೆ? ಆ ವ್ಯವಸ್ಥೆಗೆ ಹೆಚ್ಚಿನ ಒತ್ತನ್ನು ಕೊಡುವಂತಹದು. ಆ ಹೆಚ್ಚಿನ ಒತ್ತನ್ನು ಕೊಡುವಂತಹ ಸಂಗತಿಗಳಿಗೆ ಬೇಕಾಗಿ ಹಲವಾರು ವಿಚಾರಗಳನ್ನು ನಾವು ಮೇಲ್ಮಟ್ಟದಿಂದ ಕೆಳಮಟ್ಟಕ್ಕೆ ಹಂತಹಂತವಾಗಿ ತಲುಪಿಸುವಂತಹ ಕೆಲಸಗಳನ್ನು ಮಾಡಬೇಕು. ಇವತ್ತು ಬೇರೆ ಬೇರೆ ಜಿಲ್ಲಾ ಪಂಚಾಯತ್‌ಗಳಲ್ಲಿ ಅಧಿಕಾರಿಗಳು ಹೇಗೆ ಇರುತ್ತಾರೆಂದು ನಿಮಗೆ ಗೊತ್ತಿದೆ. ಅಧಿಕಾರಿಗಳ ಪರಿಸ್ಥಿತಿ ಬಗ್ಗೆ ಎಷ್ಟೋ ಸಂದರ್ಭಗಳಲ್ಲಿ ಹೇಳಿದ್ದೇನೆ. ನಾನು ಒಂದೆರಡು ಉದಾಹರಣೆಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಅಧಿಕಾರಿಗಳ ಕಪಿಮುಷ್ಟಿಯಲ್ಲಿ ಅಧಿಕಾರ ಎಷ್ಟರಮಟ್ಟಿಗೆ ಇರುತ್ತದೆ ಎಂದರೆ ಅಲ್ಲಿ ಯಾವುದೇ ಒಂದು ಕಡತಗಳು ಕೂಡ ಅಧಿಕಾರಿಗಳನ್ನು ಅಲ್ಲಿ ಯಾವುದಾದರೂ ಒಂದು ರೀತಿ ನೋಡದೇ ಇದ್ದರೆ ಅಲ್ಲಿ ಕೆಲಸ ಕಾರ್ಯಗಳು ಆಗದಂತಹ ಸಂದರ್ಭಗಳು ತುಂಬಾ ಕಡೆಗಳಲ್ಲಿದೆ. ಅಧ್ಯಕ್ಷರ ಮಾತನ್ನೂ ಮೀರಿ ಹೋಗುವಂತಹ ವ್ಯವಸ್ಥೆಗಳು ಇವೆ. ಮತ್ತು ಅಧಿಕಾರಿಗಳಿಗೆ ಚೆನ್ನಾಗಿ ಗೊತ್ತು. ಯಾವ ವಿಚಾರದ ಮೇಲೆ ಏನು ಅಬ್ಜೆಕ್ಷನ್ಸ್ ಹಾಕಬೇಕು? ಏನು ನೋಟ್ ಹಾಕಬೇಕು ಎಂದು ಹೇಳುವಂತಹದ್ದೆಲ್ಲಾ ಗೊತ್ತಿದ್ದು ಆ ಕೆಲಸಗಳನ್ನು ಮಾಡುವಂತಹದ್ದಾಗಿದೆ. ಇದಕ್ಕೇ ಹೆಚ್ಚಿನ ಒತ್ತು ಆಗಬೇಕು. ನಾನು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನಲ್ಲಿ ಒಂದು ಉದಾಹರಣೆಯನ್ನು ಕೊಡುತ್ತೇನೆ. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನಲ್ಲಿ ಒಂದು ಅವ್ಯವಹಾರ ನಡೆದದ್ದು ತಮ್ಮ ಗಮನಕ್ಕೆ ಬಂದಿರಬಹುದು ಎಂದು ನಾನು

ಭಾವಿಸುತ್ತಿದ್ದೇನೆ. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ ವಿವಿಧ ಇಲಾಖೆಗಳ ಅವಶ್ಯಕ ಸಾಮಗ್ರಿಗಳ ಖರೀದಿಯಲ್ಲಿ ಅವ್ಯವಹಾರ ನಡೆದಿರುವ ಆರೋಪದ ಹಿನ್ನಲೆಯಲ್ಲಿ ತನಿಖೆಗೆ ರಚನೆ ಆಗಿದ್ದ ಸದನ ಸಮಿತಿ ಮೂರು ವರ್ಷಗಳ ನಂತರ ವರದಿಯನ್ನು ಸಲ್ಲಿಸಿದೆ. ಈಗ ವರದಿ ಸರ್ಕಾರಕ್ಕೆ ಬಂದಿದೆ. ಬಹುಶಃ ಆ ವರದಿ ಏನಾಗಿದೆ ಎಂದು ನನಗೆ ಗೊತ್ತಿಲ್ಲ? ಈಗಾಗಲೇ ತಮ್ಮ ಗಮನಕ್ಕೆ ಬಂದಿರಬೇಕು? ಎಷ್ಟರಮಟ್ಟಿಗೆ ಅವ್ಯವಹಾರಗಳು ಆಗಿದೆ ಎಂದರೆ ಖರೀದಿ ಸಮಿತಿಯನ್ನು ಏನೋ ರಚನೆ ಮಾಡಿದೆವು. ಅಧಿಕಾರಿಗಳೇ ಖರೀದಿ ಮಾಡುವಂತಹ ಒಂದು ವ್ಯವಸ್ಥೆ ಸುಮಾರು ವರ್ಷದವರೆಗೆ ನಡೆದಿದೆ. ಈ ಒಂದು ವ್ಯವಸ್ಥೆಯಲ್ಲಿ ಇಡೀ ಅವ್ಯವಹಾರ ಆದಂತಹದನ್ನು ತಮ್ಮ ಮುಂದೆ ಇಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಬಹುಶಃ ಇಂತಹದಕ್ಕೆ ಇತಿಶ್ರೀ ಹಾಕಬೇಕು. ಏಕೆಂದರೆ ಪಂಚಾಯತ್ ವ್ಯವಸ್ಥೆಯಲ್ಲಿ ಮೂಲಭೂತವಾಗಿ ಅಧಿಕಾರದ ವಿಕೇಂದ್ರೀಕರಣ ಎಂದು ಹೇಳಿದರೆ ಅಧಿಕಾರಿಗಳು ಕೆಲಸವನ್ನು ಮಾಡುವಂತಹದು.

ಯಾರು ಜನಪ್ರತಿನಿಧಿಗಳು ಇದ್ದಾರೆ. ಅವರು ಆ ಕೆಲಸಗಳು ಯಾವ ರೀತಿ ಆಗಬೇಕು ಎಂದು ಹೇಳುವಂತಹ ಭಾವನೆಯನ್ನು ತೋರಿಸಿಕೊಡುವಂತಹ ಕೆಲಸಗಳನ್ನು ಮಾಡಬೇಕಾಗಿದೆ. ಬಹುಶಃ ಈಗ ಎಲ್ಲಾ ಇಲಾಖೆಗಳಲ್ಲಿ ಕೂಡ ಈ ಒಂದು ಅವ್ಯವಹಾರ ಆಗಿದೆ. ಆದರೆ ಈ ಅವ್ಯವಹಾರ ಆದರೂ ಕೂಡ, ಆ ಅವ್ಯವಹಾರ ಏಕೆ ಆಗಿದೆ? ಏನಾಗಿದೆ? ಆ ಅವ್ಯವಹಾರ ಮಾಡಿದವರ ಮೇಲೆ ಇನ್ನೂ ಕೂಡ ಯಾವುದೇ ಒಂದು ರೀತಿಯ ಕ್ರಮವನ್ನು ಜರುಗಿಸಲಿಲ್ಲ. ಏಕೆ ಇನ್ನೂ ಕೂಡ ಜರುಗಿಸಿಲ್ಲ. ಹಲವಾರು ಅಧಿಕಾರಿಗಳು ಅಲ್ಲಿಂದ ವರ್ಗಾವಣೆ ಆಗಿ ಬೇರೆ ಕಡೆಗೆ ಹೋಗುವಂತಹದೆಲ್ಲಾ ನಡೆದಿದೆ. ''ಸದನ ಸಮಿತಿಯು ತನಿಖೆ ಮಾಡಿದಾಗ ಹಣದ ವ್ಯವಹಾರದಲ್ಲಿ ಆದ ನ್ಯೂನತೆಯನ್ನು ಪರಿಶೀಲಿಸಿ ಕೆಲವು ಇಲಾಖೆ ಜಿಲ್ಲಾ ಪಂಚಾಯತಿಗೆ ಮರುಪಾವತಿಸಿದಂತೆಯೂ, ಕೆಲವನ್ನು ಆಕ್ಷೇಪವನ್ನಾಗಿ ವಿಂಗಡಿಸಿದ ವಿವರ ಎಲ್ಲ ಇಲಾಖೆಯಿಂದ ಇದೆ.'' ರೇಷ್ಮೆ ಇಲಾಖೆ ಇದೆ, ಕೃಷಿ ಇಲಾಖೆ ಇದೆ. ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆ ಇದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳೂ ಇವೆ. ಸುಮಾರು ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚು ಅವ್ಯವಹಾರ ಆದ ರೀತಿಯಲ್ಲಿ ಅಲ್ಲಿಯ ಖರೀದಿ ಸಮಿತಿಯಲ್ಲಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಈಗಾಗಲೇ ಅಲ್ಲಿ ಒಂದು ಸದನ ಸಮಿತಿ ನೇಮಕ ಆಗಿದೆ. ನೇಮಕ ಆಗಿ, ಅಲ್ಲಿನ ಅಧಿಕಾರಿಗಳು ಮಾಡಿದಂತಹ ಅವ್ಯವಹಾರಗಳನ್ನು ತಮ್ಮ ಗಮನಕ್ಕೆ ತಂದರು. ಆದರೆ ಇನ್ನೂ ಕೂಡ ಅದರ ಮೇಲೆ ಯಾವುದೇ ಕ್ರಮವನ್ನು ಜರುಗಿಸುವಂತಹ ಕೆಲಸಗಳು ಆಗಲಿಲ್ಲ. ಸಾಧಾರಣವಾಗಿ ಈ ರೀತಿ ಅವ್ಯವಹಾರಗಳು ಆದಾಗ ಆ ಅವ್ಯವಹಾರಗಳನ್ನು ಮಾಡಿದಂತಹ ಅಧಿಕಾರಿಗಳ ಮೇಲೆ ತಕ್ಷಣ ಒಂದು ಕ್ರಮಗಳನ್ನು ಜರುಗಿಸಿದರೆ ಮಾತ್ರ ಆ ಅಧಿಕಾರಿಗಳ ಮೇಲೆ ಕೂಡ ಹಿಡಿತ ಬರುತ್ತದೆ.

ಆ ಅಧಿಕಾರಿಗಳು ಕೂಡ ಆ ರೀತಿಯಲ್ಲಿ ಮುಂದೆ ಕೆಲಸ ಮಾಡತದ ಹಾಗೆ ಆಗುತ್ತದೆ. ಅಂದರೆ ಒಟ್ಟಾರೆ ಈ ಜಿಲ್ಲಾ ಪಂಚಾಯತ್ ಅಗತ್ಯತೆ ಮೀರಿ ನಡೆದಿರುವ ವೆಚ್ಚ, ವಸೂಲಾತಿ ಮತ್ತು ಆಕ್ಷೇಪಾರ್ಹವಾದ ಮೊತ್ತ ಈ ರೀತಿ ಇದೆ. ಜಿಲ್ಲಾ ಪಂಚಾಯಿತಿ ಕಛೇರಿಯದು - 6,51,932. ಕೃಷಿ ಇಲಾಖೆಯಲ್ಲಿ 1654. ರೇಷ್ಮೆ ಇಲಾಖೆ 4,19,822. ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆ 10,66,475. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ 8,07,600. ಸಾರ್ವಜನಿಕ ಶಿಕ್ಷಣ ಇಲಾಖೆ 51,99,053. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ 37,91,000. ತೋಟಗಾರಿಕೆ ಇಲಾಖೆ 7,22,000. ಪಶುಸಂಗೋಪನೆ ಇಲಾಖೆ 16,209. ಈ ರೀತಿ ಎಲ್ಲ ಇಲಾಖೆಯಲ್ಲಿ ಖರೀದಿಯಲ್ಲಿ ಅವ್ಯವಹಾರ. ಈ ಖರೀದಿ ಮಾಡಿರುವುದರಲ್ಲಿ ಪೂರ್ತಿ ಅವ್ಯವಹಾರದ ಬಗ್ಗೆ ಸದನದ ಒಂದು ಸಮಿತಿ ರಚನೆ ಆಗಿತ್ತು. ಮಾನ್ಯ ಈಗಿನ ಮಾಜಿ ಶಾಸಕರಾದಂತಹ ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಆಗಿತ್ತು. ಸದನದ ಆ ಸಮಿತಿಯ ವರದಿ ಸರ್ಕಾರಕ್ಕೆ ಮಂಡನೆ ಆಗಿದ್ದರೂ ಕೂಡ ಈತನಕ ಇದರ ಬಗ್ಗೆ ಯಾವುದೇ ಒಂದು ಕ್ರಮದ ವ್ಯವಸ್ಥೆಗಳು ಆಗಲಿಲ್ಲ. ಇದಾಗಬಾರದು ಇದನ್ನು ತಾವು ಗಂಭೀರವಾಗಿ ಪರಿಗಣನೆ ಮಾಡಬೇಕು. ಈ ಸದನ ಸಮಿತಿಯ ಏನೊಂದು ತನಿಖೆ ಬಂದಿದೆ ಅದರ ಮೇಲೆ ತಕ್ಷಣ ಕ್ರಮವನ್ನು ಜರುಗಿಸುವಂತಹ ಕೆಲಸಗಳನ್ನು ತಾವು ಮಾಡಬೇಕು ಎಂದು ಹೇಳುವಂತಹ ವಿನಂತಿಯನ್ನು ಕೂಡ ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಬಹುಶಃ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ. ಬಹುಶಃ ತಮಗೆಲ್ಲಾ ಗೊತ್ತಿದ್ದ ಹಾಗೆ ಬಳ್ಳಾರಿ ಜಿಲ್ಲಾ, ಪಂಚಾಯತ್ - 64 ಲಕ್ಷದ 'ಅದೃಶ್ಯ ಕಾಮಗಾರಿ' ಈ ರೀತಿ ಹಲವಾರು ಕಡೆ ಆಗಿದೆ. ಹಲವಾರು ಕಡೆ ಈ ರೀತಿಯ ಒಂದು ಅವ್ಯವಸ್ಥೆ ಆಗಿರುವುದನ್ನು ನಾವು ನೋಡುತ್ತಿದ್ದೇವೆ. ತಾವು ಹೇಳಿದಿರಿ, ಪಂಚಾಯತಿಯ ಕಾಮಗಾರಿಗಳಿಗೆ ಸಾರ್ವಜನಿಕ ತನಿಖೆ ಅಗತ್ಯ ಎಂದು ತಾವೇ ಹೇಳಿದಿರಿ. ತಾವು ಮಾರ್ಚ್ 29ಕ್ಕೆ ಹೇಳಿದಿರಿ. ಗ್ರಾಮ ಪಂಚಾಯತಿಗಳು ಕೈಗೊಳ್ಳುವ ಕಾಮಗಾರಿಗಳು ಸತತವಾಗಿ ಸಾರ್ವಜನಿಕ ತನಿಖೆಗೆ ಒಳಪಡುವುದು ಅಗತ್ಯ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಶ್ರೀ ಎಂ.ವೈ.ಘೋರ್ಪಡೆ ಅವರು ಬುಧವಾರ ವಿಧಾನ ಸಭೆಯಲ್ಲಿ ತಿಳಿಸಿದರು ಎಂದು ಹೇಳುವಂತಹದನ್ನು ತಾವು ಹೇಳಿದಿರಿ. ಗ್ರಾಮ ಪಂಚಾಯತಿಯ ವ್ಯವಸ್ಥೆ ಏನಿದೆ ಅದೆಲ್ಲಾ ಪಾರದರ್ಶಕವಾಗಿರುವಂತಹ ರೀತಿಯಲ್ಲಿ ಆಗಬೇಕು ಎಂದು ಹೇಳುವಂತಹದಕ್ಕೆ ತಾವು ಒತ್ತು ಕೊಟ್ಟಿದ್ದೀರಿ. ಈ ರೀತಿ ಪಾರದರ್ಶಕ ಆಗಬೇಕು ಎಂದು ಹೇಳಿದರೆ ಎಲ್ಲೆಲ್ಲಿ ಅವ್ಯವಹಾರ ಆಗಿದೆ? ಆ ಅವ್ಯವಹಾರಗಳನ್ನು ತನಿಖೆಗಳನ್ನು, ಸೂಕ್ತ ಕ್ರಮಗಳನ್ನು ತಕ್ಷಣ ಕೈಗೆತ್ತಿಕೊಳ್ಳುವಂತಹದು ಆಗಬೇಕು. ಜನರಿಗೆ ಸೂಚನೆ ಹೋಗಬೇಕು. ಹೊಸ ಪಂಚಾಯತ್ ವ್ಯವಸ್ಥೆ ಬರುತ್ತದೆ, ಮುಂದಿನ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಗಳು ಬರುತ್ತವೆ. ಇದರಲ್ಲಿ ಕೂಡ ಒಳ್ಳೆಯ ರೀತಿಯ ವ್ಯವಸ್ಥೆಗಳು ಆಗಬೇಕು ಎಂದು ಹೇಳುವಂತಹ ವಿನಂತಿಯನ್ನು ಕೂಡ

ಈ ಸಂದರ್ಭದಲ್ಲಿ ಮಾಡಿಕೊಳ್ಳುತ್ತಿದ್ದೇನೆ.

ಒಟ್ಟಾರೆಯಾಗಿ ಈ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೂಲಭೂತ ಸೌಲಭ್ಯಗಳಿಗೆ ಹೆಚ್ಚು ಒತ್ತು ಕೊಡುವಂತಹ ಕೆಲಸಗಳಾಗಬೇಕು. ಸಾಧಾರಣವಾಗಿ ನಾವು ಎಲ್ಲಾ ಕಡೆ ನೋಡಿದಂತೆ ಪ್ರಚಾರ ಗಿಟ್ಟಿಸಿಕೊಳ್ಳುವಂತಹ ಹಲವಾರು ಕೆಲಸ ಕಾರ್ಯಗಳಿಗೆ ಮಾತ್ರ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತಿದೆ. ಈ ರೀತಿ ಆಗಬಾರದು. ಇವತ್ತು ಸ್ವಾತಂತ್ರ್ಯ ಸಿಕ್ಕಿದ 50 ವರ್ಷಗಳ ನಂತರವೂ ಕೂಡ ನಮ್ಮ ಪರಿಕಲ್ಪನೆಯ ಆಧಾರದಲ್ಲಿ ಇವತ್ತು ಪಂಚಾಯತ್ ರಾಜ್ ವ್ಯವಸ್ಥೆ ಸರಿಯಾಗಿ ನಡೆಯುತ್ತಿಲ್ಲ. ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ತಾವು ಹೇಳಿದ ರೀತಿಯಲ್ಲಿ ಇವತ್ತು ಮನೆಗಳು ಇರಬಹುದು, ಕುಡಿಯುವ ನೀರು ಇರಬಹುದು ಅಥವಾ ಶೌಚಾಲಯದ ವ್ಯವಸ್ಥೆಗಳು ಇರಬಹುದು, ಇದಕ್ಕೆ ಹೆಚ್ಚು ಒತ್ತು ಕೊಡುವಂತಹ ವ್ಯವಸ್ಥೆಗಳಾಗಬೇಕು. ಆ ದಿಸೆಯಲ್ಲಿ ನಮ್ಮ ಈ ಒಂದು ಆಯವ್ಯಯದಲ್ಲಿ ಹೆಚ್ಚಿನ ಒತ್ತು ಕೊಡಬೇಕೆಂಬ ಮಾತನ್ನು ನಾನು ಇಲ್ಲಿ ಒತ್ತಿ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ನಮ್ಮ ಜಿಲ್ಲೆಯವರೇ ಆದಂತಹ ಮಾನ್ಯ ರಮಾನಾಥರೈ ಅವರು ಈಗ ತಾನೇ ಇಲ್ಲಿದ್ದರು. ಮೀನುಗಾರಿಕೆ ವಿಷಯ ಮಾತನಾಡಬೇಕೆಂದರೆ ಈಗ ತಾನೇ ಇಲ್ಲಿದ್ದ ಅವರು ಎಲ್ಲಿಗೆ ಹೋದರೋ ಗೊತ್ತಾಗುತ್ತಿಲ್ಲ. ಮೀನುಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, ಬಹುಶಃ ಕರ್ನಾಟಕ ರಾಜ್ಯದ ಅತ್ಯಂತ ದೊಡ್ಡದಾದಂತಹ ಉತ್ಪಾದನೆ ತರುವಂತಹ ವ್ಯವಸ್ಥೆ ಮೀನುಗಾರಿಕೆ ಇಲಾಖೆಯಲ್ಲಿದೆ. ಆದರೆ ಯಾವಾಗ ನೋಡಿದರೂ ಕೂಡ ಮೀನುಗಾರಿಕೆ ಇಲಾಖೆಗೆ ನಾವು ಎಷ್ಟು ಒತ್ತು ಕೊಡಬೇಕಾಗಿತ್ತೋ ಅಷ್ಟು ಒತ್ತು ಕೊಡದಿರುವುದರಿಂದ ಅಲ್ಲಿ ಕೆಲಸಗಳು ಆಗುತ್ತಿಲ್ಲ. ಸಾಧಾರಣವಾಗಿ ಸಮುದ್ರಕ್ಕೆ ಕಲ್ಲು ಹಾಕುವುದು ಅಥವಾ ಅಲ್ಲಲ್ಲಿ ಒಳನಾಡು ಮೀನುಗಾರಿಕೆಯ ಹೆಸರಿನಲ್ಲಿ ದರೋಡೆ ಮಾಡುವಂತದದ್ದಿಂತಹ ಕೆಲಸಗಳೇ ಆ ಇಲಾಖೆಯಲ್ಲಿ ನಡೆಯುತ್ತಿವೆಯೇ ಹೊರತು ಅಲ್ಲ ವಿಶೇಷವಾದಂತಹ ವ್ಯವಸ್ಥೆಗಳು ನಡೆಯುತ್ತಿಲ್ಲ. ಬಹುಶಃ ಕರ್ನಾಟಕ ರಾಜ್ಯದಲ್ಲಿ ಸುಮಾರು 300 ಕಿ.ಮೀ. ಉದ್ದದ ಕರಾವಳಿ ಇದೆ. ಸುಮಾರು 27 ಸಾವಿರ ಚದುರ ಕಿ.ಮೀ. ವಿಸ್ತೀರ್ಣವಾದ ವಿಶಾಲ ಭೂ ಖಂಡ ಪ್ರದೇಶವನ್ನು ಹೊಂದಿದ್ದು ಮೀನುಗಾರಿಕೆ ಅಭಿವೃದ್ಧಿಗೆ ವಿಪುಲ ಅವಕಾಶಗಳಿವೆ. ಆದರೆ ಇದಕ್ಕೆ ಕೊಡುವಂತಹ ಮೊತ್ತ ಬಹಳ ಕಡಿಮೆ. 1999=2000ನೇ ಸಾಲಿನಲ್ಲಿ ಸುಮಾರು 180 ಕೋಟಿ ರೂಪಾಯಿಗಳ ಮೌಲ್ಯದ ಮೀನನ್ನು ಹಿಡಿದಿದ್ದಾರೆ. ಅದೇ ರೀತಿ 1998-99ನೇ ಸಾಲಿನಲ್ಲಿ ಸುಮಾರು 210 ಕೋಟಿ ರೂಪಾಯಿಗಳಷ್ಟು ಮೌಲ್ಯದ ಮೀನನ್ನು ಹಿಡಿಯಲಾಗಿದೆ. ಸಾಧಾರಣವಾಗಿ ನಮಗೆ ಗೊತ್ತಿರುವಂತೆ ಮೀನುಗಾರಿಕೆಯಲ್ಲಿ ಸುಮಾರು 360 ಪರ್‌ಸೀನ್ ಬೋಟ್‌ಗಳು, 3,385 ಬಿಡುಬಲೆ ದೋಣಿಗಳು, 2,506 ಸೀಗಡಿ ಟ್ರಾಲರ್‌ಗಳು, 67 ಯಾಂತ್ರಿಕ ದೋಣಿಗಳು, ಸುಮಾರು 10-20 ಸಾವಿರ ನಾಡ ದೋಣಿಗಳು ಇವತ್ತು ತೊಡಗಿವೆ. ಸುಮಾರು 50 ಸಾವಿರಕ್ಕಿಂತಲೂ ಜಾಸ್ತಿ ಜನ

ಇದನ್ನೇ ಅವಲಂಬನೆ ಮಾಡಿ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಇದರಿಂದ ನಮಗೆ ಸುಮಾರು 100-115 ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯ ಉತ್ಪನ್ನವಾಗುತ್ತಿದೆ. ಆದರೆ ನಾವು ಇದಕ್ಕೆ ಕೊಡುವಂತಹ ಕೊಡುಗೆ ಎಷ್ಟು ಎಂಬುದನ್ನು ನಾವು ನೋಡಬೇಕಾಗಿದೆ. 1999-2000ನೇ ಸಾಲಿನ ವಾರ್ಷಿಕ ಯೋಜನೆಯಲ್ಲಿ ಒಳನಾಡು ಮೀನುಗಾರಿಕೆಗೆ 286.81 ಲಕ್ಷ ರೂಪಾಯಿಗಳು ಸಮುದ್ರ ಮೀನುಗಾರಿಕೆಗೆ 295 ಲಕ್ಷ ರೂಪಾಯಿಗಳು ಮತ್ತು ಇತರೆ ಯೋಜನೆಗಳಿಗೆ 215 ಲಕ್ಷ ರೂಪಾಯಿಗಳನ್ನು ರಾಜ್ಯ ಯೋಜನೆಯಿಂದ ಮತ್ತು ಕೇಂದ್ರ ಪುರಸ್ಕೃತ ಯೋಜನೆಯಡಿ ಸುಮಾರು 916 ಲಕ್ಷ ರೂಪಾಯಿಗಳನ್ನು ಮಾತ್ರ ವಿನಿಯಮ ಮಾಡಿದ್ದನ್ನು ನಾವು ನೋಡುತ್ತಿದ್ದೇವೆ. ಪ್ರಾಯಶಃ ಇವತ್ತು ಅವರ ಬದುಕಿನ ಬವಣೆ ಎಷ್ಟರಮಟ್ಟಿಗೆ ಇದೆ ಎಂದು ಹೇಳಿದರೆ, ಸಾಮಾನ್ಯವಾಗಿ ಮೀನುಗಾರರು ಒಮ್ಮೆ ಮೀನು ಹಿಡಿಯಲಿಕ್ಕೆ ಹೋದರೆ ಅವರು ಪುನಃ ಮರಳಿ ಬರುತ್ತಾರೆ ಎಂಬ ನಂಬಿಕೆಯೇ ಇಲ್ಲ. ಈ ರೀತಿಯ ಒಂದು ವ್ಯವಸ್ಥೆ ಅವರಲ್ಲಿದೆ. ಸಮುದ್ರದ ಕರಾವಳಿಯಲ್ಲಿ ಬೀಸುವಂತಹ ಚಂಡಮಾರುತ ಇರಬಹುದು, ಅಥವಾ ಬೇರೆ ಬೇರೆ ಸಮುದ್ರದ ಕೊರತೆಗಳು ಇರಬಹುದು, ಅವುಗಳಿಂದಾಗಿ ಅವರಿಗೆ ತೊಂದರೆಯಾಗುತ್ತಿದೆ. ಇದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕಾದಂತಹ ಅವಶ್ಯಕತೆ ಇದೆ. ಈ ಬಾರಿ ಕೂಡ ನಾವು ನಿರೀಕ್ಷೆ ಮಾಡಿದಷ್ಟು ಮೊತ್ತವನ್ನು ಇದಕ್ಕಾಗಿ ಆಯವ್ಯಯದಲ್ಲಿ ಮೀಸಲಿಡದಿರುವುದು ತುಂಬಾ ಶೋಚನೀಯವಾದುದು ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಈಗಾಗಲೇ ನಾವು ಸದನದಲ್ಲಿ ಮೀನುಗಾರರಿಗೆ ಸಬ್ಸಿಡಿ ದರದಲ್ಲಿ ಡೀಸೆಲ್ ಸರಬರಾಜು ಮಾಡುವ ಬಗ್ಗೆ ಇಲ್ಲಿ ಮಾತನಾಡಿದೆವು. ಸರ್ಕಾರ ತಕ್ಷಣವೇ ಆ ಬಗ್ಗೆ ಕೆಲಸ ಮಾಡಲಿಲ್ಲ. ಸಬ್ಸಿಡಿ ಕೊಡುವಂತಹ ವ್ಯವಸ್ಥೆಯನ್ನು ನಿರೀಕ್ಷಿತ ಮಟ್ಟದಲ್ಲಿ ಸರ್ಕಾರ ತಕ್ಷಣ ಮಾಡಲಿಲ್ಲ. ಇದನ್ನು ಈಗ ಮಾಡಬೇಕಾಗಿದೆ. ಯಾವುದೇ ಸಂದರ್ಭದಲ್ಲಿ ಕೂಡ ಅವರಿಗೆ ಕೇವಲ ಆರು ತಿಂಗಳಲ್ಲಿ ಮಾಡುವಂತಹ ವ್ಯವಹಾರದಲ್ಲಿ ಪೂರ್ತಿ ಸಹಕಾರಗಳನ್ನು ಕೊಡಬೇಕಾದರೆ ಅವರಿಗೆ ಹೆಚ್ಚಿನ ವ್ಯವಸ್ಥೆಗಳನ್ನು ಮಾಡಬೇಕಾಗಿದೆ. ಇವತ್ತು ಅದಕ್ಕೆ ಬೇಕಾದಂತಹ ಶೀತಲೀಕರಣ ವ್ಯವಸ್ಥೆ ಇರಬಹುದು, ಅದನ್ನು ಎಕ್ಸ್‌ಪೋರ್ಟ್ ಮಾಡಲಿಕ್ಕೆ ಬೇಕಾದಂತಸ ಬಾಕಿ ಸೌಲಭ್ಯಗಳಿರಬಹುದು, ಅವುಗಳನ್ನೂ ಕೂಡ ಹೆಚ್ಚಿನ ರೀತಿಯಲ್ಲಿ ಕೊಡಲಿಕ್ಕೆ ಸರ್ಕಾರ ಹೆಚ್ಚಿನ ಪ್ರಯತ್ನ ಪಡಬೇಕು ಎಂಬ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡಿಕೊಳ್ಳಲಿಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ಒಳನಾಡು ಮೀನುಗಾರಿಕೆ ಬಗ್ಗೆ ಹೇಳುವುದಾದರೆ, ಅದು ಇವತ್ತು ನಿರೀಕ್ಷಿತ ಮಟ್ಟದಲ್ಲಿ ನಡೆಯುತ್ತಿಲ್ಲ. ಅದಕ್ಕೆ ಮಾಡುವಂತಹ ವೆಚ್ಚಗಳು ಪ್ರಾಯಶಃ ಕೆಲವೇ ಜನರ ಸ್ವಂತಕ್ಕೆ ವಿನಿಯೋಗ ಆಗುತ್ತಿರುವುದನ್ನು ಇವತ್ತು ನಾವು ನೋಡುತ್ತಿದ್ದೇವೆ. ಇವತ್ತು ಒಳನಾಡು ಮೀನುಗಾರಿಕೆಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ಸುಮಾರು 2,446 ಸಣ್ಣ ಕೆರೆಗಳು ಮತ್ತು ಸುಮಾರು 1,977 ದೊಡ್ಡ ಕೆರೆಗಳು ಒಳಗೊಂಡಿವೆ ಎಂದು ಸರ್ಕಾರ ಅಂಕಿ ಅಂಶಗಳನ್ನು ಕೊಟ್ಟಿದೆ. ಆದರೆ ಅಲ್ಲಿ ಬರುವಂತಹ ಆದಾಯ, ಅಲ್ಲಿ ಬರುವಂತಹ ಉತ್ಪತ್ತಿಗಳು ನಿರೀಕ್ಷಿತ ಮಟ್ಟದಲ್ಲಿ

ಆಗುತ್ತಿಲ್ಲ. ಸಮರ್ಪಕವಾದ ರೀತಿಯಲ್ಲಿ ಇದಕ್ಕೆ ಹಣ ವ್ಯಯ ಆಗುತ್ತಿಲ್ಲ ಎಂಬಂತಹ ಒಂದು ಕೂಗು ಇವತ್ತು ಎಲ್ಲಾ ಕಡೆಗಳಲ್ಲಿ ಕೇಳಿ ಬರುತ್ತಿದೆ. ಸರ್ಕಾರ ಇದಕ್ಕೆ ಕೂಡ ತಕ್ಷಣ ಹೆಚ್ಚಿನ ಒತ್ತನ್ನು ಕೊಡಬೇಕು. ಮೀನುಗಾರಿಕೆ ಬಹುಶಃ ಅತ್ಯಂತ ಕಡಿಮೆ ಖರ್ಚಿನಲ್ಲಿ ಅತ್ಯಂತ ಹೆಚ್ಚು ಉತ್ಪತ್ತಿ ಕೊಡುವಂತಹ, ಅತ್ಯಂತ ಹೆಚ್ಚು ಜನರನ್ನು ತೊಡಗಿಸಿಕೊಳ್ಳುವಂತಹ ವ್ಯವಸ್ಥೆಯಾಗಿದೆ. ಇನ್ನು ಕೃಷಿ ಕಾರ್ಮಿಕರಿಗೆ ಸಂಬಂಧಪಟ್ಟ ಹಾಗೆ ಒಂದು ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಪಡುತ್ತೇನೆ. ಈ ವಿಚಾರಕ್ಕೆ ಕೃಷಿ ಇಲಾಖೆ ಜೊತೆಗೆ ಬಹುಶಃ ಆರ್ಥಿಕ ಇಲಾಖೆ ಕೂಡ ಸಂಬಂಧಪಡುತ್ತದೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಬಡವರ ಬೆಳೆ ಎಂದೇ ಖ್ಯಾತವಾದಂತಹ ಗೋಡಂಬಿ ಬೆಳೆಯ ಬಗ್ಗೆ ಹೇಳುವುದಾದರೆ, ಅದರ ನೂರಾರು ಸಂಸ್ಕರಣಾ ಉದ್ದಿಮೆಗಳು ಬಹುಶಃ ಭಾರೀ ಜನರಿಗೆ ಇವತ್ತು ತಮ್ಮ ಜೀವನದ ಎಲ್ಲಾ ವ್ಯವಸ್ಥೆಗಳನ್ನೂ ಮಾಡಿಕೊಳ್ಳಲು ಸಹಾಯ ಮಾಡಿವೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ವಿಚಾರದ ಬಗ್ಗೆ ಗಮನಹರಿಸಬೇಕಾಗಿದೆ. ಗೋಡಂಬಿ ಸಂಸ್ಕರಣಾ ಘಟಕಗಳ ಮೇಲೆ ಇವತ್ತು ಮಂಗಳೂರಿನಲ್ಲಿ ದಾಳಿ ನಡೆಯುತ್ತಿರುವ ಬಗ್ಗೆ ತಾವು ಪತ್ರಿಕೆಗಳಲ್ಲಿ ಓದಿರಬಹುದು ಅಥವಾ ಕೇಳಿರಬಹುದು. ನಮ್ಮ ರಾಜ್ಯದಲ್ಲಿ ಇದಕ್ಕೆ ಸುಮಾರು ಶೇಕಡ 4ರಷ್ಟು ಟ್ಯಾಕ್ಸ್ ಹಾಕುತ್ತೇವೆ. ಟರ್ನ್ ಓವರ್ ಟ್ಯಾಕ್ಸ್ ಮತ್ತು ಇತರ ಟ್ಯಾಕ್ಸ್‌ಗಳೂ ಕೂಡ ಇದರ ಜೊತೆಗೆ ಬರುತ್ತದೆ. ಇದಲ್ಲದೇ ಶೇಕಡ 1ರಷ್ಟು ಎಪಿಎಂಸಿ ಸೆಸ್ ಅನ್ನು ರಾ ಮೆಟೀರಿಯಲ್ಸ್ ಮೇಲೆ ಹಾಕಲಾಗಿದೆ. ಶೇಕಡ 1ರಷ್ಟನ್ನು ಕ್ಯಾಶಿಯೋ ಕೆರ್ನಲ್‌ಗಳ ಮೇಲೆ ಟ್ಯಾಕ್ಸ್ ಹಾಕಲಾಗಿದೆ. ಆದರೆ ನಮ್ಮ ನೆರೆ ರಾಜ್ಯಗಳಾದ ಕೇರಳ ಮತ್ತು ಗೋವಾಗಳಲ್ಲಿ ಕೇವಲ ಶೇಕಡ 2ರಷ್ಟು ಮಾತ್ರ ಟ್ಯಾಕ್ಸ್ ಇದೆ. ಅಲ್ಲಿ ಎಕ್ಸ್‌ಪೋರ್ಟಿಗೆ ಟ್ಯಾಕ್ಸ್ ಫ್ರೀ ಇದೆ. ಅಲ್ಲಿ ಯಾವುದೇ ಕ್ಯಾಶಿಯೋ ಕೆರ್ನಲ್‌ಗಳ ಮೇಲೆ ಎಪಿಎಂಸಿ ಸೆಸ್ ತೆಗೆದುಕೊಳ್ಳುವುದಿಲ್ಲ. ಇದರ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿರುವಂತಹ ಗೋಡಂಬಿ ಬೆಳೆಗಾರರ ಮೇಲೆ ಇವತ್ತು ಸತತವಾದ ದಾಳಿ ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಮಂಗಳೂರಿನಲ್ಲಿ ಕಳೆದೆರಡು ದಿನಗಳಿಂದ ಗೋಡಂಬಿ ಕಾರ್ಖಾನೆಗಳನ್ನು ಮುಚ್ಚಲಿಕ್ಕೆ ಎಪಿಎಂಸಿ ಪ್ರಯತ್ನ ನಡೆಸಿದೆ ಎಂದು ಕಾಣುವ ರೀತಿಯಲ್ಲಿ ಅಲ್ಲಿ ಗೋಡಂಬಿ ಕಾರ್ಖಾನೆಗಳ ಮೇಲೆ ಹಠಾತ್ತಾಗಿ ದಾಳಿಗಳನ್ನು ಮಾಡಲಾಗಿದೆ. ನಮಗೆ ಗೊತ್ತಿದ್ದ ಹಾಗೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸುಮಾರು 40 ಸಾವಿರ ಮಹಿಳೆಯರು ಇದರಿಂದ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಅವರು ಯಾವುದೇ ಒಂದು ತೊಂದರೆ ಇಲ್ಲದೇ ಅವರು ಗೌರವಯುತವಾಗಿ ಬಾಳ್ವೆ ನಡೆಸಲಿಕ್ಕೆ ಇದು ಸಹಕಾರಿಯಾಗಿರುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಈ ಒಂದು ವ್ಯವಸ್ಥೆ ಇವತ್ತು ನಮ್ಮ ಕೈ ಬಿಟ್ಟು ಹೋಗುತ್ತಿದೆ. ಈ ಉದ್ದಿಮೆಗೆ ಯಾವುದೇ ರೀತಿಯಲ್ಲಿ ವಿದ್ಯುಚ್ಛಕ್ತಿ ಅವಶ್ಯಕತೆ ಇಲ್ಲ. ಈ ರೀತಿಯಾದಂತಹ ಉದ್ದಿಮೆ ಇವತ್ತು ತೊಂದರೆಗೆ ಒಳಗಾಗಿದೆ. ಎಪಿಎಂಸಿಯವರು

ಕ್ಯಾಶಿಯೋ ಕೆರ್ನಲ್‌ಗಳ ಮೇಲೆ ಹಾಕಿದಂತಹ ಟ್ಯಾಕ್ಸ್ ಅನ್ನು ಅವರು ಪಾವತಿಸಿಲ್ಲ ಎಂಬ ನೆಪದಿಂದ ಇವತ್ತು ಅವುಗಳ ಮೇಲೆ ರೈಡ್ಸ್ ಮಾಡಿಸುವಂತಹ ವ್ಯವಸ್ಥೆಗಳು ನಡೆಯುತ್ತಿವೆ. ಸಾಧಾರಣವಾಗಿ ಇಲ್ಲಿಂದ ಗೋವಾ ಮತ್ತು ಕೇರಳ ರಾಜ್ಯಗಳಿಗೆ ಗೋಡಂಬಿ ಉದ್ದಿಮೆದಾರರು ವಲಸೆ ಹೋಗುವಂತಹ ಸಂದರ್ಭಗಳು ನಿರ್ಮಾಣವಾಗಿವೆ. ಕೇರಳಕ್ಕೆ ಹೋದರೆ ಅವರಿಗೆ ಟ್ಯಾಕ್ಸ್ ಇಲ್ಲ. ಸಾವಿರಾರು ಜನ ಅದರಿಂದ ಬದುಕುವಂತಹ ವ್ಯವಸ್ಥೆಯಾಗುತ್ತದೆ. ಈ ಒಂದು ವ್ಯವಹಾರದ ಕಡೆ ಹೆಚ್ಚಿನ ಗಮನಹರಿಸಬೇಕೆಂದು ಕೋರುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಮ್ಮ ನೆರೆ ರಾಜ್ಯಗಳಾದ ಕೇರಳ ಮತ್ತು ಗೋವಾ ರಾಜ್ಯಗಳಲ್ಲಿರುವಂತೆ ಟ್ಯಾಕ್ಸ್ ಪದ್ಧತಿಯನ್ನು ಗೋಡಂಬಿ ಬೆಳೆಗಾರರ ವಿಚಾರದಲ್ಲಿ ಅಳವಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲದಿದ್ದಲ್ಲಿ ಸುಮಾರು 40 ಸಾವಿರ ಮಹಿಳೆಯರು ತಮ್ಮ ಉದ್ಯೋಗವನ್ನು ಕಳೆದುಕೊಳ್ಳುವಂತಹ ವ್ಯವಸ್ಥೆಯಾಗುತ್ತದೆ. ಇಲ್ಲಿರುವಂತಹ ಎಲ್ಲಾ ಉದ್ದಿಮೆದಾರರು ಇಲ್ಲಿಂದ ಕೇರಳ ಅಥವಾ ಗೋವಾಕ್ಕೆ ಪಲಾಯನ ಮಾಡುವಂತಹ ವ್ಯವಸ್ಥೆಗಳಾಗುತ್ತವೆ. ತಕ್ಷಣ ಇದರಲ್ಲಿ ಸರ್ಕಾರದ ಮಧ್ಯ ಪ್ರವೇಶ ಆಗಬೇಕು. ಗೋಡಂಬಿ ಬೆಳೆಗಾರರ ಬವಣೆಯನ್ನು ನೀಗಿಸುವಂತಹ ಕೆಲಸಗಳನ್ನು ಮಾಡಬೇಕೆಂಬ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಈ ರೀತಿ ಗೋಡಂಬಿ ಇವತ್ತು ಅತ್ಯಂತ ಉತ್ತಮ ಉದ್ದಿಮೆಯಾಗಿ ಸಾರ್ವಜನಿಕರ ಬದುಕಿಗೆ ರಕ್ಷಣೆ ಕೊಡುವಂತಹ ವ್ಯವಸ್ಥೆ ಇದೆ. ಇದರ ಒಂದು ವ್ಯವಸ್ಥೆಯನ್ನು ಕೂಡ ತಾವು ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ತೋಟಗಾರಿಕೆಯಲ್ಲಿ ಇನ್ನೊಂದು ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಬಹುಶಃ ಹನಿ ನೀರಾವರಿಗೆ ಹೆಚ್ಚಿನ ಒತ್ತನ್ನು ಕೊಡುವಂತಹ ವ್ಯವಸ್ಥೆಗಳು ಸರ್ಕಾರದಿಂದ ಆಗುತ್ತಿದೆ. ಅದರಲ್ಲಿಯೂ ಕೂಡ ವಿಶೇಷವಾಗಿ ಮಹಿಳೆಯರಿಗೆ ಶೇ.90ರಷ್ಟು ಸಬ್ಸಿಡಿ ಕೊಡುವಂತಹ ವ್ಯವಸ್ಥೆಯಾಗಿದೆ. ಆದರೆ ಈ ಬಗ್ಗೆ ಹಣ ಬಿಡುಗಡೆ ಆಗುತ್ತಿಲ್ಲವೆಂದು ಹೇಳುವಂತಹ ದೂರುಗಳು ಇವತ್ತು ಎಲ್ಲಾ ಕಡೆಗಳಿಂದ ಕೇಳಿ ಬರುತ್ತಿದೆ. ಈಗಾಗಲೇ ಸಾಕಷ್ಟು ಹನಿ ನೀರಾವರಿ ವ್ಯವಸ್ಥೆಯಲ್ಲಿ ತೊಡಗಿರುವಂತಹ ವ್ಯಕ್ತಿಗಳಿಗೆ ಇನ್ನೂ ಕೂಡ ಸರ್ಕಾರದಿಂದ ಸಬ್ಸಿಡಿ ರಿಲೀಸ್ ಆಗಿಲ್ಲ. ಸಬ್ಸಿಡಿ ರಿಲೀಸ್ ಆಗದ ಕಾರಣ ಅವರು ಇವತ್ತು ತೊಂದರೆಗೀಡಾಗಿದ್ದಾರೆ. ಇದನ್ನು ಸರ್ಕಾರ ಗಮನಿಸಿ ಯಾರಿಗೆಲ್ಲಾ ಈ ಹನಿ ನೀರಾವರಿ ವ್ಯವಸ್ಥೆಯಲ್ಲಿ ಸಬ್ಸಿಡಿ ರಿಲೀಸ್ ಮಾಡಬೇಕೋ ಅದನ್ನು ತಕ್ಷಣ ರಿಲೀಸ್ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಚೌಡರೆಡ್ಡಿ (ಚಿಂತಾಮಣಿ): ಸನ್ಮಾನ್ಯ ಉಪಾಧ್ಯಕ್ಷರೇ, ತಾವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 2000-2001ನೇ ಸಾಲಿನ ಅನುದಾನ ಬೇಡಿಕೆಗಳು ಮೇಲೆ ಮಾತನಾಡಲಿಕ್ಕೆ ಇವತ್ತು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ

ತಮ್ಮನ್ನು ವಂದಿಸುತ್ತಾ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡಲಿಚ್ಛಿಸುತ್ತೇನೆ. ಪಂಚಾಯತ್ ರಾಜ್ ವ್ಯವಸ್ಥೆ ಗ್ರಾಮಗಳ ಅಭಿವೃದ್ಧಿಗೋಸ್ಕರ ನಿಜವಾಗಿಯೂ ಬಹಳ ಉತ್ತಮವಾಗಿದೆ. ಇದನ್ನು ತಂದವರಿಗಂತೂ ನಾವು ಯಾವಾಗಲೂ ಕೂಡ ಧನ್ಯವಾದಗಳನ್ನರ್ಪಿಸಬೇಕಾಗಿದೆ. ಆದರೆ ಇದನ್ನು ಯಾವ ರೀತಿ ನಡೆಸಿಕೊಂಡು ಬರಬೇಕು ಎಂಬುದು ಬಹಳ ಮುಖ್ಯ. ಮಾನ್ಯ ಘೋರ್ಪಡೆಯವರು ಈ ಆ್ಯಕ್ಟ್ ಅನ್ನು ಮಾಡುವಾಗ ಎಷ್ಟು ಕಷ್ಟಪಟ್ಟರು ಎಂಬುದೆಲ್ಲಾ ನನಗೆ ಗೊತ್ತಿದೆ. ಆದರೆ ಇದರಲ್ಲಿ ಏನು ತೊಂದರೆಗಳಾಗುತ್ತಿದೆ ಅದನ್ನು ಸ್ವಲ್ಪ ತಿಳಿದಕೊಳ್ಳಬೇಕೆಂದು ನಾನು ತಮ್ಮ ಮುಖೇನ ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ಇವತ್ತು ನಾವು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳೆಂದು ವಿಂಗಡಿಸಿದ್ದೇವೆ. ಪ್ರತಿಯೊಂದೂ ಕೂಡ ಯಾವ ರೀತಿಯಾಗಿ ನಡೆದುಕೊಳ್ಳಬೇಕು, ಅವುಗಳು ಮಾಡಿದಂತಹ ಠರಾವುಗಳು ಯಾವ ರೀತಿ ಅನುಷ್ಠಾನಗೊಳ್ಳಬೇಕು ಎಂಬುದನ್ನೆಲ್ಲಾ ಈಗಾಗಲೇ ನಾವು ತಿಳಿಸಿದ್ದೇವೆ. ನಾನು ಇಲ್ಲಿ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ದಿನಾಂಕ 27.12.99ರಲ್ಲಿ ಗ್ರಾಮೀಣ ಸಂಪರ್ಕ ವ್ಯವಸ್ಥೆಯ ಅಭಿವೃದ್ಧಿ ಬಗ್ಗೆ ಸರ್ಕಾರದವರು ಒಂದು ಸುತ್ತೋಲೆ ಹೊರಡಿಸಿದ್ದಾರೆ. ಸರ್ಕಾರದವರು ಸುಮಾರು 100 ಲಕ್ಷ ರೂಪಾಯಿಗಳನ್ನು ಸಂಪರ್ಕ ರೂಟ್‌ಗೆ ಅನುದಾನವನ್ನು ಬಿಡುಗಡೆ ಮಾಡುತ್ತಾರೆ. ಅದರಲ್ಲಿ 60 ಲಕ್ಷ ರೂಪಾಯಿಗಳನ್ನು ಅವರು ನೇರವಾಗಿ ಬಿಡುಗಡೆ ಮಾಡುತ್ತಾರೆ. ಮಿಕ್ಕ ಹಣವನ್ನು ತಾಲ್ಲೂಕು ಸಮಿತಿಯಲ್ಲಿ ಬೇರೆ ವಿಧದಿಂದ ನೀವು ಸಂಗ್ರಹಿಸಿಕೊಳ್ಳಿ ಎಂದು ಹೇಳಿದ್ದಾರೆ. ಅದಕ್ಕಾಗಿ ನಮ್ಮ ಜಿಲ್ಲಾ ಪಂಚಾಯಿತಿಯವರು ಸರ್ಕಾರದ ಸುತ್ತೋಲೆಯ ಪ್ರಕಾರವೇ ಒಂದು ಸುತ್ತೋಲೆ ಕಳುಹಿಸುತ್ತಾರೆ. ನೀವು ತಾಲ್ಲೂಕು ಪಂಚಾಯಿತಿ ಸಮಿತಿಯನ್ನು ಕರೆದು ಅಲ್ಲಿ ಒಂದು ಆ್ಯಕ್ಷನ್ ಪ್ಲಾನ್ ತಯಾರು ಮಾಡಿ ಎಂದು ಅವರು ಸುತ್ತೋಲೆ ಕಳುಹಿಸುತ್ತಾರೆ. ಅದರ ಪ್ರಕಾರ ದಿನಾಂಕ 13.1.2000ನೇ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಶ್ರೀರಾಮಪ್ಪನವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಸಮಿತಿ ನಮ್ಮ ಚಿಂತಾಮಣಿಯಲ್ಲಿ ಸೇರುತ್ತದೆ. ಆ ಸಮಿತಿಗೆ ಯಾರ‍್ಯಾರು ಸದಸ್ಯರುಗಳಿರುತ್ತಾರೋ ಆ ಎಲ್ಲರಿಗೂ ಮೀಟಿಂಗ್ ನೋಟೀಸ್ ಹೋಗಿ ಸೇರಿದೆ. ಆ ಮೀಟಿಂಗ್ ನೋಟೀಸ್‌ನ ಪ್ರಕಾರ ನಾವೆಲ್ಲರೂ ಸೇರಿ 60 ಲಕ್ಷ ರೂಪಾಯಿಗಳಿಗೆ ಒಂದು ಆ್ಯಕ್ಷನ್ ಪ್ಲಾನ್ ತಯಾರು ಮಾಡಿ ನಾವು ಅದನ್ನು ಯಾವ ತರಹದ ಗಲಾಟೆಯಿಲ್ಲದೇ ಅವಿರೋಧವಾಗಿ ಒಂದು ನಿರ್ಣಯವನ್ನು ಅಂಗೀಕರಿಸುತ್ತೇವೆ. ಆ ಸಭೆಗೆ ಎಂ.ಪಿ.ಯವರೊಬ್ಬರು ಬಂದಿಲ್ಲ. ಅದಕ್ಕೆ ಯಾರೇನೂ ಮಾಡುವುದಕ್ಕಾಗುವುದಿಲ್ಲ. ಇವತ್ತು ಇಲ್ಲಿ ಸದನ ನಡೆಯುತ್ತಿದೆ. ಯಾರಾದರೂ ಒಂದಿಬ್ಬರು ಸದಸ್ಯರು ಬಂದಿಲ್ಲವೆಂದು ಸದನ ನಿಲ್ಲಿಸುವುದಕ್ಕಾಗುತ್ತದೆಯೇ? ಅವರಿಗೆ ಸಭೆಯ ನೋಟೀಸ್ ಸೇರಿದೆ. ಆದರೂ ಕೂಡ ಅವರು ಬಂದಿರಲಿಲ್ಲ. ನಾವು ಆ್ಯಕ್ಷನ್ ಪ್ಲಾನ್ ತಯಾರು ಮಾಡಿ ಅದನ್ನು ಜಿಲ್ಲಾ ಪಂಚಾಯಿತಿಗೆ ಕಳುಹಿಸಿಕೊಟ್ಟೆವು. ಬಹುಶಃ ನಮ್ಮ ಮಾನ್ಯ ಘೋರ್ಪಡೆ ಸಾಹೇಬರು ಈ ತರಹ ಮಾಡಲಾರರು ಎಂದು ನಾನು

ಭಾವಿಸುತ್ತೇನೆ. ನಾವು ಯಾವತ್ತೂ ಸಮಿತಿಯನ್ನು ಕರೆದು ತೀರ್ಮಾನ ಮಾಡದ ಮೇಲೆ ಪುನಃ ಇನ್ನೊಂದು ಆಜ್ಞೆ ಕಳುಹಿಸುವುದಕ್ಕಾಗುವುದಿಲ್ಲ. ಇವರನ್ನು ಕನ್‌ಸಲ್ಟ್ ಮಾಡಿ, ಅವರನ್ನು ಕನ್‌ಸಲ್ಟ್ ಮಾಡಿ ಎಂದು ಹೇಳುವಂತಿಲ್ಲ. ಅವರು ಇಲ್ಲದೇ ಇದ್ದರೆ, ನಾವು ತಾಲ್ಲೂಕು ಸಮಿತಿಯಲ್ಲಿ ಅಂಗೀಕರಿಸಿರುವ ನಿರ್ಣಯಗಳನ್ನೆಲ್ಲಾ ಊರ್ಜಿತ ಮಾಡಬೇಡಿ ಎಂದು ಮಾಡುವುದಕ್ಕೆ ಎಲ್ಲಿ ಕಾನೂನು ಇದೆಯೋ ನನಗಂತೂ ಗೊತ್ತಿಲ್ಲ. ಚಿಂತಾಮಣಿಯಲ್ಲಿ ಮಾಡಿರತಕ್ಕ ನಿರ್ಣಯವನ್ನು ಜಿಲ್ಲಾ ಸಮಿತಿ ಸೆಕ್ರೆಟರಿಯವರು ಯಾರ ಒಂದು ಇನ್‌ಫ್ಲುಯೆನ್ಸ್ ಮೇಲೆ ಮಾಡಿದರೋ ಏನೋ, ನಾವು ತಾಲೂಕು ಪಂಚಾಯಿತಿ ಸಮಿತಿಯಲ್ಲಿ ಠರಾವು ಮಾಡಿ ಕಳುಹಿಸಿರತಕ್ಕಂಥ ಆ್ಯಕ್ಷನ್ ಪ್ಲಾನ್ ಅನ್ನು ಅವರು ಅದನ್ನು ವಾಪಸ್ ಕಳುಹಿಸಿಬಿಟ್ಟರು. ಇದು ನ್ಯಾಯವೇ? ಎಂದು ನಾನು ತಮ್ಮ ಮುಖೇನ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಇದರಿಂದ ಎಷ್ಟು ತೊಂದರೆಯಾಗುತ್ತದೆ? ಅದರಲ್ಲೂ ಕೂಡ ಈ ಪಂಚಾಯತ್ ರಾಜ್ ವ್ಯವಸ್ಥೆಗೆ ಎಷ್ಟು ಕೆಟ್ಟ ಹೆಸರು ಬರುತ್ತದೆ, ಇದೇನು ಸರ್ಕಾರದಿಂದ ಬರುತ್ತದೆಯೇ? ಅಥವಾ ಬೇರೆಯವರ ಪ್ರಭಾವದಿಂದ ಬರುತ್ತದೆಯೇ? ಎಂಬುದನ್ನು ಈ ದಿವಸ ಆಲೋಚನೆ ಮಾಡಬೇಕೆಂದು ನಾನು ಮಾನ್ಯ ಘೋರ್ಪಡೆಯವರನ್ನು ಕೇಳಿಕೊಳ್ಳುತ್ತೇನೆ. ಆಗಲೇ ನಮ್ಮ ಸ್ನೇಹಿತರು ಮಾತನಾಡುತ್ತಾ ಗ್ರಾಮ ಪಂಚಾಯಿತಿಗಳಲ್ಲಿ ವರ್ಷದಲ್ಲಿ ಪ್ರತಿಯೊಂದು ಕಡೆ ಸಭೆಗಳು ನಡೆಯುತ್ತವೆ ಎಂದು ಅವರು ಹೇಳುತ್ತಿದ್ದರು. ಅವುಗಳು ಎಲ್ಲಾ ಕಡೆ ನಡೆಯುತ್ತದೆ. ಅದಂತೂ ಬಹಳ ಚೆನ್ನಾಗಿರತಕ್ಕಂಥ ವಿಷಯ. ಎಲ್ಲಾ ಸಂಬಂಧಪಟ್ಟ ಇಲಾಖೆಯವರೂ ಕೂಡ ಹಳ್ಳಿಗಳಲ್ಲಿ ಬಂದು ಆ ಪಂಚಾಯಿತಿಯಲ್ಲಿ ಗ್ರಾಮ ಸಭೆಗಳನ್ನು ಮಾಡಿ ತಾಲ್ಲೂಕು ಸಮಿತಿಯಿಂದ ಏನೇನು ಕಾರ್ಯಕ್ರಮಗಳಿವೆಯೋ ಆ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಬೇಕು. ಇದು ಮುಖ್ಯವಾಗಿರುವಂತಾದ್ದು. ಇದು ಬಹಳ ಚೆನ್ನಾಗಿ ಆ ಒಂದು ಗ್ರಾಮಗಳ ಅಭಿವೃದ್ಧಿಗೋಸ್ಕರ ಮಾಡಿರತಕ್ಕಂಥದ್ದು. ಆದರೆ ಒಂದು ವಿಪರ್ಯಾಸವೇನೆಂದರೆ ಈ ಸಭೆಗಳಿಗೆ ಬಹಳ ಜನ ಬರುವುದೇ ಇಲ್ಲ. ಅದಕ್ಕೆ ಸರ್ಕಾರದವರು ನಿಜವಾಗಿಯೂ ಬಹಳ ಹೆಚ್ಚಿನ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮುಖೇನ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ತಾಲ್ಲೂಕು ಪಂಚಾಯತಿ ಕಛೇರಿಯಿಂದ ದಿನಾಂಕ 19.11.99ರಲ್ಲಿ ಕಾರಣ ಕೇಳಿ ನೋಟೀಸ್ ನೀಡಲಾಗಿದೆ. ಗ್ರಾಮ ಪಂಚಾಯಿತಿಗಳನ್ನು ಮಾಡಿರುವ ಉದ್ದೇಶವಾದರೂ ಏನು? ಎಲ್ಲಾ ಇಲಾಖೆಯ ಅಧಿಕಾರಿಗಳು ಬಂದು ಅಲ್ಲಿ ಏನೇನು ಕಾರ್ಯಕ್ರಮಗಳಿವೆಯೋ ಅದನ್ನೆಲ್ಲಾ ಜನಗಳಿಗೆ ತಿಳಿಸಿ, ಆ ಕಾರ್ಯಕ್ರಮಗಳ ಬಗ್ಗೆ ಜನಕ್ಕೆ ಮಾಹಿತಿ ಕೊಟ್ಟು ಕಾರ್ಯಕ್ರಮಗಳನ್ನು ಮಾಡಿಕೊಡಬೇಕು. ಇದು ಒಳ್ಳೆಯ ಉದ್ದೇಶ. ನಿಜವಾಗಿಯೂ ಇದು ಆ ಗ್ರಾಮಗಳ ಅಭಿವೃದ್ಧಿಗೆ ಮತ್ತು ಅಲ್ಲಿರತಕ್ಕಂಥ ಗ್ರಾಮದ ಜನಗಳಿಗೆ ಅನುಕೂಲ ಆಗುತ್ತದೆ. ಅಂಥಾದ್ದರಲ್ಲಿ ಕೃಷಿ ಇಲಾಖೆ, ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮ, ರಾಜಸ್ವ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಗಳು ಇಂತಹ ಒಂದು ಮೀಟಿಂಗೆ ಬರದೇ

ಇದ್ದಲ್ಲಿ ಆ ಗ್ರಾಮಸಭೆಯನ್ನು ಏಕೆ ಮಾಡಬೇಕು? ಅದರಿಂದ ಏನು ಪ್ರಯೋಜನವಾಗುತ್ತದೆ. ಆದ್ದರಿಂದ ನಾನು ಮಾನ್ಯ ಉಪಾಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ತಾವು ನಿರ್ದಿಷ್ಟವಾಗಿ ಯಾರು ಇಂತಹ ಸಭೆಗಳಿಗೆ ಬರುವುದಿಲ್ಲವೋ ಅವರಿಗೆ ಯಾವುದಾದರೂ ಒಂದು ರೀತಿಯಲ್ಲಿ ಪನಿಷ್‌ಮೆಂಟ್ ಕೊಡುವಂತಹ ಆದೇಶ ನೀಡಬೇಕು. ಈಗ ಏನಾಗಿದೆ ಎಂದರೆ, ನಾವು ಜಾಸ್ತಿ ಮಾತನಾಡುತ್ತಿರುತ್ತೇವೆ. ಒಮ್ಮೆ ಮಾನ್ಯ ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು ನಮ್ಮ ಕೋಲಾರಕ್ಕೆ ಬಂದಿದ್ದರು. ಅಲ್ಲಿ ಜಿಲ್ಲಾ ಪಂಚಾಯತ್ ಮೀಟಿಂಗ್ ಕರೆದಿದ್ದರು. ಆಗ ನಮ್ಮ ಅಧ್ಯಕ್ಷರು ವಾಟರ್ ಸಪ್ಲೈ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ, ಅದರ ಬಗ್ಗೆ ಈಗ ಮಾತನಾಡುವುದು ಬೇಡ ಎಂದು ಹೇಳಿದ್ದರು. ಆವತ್ತು ಅಲ್ಲಿ ಕೂಲಂಕಷವಾಗಿ ಪೈಪ್ಡ್ ವಾಟರ್ ಸಪ್ಲೈ, ಮಿನಿ ವಾಟರ್ ಸಪ್ಲೈ ಬಗ್ಗೆ ಚರ್ಚೆಯಾಗಿತ್ತು. ಪೈಪ್ಡ್ ವಾಟರ್ ಸಪ್ಲೈ ಯಾವಾಗ ಮಂಜೂರಾಯಿತು ಎಂಬುದೂ ಸಹ ಚರ್ಚೆ ಆಯಿತು. 5-6 ವರ್ಷಗಳ ಹಿಂದೆ ಮಂಜೂರಾಗಿದ್ದ ಯೋಜನೆಗಳನ್ನು ಸಹ ಅವರು ಅನುಷ್ಠಾನಕ್ಕೆ ತಂದಿರಲಿಲ್ಲ. ಆ ಸಭೆಯಲ್ಲಿ 'ಸ್ಪಿಲ್ ಓವರ್ ವರ್ಕ್' ಎಂದರೆ ಏನು ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು ಕೇಳಿದರು. ಅದಕ್ಕೆ ಅಲ್ಲಿದ್ದ ಎಗ್ಸಿಕ್ಯೂಟೀವ್ ಇಂಜಿನಿಯರ್ಸ್ ಮುಖ ಮುಖ ನೋಡುತ್ತಾ ಕುಳಿತಿದ್ದರು. ಆಗ ನಾನು ಹೇಳಿದೆ, ನೀವು ಮುನಿಸಿಪಲ್ ಅಧ್ಯಕ್ಷರಾಗಿದ್ದಿರಿ, ಸ್ಪಿಲ್ ಓವರ್ ಎಂದರೆ ಏನು ಎಂದು ನಿಮಗೆ ಗೊತ್ತು, ಬಜೆಟ್ ಎಂದರೆ ಏನು ಎಂಬುದೂ ಸಹಾ ನಿಮಗೆ ಗೊತ್ತು, ಪಾಪ ಈ ಎಗ್ಸಿಕ್ಯೂಟೀವ್ ಇಂಜಿನಿಯರ್‌ಗೆ ಅದೂ ಕೂಡ ಗೊತ್ತಿಲ್ಲವೆಂದು ಹೇಳಿದೆ. ಆಮೇಲೆ ಅವರೊಂದು ಉತ್ತರ ಹೇಳಿದರು. ಅದನ್ನು ಕೇಳಿ ನಿಜವಾಗಿಯೂ ನನಗೆ ಬಹಳ ನೋವಾಯಿತು. ಅವರು ಏನು ಹೇಳಿದರು ಎಂದರೆ ಶಾಸಕರು ಯಾವುದನ್ನೂ ಕೂಡ ನೀವು ಒಂದು ರೀತಿಯಲ್ಲಿ ಬಜೆಟ್ ಪ್ರಕಾರ ಹೋಗುವುದು ಬೇಡಿ, ನಾವು ಹೇಳಿದ್ದನ್ನು ಮಾಡಿ, ಹಳೆಯ ವರ್ಕ್ ಎಂದು ಹೇಳುವುದು, ಅದರ ಹಿಂದೆ ಹೋಗುವುದು ಬೇಡಿ ಎಂದು ಹೇಳಿದರು ಎಂದು ಅವರು ಹೇಳಿದರು. ನಿಜವಾಗಿಯೂ ಇದು ಬಹಳ ಶೋಚನೀಯ. ಅವರಿಗೆ ಹಾಗೆ ಹೇಳುವುದಕ್ಕೆ ಅಧಿಕಾರವೇ ಇಲ್ಲ. ಮಾನ್ಯ ಮಂತ್ರಿಗಳು ಸ್ಪಿಲ್ ಓವರ್ ವರ್ಕ್ ಎಷ್ಟಿದೆ? ಅದು ಯಾವಾಗ ಮಂಜೂರಾಯಿತು? ಸ್ಪಿಲ್ ಓವರ್ ವರ್ಕ್ ಏಕೆ ತೆಗೆದುಕೊಳ್ಳಲಿಲ್ಲ? ಎಂದು ಕೇಳಿದರು. ಇಂತಹ ಹೆಡ್‌ನಲ್ಲಿ ನಾವು ಸ್ಪಿಲ್ ಓವರ್ ವರ್ಕ್‌ಗೆ ದುಡ್ಡು ಕೊಟ್ಟಿದ್ದೇವೆ ಎಂದು ಅವರ ಜೊತೆಯಲ್ಲಿ ಬಂದಿದ್ದ ಡೆಪ್ಯುಟಿ ಸೆಕ್ರೆಟರಿಯೊಬ್ಬರು ಸ್ಪಷ್ಟವಾಗಿ ಹೇಳಿದರು. ಆದರೆ ಅದು ಅವರಿಗೆ ಅರ್ಥವಾಗಲಿಲ್ಲ. ನಿಜವಾಗಿ ನಾವು ಹೇಳುವುದಾದರೆ, ಬಹಳ ಹೆಚ್ಚಾಗಿ ದಬಾಯಿಸಿ ಮಾತನಾಡಿದರು. ದಬಾಯಿಸುವುದು ಕಡಿಮೆ ಮಾಡಬೇಕು. ಈಗ ಪರಿಸ್ಥಿತಿ ಯಾವ ರೀತಿಗೆ ಮುಟ್ಟಿದೆ ಎಂದರೆ, ಯಾರು ಅಧಿಕಾರಿಗಳು ತಪ್ಪು ಮಾಡುತ್ತಾರೋ ಅವರಿಗೆ ಶಿಕ್ಷೆ ಕೊಡದಿದ್ದರೆ ನಾವು ಕೋಟ್ಯಾಂತರ ರೂಪಾಯಿಗಳನ್ನು ಇಲ್ಲಿಂದ ಮಂಜೂರು ಮಾಡಿಸಿಕೊಂಡು ಖರ್ಚು ಮಾಡಿದ್ದಕ್ಕೆ ಖಂಡಿತವಾಗಿಯೂ ಕೂಡ ಫಲ ಬರುವುದಿಲ್ಲ. ಇದು ಬಹಳ

ಅನ್ಯಾಯವಾದ ವಿಚಾರ. ಮಾನ್ಯ ಶ್ರೀನಿವಾಸ ಗೌಡರಿಗೂ ಕೂಡ ಗೊತ್ತಿರುವಂತೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಬಹಳ ಗಲಾಟೆಯಾಗುತ್ತದೆ. 2-3 ಬಾರಿ ಮೀಟಿಂಗ್‌ಗಳೇ ನಡೆಯಲಿಲ್ಲ. ಅಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ, ಇಲ್ಲಿ ಮಿಸ್ ಅಪ್ರೋಪ್ರಿಯೇಷನ್ ಎಂದು ಗಲಾಟೆಗಳು ನಡೆದವು. ಅಲ್ಲಿ ವಿಪರೀತ ಗಲಾಟೆಗಳಾಗಿದೆ. ಆದ್ದರಿಂದ ಸ್ವಲ್ಪ ಡಿಸಿಪ್ಲಿನ್ ಜಾರಿಗೆ ತಂದು, ಯಾರು ತಪ್ಪು ಮಾಡುತ್ತಾರೋ ಅವರಿಗೆ ಶಿಕ್ಷೆ ಕೊಡಬೇಕು. ಇವತ್ತು ಕೆಲವರು ಒಳ್ಳೆಯ ಅಧಿಕಾರಿಗಳಿದ್ದರೆ, ಮತ್ತೆ ಕೆಲವರು ಕೆಟ್ಟ ಅಧಿಕಾರಿಗಳಿದ್ದಾರೆ. ಯಾರು ತಪ್ಪು ಮಾಡುತ್ತಾರೋ ಅವರಿಗೆ ಬಯ್ಯುವುದನ್ನು ಬಿಟ್ಟು ಅವರಿಗೆ ಶಿಕ್ಷೆ ಕೊಡುವುದನ್ನು ನಾವು ಕಲಿತರೆ, ಆಗ ಈ ದುಡ್ಡು ವಿನಿಯೋಗ ಮಾಡಿದ್ದಕ್ಕೆ ಅನುಕೂಲವಾಗುತ್ತದೆ. ಇದನ್ನೇ ನಂಬಿಕೊಂಡು ಜನರೇನಿದ್ದಾರೆ, ಅವರೂ ಕೂಡ ಬದುಕುವುದಕ್ಕಾಗುತ್ತದೆ. ನಾನು ಇಲ್ಲಿ ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಪ್ರತಿಯೊಂದು ಉದ್ದೇಶಕ್ಕೆ ಬಿಡುಗಡೆ ಮಾಡಿದಂತಹ ಹಣ ಸೋರಿ ಹೋಗಬಾರದು. ನಮ್ಮ ತಾಲ್ಲೂಕಿನಲ್ಲಿರುವ ಗುರುಡುಗುತ್ತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಅಂಗಡಿಗಳ ಬಗ್ಗೆ ನಾನು ಈಗ ಮಾತನಾಡಬಯಸುತ್ತೇನೆ. ಅಲ್ಲಿ ಅಂಗಡಿಗಳನ್ನು ಹರಾಜು ಮಾಡಬೇಕೆಂದು ಗ್ರಾಮ ಪಂಚಾಯಿತಿಯ ಕಾರ್ಯಾಲಯದಿಂದ ದಿನಾಂಕ 1.5.98ರಂದು ಹರಾಜು ಪ್ರಕಟಣೆಯೊಂದನ್ನು ಹೊರಡಿಸಲಾಯಿತು.

5-30 ಪಿ.ಎಂ

9.5.98ರಲ್ಲಿ ಹರಾಜು ಇದೆ, ಅಂಗಡಿಗಳನ್ನು ಹರಾಜು ಮುಖಾಂತರ ತೆಗೆದುಕೊಳ್ಳುವುದಕ್ಕೆ ಎಲ್ಲರೂ ಬರಬಹುದು ಎಂದು ಇಶ್ಯೂ ಮಾಡುತ್ತಾರೆ. ಅವತ್ತು ಕಾರ್ಯದರ್ಶಿ ರಜ ಹಾಕುತ್ತಾರೆ. ಈ ಹರಾಜು ಇಲ್ಲಿಗೇ ಮುಗಿಯುತ್ತದೆ. ಅವತ್ತು ಹರಾಜು ನಿಂತರೆ ಪುನಃ ಹರಾಜು ಹಾಕಬೇಕು. ಅದು ಬಿಟ್ಟು ಪುನಃ ಅವರು 150 ಏನೋ ಕಡಿಮೆ ರೇಟ್‌ಗೆ ಪಂಚಾಯಿತಿಯಲ್ಲಿ ಕೊಡುತ್ತಾರೆ. ಇಲ್ಲದೆ ಇಂತಹವರ ಮೇಲೆ ನಾವು ಗಮನಹರಿಸದೆ ಇದ್ದರೆ ಜಿಲ್ಲಾ ಪಂಚಾಯಿತಿಗೆ ಬರೆದಿದ್ದಾರೆ, ತಾಲ್ಲೂಕು ಪಂಚಾಯಿತಿಗೆ ಬರೆದಿದ್ದಾರೆ. ಇದನ್ನು ಯಾವುದಕ್ಕೆ ಬಳಸಿದ್ದಾ ಅದು ಬಹಳ ಮುಖ್ಯ. ಸ್ಕೂಲ್ ಇದೆ, ದೇವಸ್ಥಾನ ಇದೆ, ಮೂರು ನಾಲ್ಕು ಸ್ಕೂಲ್ ಇದೆ, ಕೇವಲ 25 ಹೆಜ್ಜೆ ಕೂಡ ಇಲ್ಲ. ಅಲ್ಲಿ ಸಾರಾಯಿ ಅಂಗಡಿ ಮಾಡಿದ್ದಾರೆ. ಅದಕ್ಕೆ ಪೋಲಿಸ್ ಸೂಪರಿಂಟೆಂಡೆಂಟ್ ಕೂಡ ವಿಸಿಟ್ ಮಾಡಿದ್ದಾರೆ. ಮಾಡಿರುವುದು ಅಕ್ರಮ, ಲೈಸನ್ಸ್ ತೆಗೆದುಕೊಂಡಿಲ್ಲವೆಂದು ಎಲ್ಲ ಬರೆದರೆ ಬಹುಶಃ ಎಲ್ಲ ಕಡೆ ಓಡಾಡಿ ಆಯಿತು. ಆದರೆ ಅವರು ಮಾತ್ರ ತೆಗೆಯಲಿಲ್ಲ. ಇವತ್ತು ಸಾರಾಯಿ ಅಂಗಡಿ ನಡೆಸುತ್ತಿದ್ದಾರೆ. ಅದೂ ಸ್ಕೂಲ್ ಮತ್ತು ದೇವಸ್ಥಾನದ ಪಕ್ಕದಲ್ಲಿ ಇಂತಹ ಕಾರ್ಯದರ್ಶಿಯವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ, ಇಂಥದ್ದಕ್ಕೆ ಸ್ವಲ್ಪ ಸೂಕ್ಷ್ಮವಾಗಿ ತಾವು ನೋಡದೆ ಇದ್ದರೆ ಅದು ಬರೀ ಕಾನೂನು ಪುಸ್ತಕದಲ್ಲಿ ಇದ್ದು ಬಿಡುತ್ತದೆ. ಕಾರ್ಯರೂಪಕ್ಕೆ ಬರುವುದಿಲ್ಲ.

ಯಾವ ಕಾನೂನಾಗಲಿ, ನಾವು ಮಾಡಿದ ಮೇಲೆ ಯಾವ ಕಾನೂನನ್ನು ಅಧಿಕಾರದ ಮುಖಾಂತರ ಕಾರ್ಯರೂಪಕ್ಕೆ ನಾವು ತರುವುದಿಲ್ಲ. ಈ ಸದನದಲ್ಲಿ ನಾವು ಏನು ಮಾಡಿದರೂ ಅದನ್ನು ಕಾರ್ಯರೂಪಕ್ಕೆ ತರುವವರು ಅಧಿಕಾರಿಗಳು. ಅವರು ಮಾಡುತ್ತಾರೆ ಬಿಡಿ ಇದನ್ನು ಮೂಲೆಗೆ ಬಿಸಾಕೋಣ ಎಂದು ಹೇಳಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ಸದನಕ್ಕೆ ಮರ್ಯಾದೆ ಉಳಿಯುವುದಿಲ್ಲ, ಇಂಥವನ್ನು ತಾವು ಸ್ವಲ್ಪ ಸ್ಟ್ರಿಕ್ಟಾಗಿ ಸರಿಯಾಗಿ ನೋಡಿಕೊಳ್ಳುವುದಕ್ಕೆ ಅಧಿಕಾರಿಗಳ ಮೇಲೆ ಪನಿಶ್‌ಮೆಂಟ್ ಪದ್ಧತಿ ಮಾಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ವಾಟರ್ ಸಪ್ಲೈ ಬಗ್ಗೆ ಈಗಾಗಲೇ ಬಹಳ ಚರ್ಚೆಯಾಗಿದೆ, ಆದ್ದರಿಂದ ಅದರ ಬಗ್ಗೆ ಮಾತನಾಡಬೇಡಿ ಎಂದು ಹೇಳಿದರೂ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ಆದರೆ ಒಂದು ವಿಷಯ ತಮಗೆ ತಿಳಿಸುತ್ತೇನೆ, ತಮಗೂ ನಾನು ಕಾಗದ ಬರೆದಿದ್ದೇನೆ. ನಮ್ಮ ರಾಜ್ಯ ಸಚಿವರು ಕೋಲಾರ ಜಿಲ್ಲಾ ಪರಿಷತ್ತಿಗೆ ಬಂದಾಗ ನೇರವಾಗಿ ಪತ್ರವನ್ನು ಕೊಟ್ಟಿದ್ದೇನೆ. ಅಡಿಷನಲ್ ಬೋರ್‌ವೆಲ್ಸ್‌ಗಾಗಿ ನಮ್ಮ ರೆವಿನ್ಯೂ ಮಂತ್ರಿಗಳು ಏನೋ ದುಡ್ಡು ಕೊಟ್ಟಿದ್ದಾರೆ. ಅದಕ್ಕಾಗಿ ಈ ಸದನದಲ್ಲಿ ನಾನು ಅವರಿಗೆ ವಂದಿಸುತ್ತೇನೆ. ಅದರಲ್ಲಿ ರಿಪ್ಲೇಸ್‌ಮೆಂಟ್ ಬಹಳ ಇದೆ. ಪಂಪ್‌ಸೆಟ್‌ಗಳ ವಿಚಾರದಲ್ಲಿ ನಮ್ಮ ಜಿಲ್ಲಾ ಮಂತ್ರಿಗಳಿದ್ದರು, ಡೆಪ್ಯುಟಿ ಕಮೀಷನರ್ ಇದ್ದರು, ಎಲ್ಲಾ ಶಾಸಕರು ಸೇರಿದ್ದೆವು, ಪಂಪ್‌ಸೆಟ್‌ಗಳ ರಿಪ್ಲೇಸ್‌ಮೆಂಟ್ ಬಗ್ಗೆ ದೊಡ್ಡದಾಗಿ ಚರ್ಚೆಯಾಯಿತು. ಇದರಿಂದ ವಾಟರ್ ಸಪ್ಲೈ ಸ್ಕೀಮ್‌ಗೆ ಕೊಟ್ಟಿರುವ ದುಡ್ಡಿನಲ್ಲಿ ಪಂಪ್ ಹಾಕಿಸುವುದೋ, ಬೋರ್‌ವೆಲ್ ಹಾಕಿಸುವುದೋ, ಪಂಪ್‌ಸೆಟ್ ಕೊಂಡುಕೊಳ್ಳುವುದೋ ಗೊತ್ತಿಲ್ಲ 47 ಬೋರ್‌ವೆಲ್‌ಗಳಿಗೆ ಮೊಬಲಗು ಮಂಜೂರಾಗಿದೆ. ಐದಾರು ವರ್ಷಗಳಿಂದ ಐದು ಹೆಚ್.ಪಿ., ಆರು ಹೆಚ್.ಪಿ. ಏಳು ಹೆಚ್.ಪಿ ಪಂಪ್‌ಸೆಟ್‌ಗಳನ್ನು ಹಾಕಿಕೊಂಡಿದ್ದೇವೆ. ಮನೆಗಳಲ್ಲಿ ಕೂಡ 500 ಅಡಿ, 600 ಅಡಿ, 700 ಅಡಿ ಆಳ ಹೋಗಿದೆ. ಮಿನಿ ವಾಟರ್ ಸಪ್ಲೈ ಸ್ಕೀಮ್, ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್ ಎಂದು ಇದೆ, ಅಂತಹ ಕಡೆ ಬಹಳ ಆಳ ಹೋಗಿದೆ. ಅಲ್ಲಿ ಐದು ಹೆಚ್‌ಪಿ, ಕ್ಯಾನ್ಸಲ್ ಮಾಡುವುದು, ರಿಪ್ಲೇಸ್‌ಮೆಂಟ್ ಆಫ್ ಪಂಪ್‌ಸೆಟ್ಸ್ ಎಂದು ಹೇಳುವುದು ಆಗಿದೆ. 47 ಬೋರ್‌ವೆಲ್‌ಗಳನ್ನು ಕೇಳಿ ತಮಗೂ ಪತ್ರ ಬರೆದಿದ್ದೆವು. ತಾವು ಯಾವ ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ ಅದನ್ನು ನಾನು ಸ್ವತಃ ನೋಡುತ್ತೇನೆಂದು ಪೇಪರ್‌ನಲ್ಲಿ ಒಂದು ಸಾರಿ ಹೇಳಿದ್ದೀರಿ. ಮುಖ್ಯಮಂತ್ರಿಗಳಿಗೂ, ಗೃಹ ಸಚಿವರಿಗೂ ಕೇಳಿದ್ದೆ. ಇವತ್ತಿನವರೆಗೂ ಒಂದು ಪಂಪ್ ಸೆಟ್ ಬರಲಿಲ್ಲ. ಅಲ್ಲಿ ಯಾವ ರೀತಿ ತೊಂದರೆಯಾಗುತ್ತದೆ. ಎನ್ನುವುದನ್ನು, ಪಂಪ್‌ಸೆಟ್ಸ್ ಅಂಡ್ ಅಡಿಷನಲ್ ಸಿಸ್ಟಮ್, ರಿಪ್ಲೇಸ್‌ಮೆಂಟ್ ಆಫ್ ಪೈಪ್ ಇವು ಸ್ವಲ್ಪ ತಾವು ನೋಡಬೇಕೆಂದು ಹೇಳಿ, ಈ ಸದನದಲ್ಲಿ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನಾವು ಯಾವಾಗಲೂ ಹರಿಜನರ ಬಗ್ಗೆ ಹೆಚ್ಚಿಗೆ ಮಾಡನಾಡುತ್ತೇನೆ ಎಂಬುದು ತಮಗೆ ಎಲ್ಲ ಗೊತ್ತಿದೆ. ಹರಿಜನರು ಗ್ರಾಮಗಳ ಪಕ್ಕದಲ್ಲಿರುತ್ತಾರೆ. ಕಾಲೋನಿಗಳು ಸ್ವಲ್ಪ ಬೆಳೆಯುತ್ತಿರುತ್ತವೆ. ಸ್ವಲ್ಪ ಮುಂದೆ

ಹೋಗುತ್ತಿರುತ್ತವೆ. ಅಂತಹ ಸಂದರ್ಭದಲ್ಲಿ ರಾತ್ರಿ ಹೊತ್ತು ಹಾವುಗಳ ಕಾಟ ತಡೆಯುವುದಕ್ಕಾಗುವುದಿಲ್ಲ. ಆ ಹರಿಜನರ ಕಾಲೋನಿಗಳಿಗೆ ಸ್ಟ್ರೀಟ್ಲೈಟ್ಸ್ ಹಾಕುವುದಕ್ಕೆ 2-3 ವರ್ಷಗಳಿಂದ ಸಕಲ ಪ್ರಯತ್ನ ಮಾಡುತ್ತಿದ್ದೇವೆ. ಇನ್ನುವರೆಗೆ ಸ್ಟ್ರೀಟ್‌ಲೈಟ್ ಸೌಲಭ್ಯ ಕೊಟ್ಟಿಲ್ಲ. ಹರಿಜನರು ಪಾಪ ಗುಡಿಸಲು ಹಾಕಿಕೊಂಡಿರುತ್ತಾರೆ.

ಶ್ರೀ ಕೆ.ಹೆಚ್.ರಂಗನಾಥ್: ಪಾಪ ಗುಡಿಸಲಿನಲ್ಲಿರುತ್ತಾರೆಂದು ಹೇಳುತ್ತೀರಿ, ಏನು ಮಾಡುವುದು, ನೀವು ಗುಡಿಸಲಿನಲ್ಲಿ ಇಟ್ಟಿದ್ದರಿಂದ ಗುಡಿಸಲಿನಲ್ಲಿದ್ದಾರೆ.

ಶ್ರೀ ಚೌಡರೆಡ್ಡಿ: ಹಳ್ಳಿಗಳಲ್ಲಿ ಹೋದಾಗ ನಾನು ಕಂಡ ದೃಶ್ಯವನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

ಶ್ರೀ ಕೆ.ಹೆಚ್.ರಂಗನಾಥ್: ನಾವು ಏನು ಅರಮನೆ ದೃಶ್ಯ ಕಂಡಿದ್ದೇವಾ? ಎಲ್ಲ ಸದಸ್ಯರೂ ಅದನ್ನೇ ಕಂಡಿರುವುದು.

ಶ್ರೀ ಸಿ.ಬೈರೇಗೌಡ: ಮಾನ ಉಪಾಧ್ಯಕ್ಷರೆ, ಅರಮನೆಗಳನ್ನು ಕಂಡಿದ್ದೇವೆ. ಅನೇಕ ಜನ ಅಧಿಕಾರಸ್ಥರು ಇದ್ದಾರೆ ಅವರ ಅರಮನೆಗಳನ್ನು ಕಂಡಿದ್ದೇನೆ.

ಶ್ರೀ ಕೆ.ಹೆಚ್.ರಂಗನಾಥ್: ಉಪಾಧ್ಯಕ್ಷರೆ ತಮ್ಮ ಕಡೆ ಅಧಿಕಾರಸ್ಥರು ಹಳ್ಳಿಗಳಲ್ಲಿ ಅರಮನೆ ಕಟ್ಟಿಕೊಂಡಿದ್ದಾರಾ?

ಶ್ರೀ ಕೆ.ಶ್ರೀನಿವಾಸಗೌಡ: ಶ್ರೀ ರಂಗನಾಥ್‌ರವರು ಅರಮನೆ ಕಟ್ಟಿಕೊಂಡಿಲ್ಲ ಅರೆ ಮನೆ ಎಂದರೆ ಅರ್ಧಂಬರ್ಧ ಮನೆ ಕಟ್ಟಿದ್ದಾರೆ.

ಶ್ರೀ ಚೌಡರೆಡ್ಡಿ: ನಾನು ವಿಚಾರಿಸಿದಾಗ ಏನು ಹೇಳಿದರು, ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂನಲ್ಲಿ ಬರುತ್ತದೆ. ಇದನ್ನು ಬೇಗ ಮಾಡಬೇಕಾಗುತ್ತದೆ ಎಂದು ಹೇಳಿದರು. ಅದಕ್ಕೆ ತಾಲ್ಲೂಕು ಪಂಚಾಯಿತಿ ಸಮಿತಿಯಲ್ಲಿ ಜಿಲ್ಲಾಪರಿಷತ್ತಿನಲ್ಲಿ ಎಲ್ಲ ಕಡೆ ಹೇಳಿದ್ದೇನೆ. ರೂರಲ್ ಎಲೆಕ್ಟ್ರಿಫಿಕೇಷನ್ ಸಿಸ್ಟಮ್‌ನಲ್ಲಿ ಇದು ಆಗಬೇಕು. ನಾವು ಅವರ ಮೇಲೆ ಹೇಳುವುದು, ಇನ್ನೊಬ್ಬರ ಮೇಲೆ ಹೇಳುವುದು ಹೀಗೆ ಮಾಡಿಕೊಂಡು ಹೋದರೆ ಆಗುವುದಿಲ್ಲ. ಹರಿಜನ ಕಾಲೋನಿಯಲ್ಲಿ ನಾವು ಸ್ಟ್ರೀಟ್ ಲೈಟ್ ಕೊಟ್ಟಾಗ ಅನುಕೂಲವಾಗುತ್ತದೆ. ಎರಡು-ಮೂರು ವರ್ಷಗಳಿಂದ ಆ ಪ್ರಯತ್ನ ನಡೆದಿದೆ. ಗ್ರಾಮ ಪಂಚಾಯಿತಿಗಳಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಬೇಕಾದರೆ ಯಾವ ರೀತಿ ಆದ್ಯತೆ ಕೊಡಬೇಕು ಅಂದರೆ ನಮ್ಮ ಹರಿಜನ ಕಾಲೋನಿಗಳಿಗೆ ಮೊದಲು ಆದ್ಯತೆ ಕೊಡಬೇಕು. ಏಕೆಂದರೆ, ಅವರು ಪಕ್ಕದಲ್ಲಿರುತ್ತಾರೆ. ಅಲ್ಲಿ ಹೆಚ್ಚಿಗೆ ಕಸ ಕಡ್ಡಿ ಇರುತ್ತದೆ. ಹಾವುಗಳು ಬರುವುದು ಜಾಸ್ತಿ. ಆದ್ದರಿಂದ ಅಲ್ಲಿಗೆ ಮೊದಲು ಆದ್ಯತೆ ಕೊಡಬೇಕೆಂದು ನಾನು ತಮ್ಮಲ್ಲಿ ಕೇಳುತ್ತೇನೆ. ಜಿಲ್ಲಾ ಪರಿಷತ್ತಿನಲ್ಲಿ ಕೆಲವು ಕಡೆ ಸಿಸ್ಟಮ್ ಚೆನ್ನಾಗಿ ಇದೆ. ಆದರೆ ಏನಾಗುತ್ತದೆ ಎಂದರೆ, ಪರ್ಚೇಸ್ ಕಮಿಟಿ ಬಂದಿದೆ, ಯಾರ

ಬಗ್ಗೆ ಮಾತನಾಡುವುದು ಹೇಳುವುದು ಆಗುವುದಿಲ್ಲ. ಪರ್ಚೇಸ್ ಕಮಿಟಿಯಲ್ಲಿ ಪಂಪ್‌ಸೆಟ್ಸ್ ಖರೀದಿ ಮಾಡುತ್ತಾರೆ, ಅದು ಯಾವ ರೀತಿ ಇದೆ ಎಂದರೆ ನಿಜವಾಗಿ ಒಬ್ಬ ಹಳ್ಳಿಯವನು ತನ್ನ ಸ್ವಂತ ಬೋರ್‌ಗೆ ಹಾಕುವ ಪಂಪ್‌ಸೆಟ್‌ಗಳನ್ನು ಕೊಂಡುಕೊಳ್ಳಬೇಕಾದರೆ ಅವನಿಗೆ ಏನೂ ಗೊತ್ತಾಗುವುದಿಲ್ಲ. ಅವನು ಒಳ್ಳೆಯ ಪಂಪ್‌ಸೆಟ್ ತಂದು ಹಾಕಿದರೂ ಸರಿಯಾಗಿ 5 ರಿಂದ 10 ವರ್ಷ ಆದರೂ ಕೆಲಸ ಮಾಡುವುದಿಲ್ಲ. ಇದಕ್ಕೆ ಒಂದು ಕಮಿಟಿ ಇದೆ, ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ಇರುತ್ತಾರೆ. ಇಂತಹವರು ಸೇರಿ ಆ ಪಂಪ್‌ಸೆಟ್ ತೆಗೆದುಕೊಂಡರೆ ಕೇವಲ ಎರಡು-ಮೂರು ವರ್ಷ ಕೂಡ ಕೆಲಸ ಮಾಡುವುದಿಲ್ಲ. ಇದರಿಂದ ನಿಜವಾಗಿ ಎಷ್ಟು ಹಣ ಹೋಗುತ್ತದೆ, ಕುಡಿಯುವ ನೀರಿಗೆ ಏನು ತೊಂದರೆಯಾಗುತ್ತದೆ ಇದನ್ನು ಸ್ವಲ್ಪ ಕ್ವಾಲಿಟಿ ಯಾವ ರೀತಿ ಮೈಂಟೇನ್ ಮಾಡಬೇಕು.

ಇನ್ನು ಪಂಪ್‌ಸೆಟ್‌ಗಳನ್ನು ತೆಗೆದುಕೊಳ್ಳುವಾಗ ಯಾವ ಕ್ವಾಲಿಟಿಯ ಪಂಪ್‌ಸೆಟ್‌ಗಳನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ನಿಮ್ಮ ಅಧಿಕಾರಿಗಳು ಹೆಚ್ಚಿಗೆ ಗಮನ ಕೊಡಬೇಕೆಂದು ತಮಗೆ ಬಿನ್ನವಿಸಿಕೊಳ್ಳುತ್ತೇನೆ. ಇನ್ನೊಂದು ವಿಚಾರ, ಗ್ರಾಮಗಳಲ್ಲಿ ಏನಾಗಿದೆ ಎಂದರೆ ಖಾತಾ ಬದಲಾವಣೆ, ಇದರಲ್ಲಿ ಮುಖ್ಯವಾಗಿ ಸೆಕ್ರೆಟರಿಯವರು ಆ ಮನೆಗಳ ಖಾತೆ ಬದಲಾವಣೆ, ಸೈಟುಗಳ ಖಾತೆ ಬದಲಾವಣೆ ಮಾಡಬೇಕಾದರೆ ಕೆಲವು ಊರುಗಳಲ್ಲಿ ಏನು ಹೇಳುತ್ತಾರೆ ಎಂದರೆ ಪುಸ್ತಕಗಳು ಅಧ್ಯಕ್ಷರ ಹತ್ತಿರ ಇದೆ ನನ್ನ ಹತ್ತಿರ ಇಲ್ಲ ಎನ್ನುತ್ತಾರೆ. ಈ ವಿಚಾರವಾಗಿ ನಾನು ಹೈಕೋರ್ಟಿನಲ್ಲಿ ಕೇಸ್ ಹಾಕೋಣವೆಂದು ಇದ್ದೆ. ನೀವು ಅಧ್ಯಕ್ಷರನ್ನು ಕೇಳಲು ಹೋದರೆ, ಹೋಗಯ್ಯ ನೀನು ಯಾವ ಪಾರ್ಟಿಯವನೋ ಏನೋ ನಾನು ಏನು ಮಾಡಲಿ ಎಂದು ಹೇಳುತ್ತಾನೆ. ಅದಕ್ಕೆ ನೋಡಿ ಒಂದು ಲೆಟರ್ ಕೊಟ್ಟಿದ್ದಾರೆ, ಅದರಲ್ಲಿ ನನ್ನ ಹತ್ತಿರ ಪುಸ್ತಕಗಳು ಇಲ್ಲ, ಅಧ್ಯಕ್ಷರ ಹತ್ತಿರ ಇದೆ ಎಂದು ಒಬ್ಬರು ಬರೆದುಕೊಟ್ಟಿದ್ದಾರೆ. ಈ ರೀತಿಯಾದರೆ ಈ ವ್ಯವಸ್ಥೆ ಯಾವರೀತಿ ನಡೆಯುತ್ತದೆ ಎಂದು ಸ್ವಲ್ಪ ಆಲೋಚನೆ ಮಾಡಬೇಕು. ಇದು ಸಾಧುವೆ? ಎನ್ನುವುದನ್ನು ನೀವು ತಿಳಿದುಕೊಳ್ಳಿ. ಎಂದರೆ ನಮ್ಮ ವ್ಯವಸ್ಥೆ ಯಾವರೀತಿ ನಡೆಯುತ್ತಿದೆ? ಇದನ್ನೆಲ್ಲಾ ತಮ್ಮ ಕಾಲದಲ್ಲಿ ಸರಿಪಡಿಸಬೇಕೆಂದು ಹಾಗೂ ನ್ಯಾಯ ದೊರಕಿಸಿಕೊಡಬೇಕೆಂದು ತಮ್ಮನ್ನು ನಾನು ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮಗಳಲ್ಲಿ ಕೆಲಸಗಳನ್ನು ಮಾಡತಕ್ಕಂಥಾದ್ದು, ಅದು ಬಹುಶಃ ಅನೇಕ ಸದಸ್ಯರಿಗೆಲ್ಲಾ ಗೊತ್ತಿದೆ. ಅವರು ಹೇಳುತ್ತಾರೆ, ಎಲ್ಲಾ ಪಂಚಾಯಿತಿಯಲ್ಲಿ ನಾವು ಅಧಿಕಾರವನ್ನು ವಿಕೇಂದ್ರಿಕರಣ ಮಾಡಿದೆವು ಎಂದು. ಅದೇರೀತಿ ಕರ್‌ಪ್ಷನ್ ಕೂಡ ಕೆಳಗಿನಿಂದ ಮೇಲುಗಡೆಯವರೆಗೂ ಬಲೋ ರೀತಿ ಮಾಡಿದ್ದಾರೆ. ಅದು ವ್ಯವಸ್ಥೆಯಿಂದ ಅಲ್ಲ. ಆದುದರಿಂದ ಸರಿಯಾದ ರೀತಿಯಲ್ಲಿ ಅಧಿಕಾರಿಗಳನ್ನು ಇಟ್ಟುಕೊಳ್ಳದೆ ಇರುವುದಕ್ಕೋಸ್ಕರ ಈ ರೀತಿಯಾಗುತ್ತಿದೆ. ಇದರಲ್ಲಿ ಹೆಚ್ಚಾಗಿ ಎಲ್ಲಾ ಸದಸ್ಯರು ಸ್ವಲ್ಪ ಆಲೋಚನೆ ಮಾಡಬೇಕು. ನಮ್ಮ ಮಾಜಿ ಸಚಿವರಾದ ಸಿಂಧ್ಯರವರು ಹೇಳುತ್ತಿದ್ದರು,

ಅನೇಕ ಜನ ಹೇಳುತ್ತಾರೆ, ಒಂದು ಟೆಂಡರ್ ಕಾಲ್‌ಫರ್ ಮಾಡಿದರೆ ಅದನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಳ್ಳಬೇಕು ಎಂದು. ಈಗ ಏನಾಗಿದೆ ಎಂದರೆ ಅವರು ಡಿಪಾರ್ಟ್‌ಮೆಂಟಲ್ ವರ್ಕ್ ಎಂದು ಬಿಡುವುದು. ವಾಟರ್ ಸಪ್ಲೈ, ಚರಂಡಿ, ರೋಡ್ ಎಲ್ಲಾ ಡಿಪಾರ್ಟ್‌ಮೆಂಟಲ್ ವರ್ಕ್ಸ್. ಅದಕ್ಕೆ ದೇವರೇ ದಿಕ್ಕು. ಅಲ್ಲಿ ಕೆಲಸ ಆಗಿದೆಯೋ, ಇಲ್ಲವೊ ಭಗವಂತನಿಗೆ ಗೊತ್ತು. ಬಿಲ್ಲುಗಳು ಆಗುತ್ತಿವೆ, ದುಡ್ಡು ಖರ್ಚಾಗುತ್ತಿದೆ. ಯಾವರೀತಿ ಈ ಒಂದು ವ್ಯವಸ್ಥೆ ನಡೆಯುತ್ತಿದೆ ಎಂದರೆ ಸ್ಟ್ರೀಟ್ ಲೈಟ್ ತೆಗೆದುಕೊಂಡಿದ್ದೇವೆ ಎಂದು ಬಿಲ್ ಇರುತ್ತದೆ. ಆದರೆ ಆ ಊರಿನಲ್ಲಿ ಬೆಳಕು ಮಾತ್ರ ಇರುವುದಿಲ್ಲ. ಅಂಥದ್ದನ್ನು ಯಾವರೀತಿ ಕಂಟ್ರೋಲ್ ಮಾಡಬೇಕೆನ್ನುವುದನ್ನು ತಾವು ಆಲೋಚನೆ ಮಾಡಿ. ಏಕೆಂದರೆ ಲಕ್ಷಾಂತರ ರೂಪಾಯಿ ಈ ರೀತಿ ವ್ಯಯ ಮಾಡುತ್ತಿದ್ದೇವೆ. ಅದಕ್ಕೆ ಒಂದು ರೀತಿಯಲ್ಲಿ ಕಂಟ್ರೋಲ್ ಮಾಡುವ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ನಾನು ಇನ್ನು ಅನೇಕ ವಿಷಯಗಳ ಬಗ್ಗೆ ಮಾತನಾಡುವುದಿದ್ದರೂ ಕೂಡ ಬೇರೆ ಸದಸ್ಯರು ಮಾತನಾಡುವವರಿರುವುದರಿಂದ ನಾನು ಇಲ್ಲಿಗೆ ಮುಕ್ತಾಯ ಮಾಡುತ್ತಾ, ಅವಕಾಶಮಾಡಿಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್(ಮುಂಡರಗಿ): ಮಾನ್ಯ ಉಪಾಧ್ಯಕ್ಷರೆ, ಇವತ್ತು ಈ ಬೇಡಿಕೆಗಳ ಬಗ್ಗೆ ಮಾತನಾಡುವುದಾದರೆ, ಮೊದಲನೆಯದಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಸಕ್ಕರೆ, ಮೀನುಗಾರಿಕೆ, ವೈದ್ಯಕೀಯ ಮತ್ತು ಆರೋಗ್ಯ. ಇದರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆಯನ್ನು ಒಬ್ಬರು ಮಾನ್ಯ ಹಿರಿಯ ಸಚಿವರಿಗೆ ಕೊಟ್ಟಿದ್ದಾರೆ. ಬಹಳ ಸಂತೋಷ ಅವರು ಹಿಂದೆ ಕೂಡ ಈ ಖಾತೆಯನ್ನು ನಿರ್ವಹಿಸಿದವರು. ಅಷ್ಟೇ ಅಲ್ಲ ಒಳ್ಳೆಯ ಹೆಸರು ಇಟ್ಟುಕೊಂಡವರು. ಆರ್ಥಿಕ ಸಚಿವರಾಗಿ ಇಡೀ ರಾಜ್ಯದಲ್ಲಿ ಒಳ್ಳೆಯವರು ಎಂದು ಹೆಸರು ಪಡೆದವರು. ಹೀಗೆ ಹಿರಿಯರಾದಂತಹ ಸಚಿವರು ಈ ಖಾತೆಯನ್ನು ನಿರ್ವಹಿಸುತ್ತಿರುವುದರಿಂದ ಮುಂದಿನ ಐದು ವರ್ಷಗಳಲ್ಲಿ ನೀವು ಇರುತ್ತೀರಿ ಎಂದು ನಂಬಿಕೊಳ್ಳುತ್ತೇವೆ. ತಾವು ಇರುತ್ತೀರಲ್ಲಾ? ಹೇಳುವುದಕ್ಕಾಗುವುದಿಲ್ಲ. ಅನುಮಾನ ಬರುತ್ತದೆ. ಸರ್ಕಾರ ಇರುತ್ತದೆ, ಅವರು ಇರುತ್ತಾರೋ ಇಲ್ಲವೋ ಈ ಪರಿಸ್ಥಿತಿ ನೋಡಿದರೆ. ನೀವು ಸುಮ್ಮನೆ ಇರುತ್ತೀರಿ, ದೊಡ್ಡಮನುಷ್ಯರು ನೀವು. ಆದರೆ ತಮ್ಮ ಅವಧಿ ಈ ಐದು ವರ್ಷಗಳಲ್ಲಿ ಒಂದು ಕ್ರಾಂತಿಕಾರಕವಾದಂತಹ ಬದಲಾವಣೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡುತ್ತೀರೆಂದು ನಾನು ನಿರೀಕ್ಷಣೆ ಮಾಡಿದ್ದೇನೆ. ಪೂಜ್ಯ ಗಾಂಧೀಜಿಯವರು ಕಂಡಂತಹ ಗ್ರಾಮ ಸ್ವರಾಜ್ಯದ ಒಂದು ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ತಾವು ಪ್ರಯತ್ನ ಮಾಡಬೇಕೆಂದು ನಾನು ಪ್ರಾಮಾಣಿಕವಾಗಿ ತಮ್ಮನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಬಹುಶಃ ಗ್ರಾಮ ಪಂಚಾಯತ್, ಗ್ರಾಮೀಣ ವ್ಯವಸ್ಥೆ ಇದೇನು

ಹೊಸದಲ್ಲ. ಇದು ಅನಾದಿಕಾಲದಿಂದಲೂ ಇದೆ. ಹಿಂದೆ ಈ ರೀತಿ ಎಲೆಕ್ಷನ್ ಇರಲಿಲ್ಲ. ಆದರೆ ಅವರೆ ಒಂದು ಪಂಚಾಯತ್ ಮಾಡಿಕೊಂಡು ತಮ್ಮ ಊರಿನ ಅಭಿವೃದ್ಧಿ ಕೆಲಸ ಮಾಡಿಕೊಳ್ಳುವುದು. ಊರಿನ ನ್ಯಾಯ ನೀತಿ ಪ್ರತಿಯೊಂದು ಹಂತದಲ್ಲೂ ಕೂಡ ಈ ಒಂದು ಪಂಚಾಯತ್ ವ್ಯವಸ್ಥೆ ಮಾಡಿಕೊಂಡು ಇದ್ದವು. ತದನಂತರ ಈ ಒಂದು ಪಂಚಾಯತ್ ವ್ಯವಸ್ಥೆ ಬಂತು. ಹಿಂದೆ ತಮಗೆ ಗೊತ್ತಿದ್ದ ಹಾಗೆ ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ್ ಎಂದು ಇತ್ತು. ಆನಂತರ ಲೋಕಲ್ ಬೋರ್ಡ್ ಆದಮೇಲೆ ತಾಲ್ಲೂಕು ಬೋರ್ಡ್ ಎಂದು ಬಂತು. ಪಂಚಾಯಿತಿಗಳು ಇದ್ದವು. ಆಗ ಚಿಕ್ಕಚಿಕ್ಕ ಪಂಚಾಯಿತಿಗಳು ಇದ್ದವು. ಪೂಜ್ಯ ಗಾಂಧೀಜಿ ಮತ್ತು ನೆಹರು ಕೂಡ ಹೇಳುತ್ತಿದ್ದರು. ಪ್ರತಿಯೊಂದು ಹಳ್ಳಿಗೂ ಒಂದು ಪಂಚಾಯತ್ ಹಾಗೂ ಒಂದು ಸೊಸೈಟಿ ಇರಬೇಕು ಎಂದು. ಗ್ರಾಮ ಪಂಚಾಯಿತಿಯಲ್ಲಿ ಸೊಸೈಟಿ ಇದ್ದರೆ ಮಾತ್ರ ಈ ದೇಶದ ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಿದೆ. ಈ ದೇಶದ ಗ್ರಾಮೀಣ ಪರಿಸರ ಅಭಿವೃದ್ಧಿ ಹೊಂದಿದರೆ ಮಾತ್ರ ಈ ದೇಶ ಅಭಿವೃದ್ಧಿಯಾಗುತ್ತದೆಂದು ಗಾಂಧೀಜಿ ಹಾಗೂ ನೆಹರುರವರಿಗೆ ಇತ್ತು. ಆ ರೀತಿಯಾದ ವ್ಯವಸ್ಥೆಯನ್ನು ಕೂಡ ಬೆಳೆಸಿಕೊಂಡು ಬಂದರು. ಆದರೆ ಪುನಃ ಏನೇನೋ ಆಗಿ ಪಂಚಾಯಿತಿಗಳ ವ್ಯವಸ್ಥೆ ಪ್ರಾರಂಭವಾಯಿತು. ತಮಗೆ ಗೊತ್ತಿದೆ, ಇವತ್ತು ಪಂಚಾಯತ್ ಎಂದರೆ ಏನಾಗಿದೆ ಸರ್ಕಾರದಿಂದ ಬರತಕ್ಕಂಥ ಹಣ, ಅದು ಅಷ್ಟೇ ಪಂಚಾಯತ್ ಎಂದು ಆಗಿಹೋಗಿದೆ. ತಮ್ಮ ಸಂಪನ್ಮೂಲಗಳನ್ನು ಯಾರೂ ಕೂಡ ಕ್ರೋಢೀಕರಿಸಿ ಕೊಳ್ಳುವುದಿಲ್ಲ. ಏನಾದರೂ ಒಂದು ರಿಪೇರಿ ಮಾಡಬೇಕೆಂದರೆ ಸರ್ಕಾರದಿಂದ ಏಕೆ ರೊಕ್ಕ ಬರಲಿಲ್ಲವೆಂದು ಪಂಚಾಯಿತಿ ಮೆಂಬರ್ ಎಂಎಲ್‌ಎ ಮತ್ತು ಮಂತ್ರಿಗಳನ್ನು ಕೇಳುತ್ತಾರೆ. ಇವತ್ತು ಈ ರೀತಿಯ ವ್ಯವಸ್ಥೆಯಾಗಿದೆ. ಈ ಪಂಚಾಯಿತಿಯಲ್ಲಿ ನಾವು ಹಿಂದೆ ನೋಡುತ್ತಿದ್ದೆವು. ನಾವು ಪಂಚಾಯಿತಿ ಮೆಂಬರ್ ಆಗಿದ್ದೆವು. ಆಗ ಯಾವ ಸರ್ಕಾರದಿಂದ ಕೂಡ ದುಡ್ಡು ಬರುತ್ತಿರಲಿಲ್ಲ. ನಾವು ನಮ್ಮ ಮನೆಗಳಿಂದ ಕಂದಾಯ ವಸೂಲುಮಾಡಿಕೊಂಡು ನಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುತ್ತಿದ್ದೆವು. ಅದೇ ದುಡ್ಡಿನಲ್ಲಿ ಒಬ್ಬ ಪಂಚಾಯತ್ ಸೆಕ್ರೆಟರಿ ಇರುತ್ತಿದ್ದ, ಒಬ್ಬ ಸಿಪಾಯಿ ಇರುತ್ತಿದ್ದ. ಹಿಂದೆ ನಾವು ಆ ಕಾಲದಲ್ಲಿ ಚಿಮಣಿ ಹಚ್ಚುತ್ತಿದ್ದೆವು. ಈಗ ರೋಡಿನಲ್ಲಿ ನಾವು ಲೈಟ್‌ಗಳನ್ನು ಕಾಣುತ್ತೇವೆ. ಆಗ ಲೈಟ್ ಇರಲಿಲ್ಲ. ಆಗ ಊರಿನ ಕಸ ಹೊಡೆಸುತ್ತಿದ್ದೆವು. ಆ ಕಸವನ್ನು ತೆಗೆದುಕೊಂಡು ಹೋಗಿ ಕಾಂಪೋಸ್ಟ್ ಗೊಬ್ಬರ ಮಾಡಲು ಗುಂಡಿಗಳಿಗೆ ಹಾಕುತ್ತಿದ್ದೆವು. ಅದರ ಮಾರಾಟದಿಂದ ಬಂದಂತಹ ಹಣವನ್ನು ಪಂಚಾಯಿತಿಯಲ್ಲಿ ಶೇಖರಣೆ ವ್ಯವಸ್ಥೆ ಮಾಡುತ್ತಿದ್ದೆವು. ಆ ರೀತಿಯಾದ ಎಲ್ಲಾ ವ್ಯವಸ್ಥೆ ಇರುತ್ತಿದ್ದವು. ಆದರೆ, ಇವತ್ತು ಪಂಚಾಯಿತಿಯಲ್ಲಿ ನಾವು ನೋಡುತ್ತೇವೆ. ಆ ಕಾರ್ಯದರ್ಶಿಗಳು ಯಾರೂ ಕೂಡ ಕರ ವಸೂಲಿಗೆ ಹೋಗುವುದಿಲ್ಲ. ಆ ಬೇಡಿಕೆ ಬಿಲ್‌ಗಳನ್ನು ಸರಿಯಾಗಿ ಬರೆದಿರುವುದಿಲ್ಲ. ನಾನಂತೂ ಸಾಕಷ್ಟು ಪಂಚಾಯಿತಿಗಳಿಗೆ ವಿಸಿಟ್ ಮಾಡಿದ್ದೇನೆ. ಬೇಡಿಕೆ ಬಿಲ್‌ಗಳನ್ನು ಕೊಟ್ಟಿರುವುದಿಲ್ಲ. ಜನರು ಟ್ಯಾಕ್ಸ್ ಎಷ್ಟು ಕಟ್ಟಬೇಕು ಎನ್ನುವುದು ಗೊತ್ತಿರುವುದಿಲ್ಲ.

ಈ ವ್ಯವಸ್ಥೆ ಬದಲಾವಣೆಯಾಗಬೇಕು. ಸರ್ಕಾರ ಅಧಿಕಾರ ಕೊಟ್ಟರೂ ಸರ್ಕಾರದ ಮೇಲೆ ಪಂಚಾಯಿತಿ ನಡೆಸುತ್ತಾರೆ. ಜನರು ತಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ನಮ್ಮ ಊರ ಅಭಿವೃದ್ಧಿಯನ್ನು ಮಾಡಬೇಕೆನ್ನುವ ಕಲ್ಪನೆ ಕೊಡದೇ ಇದ್ದರೆ ಇದು ಹೇಗಾಗುತ್ತದೆ? ಒಂದು ಉದಾಹರಣೆ ನಾವೇನು ಪಂಚಾಯತ್ ಎಂದರೆ ಅಧಿಕಾರ ವಿಕೇಂದ್ರೀಕರಣ ಎಂದು ಹೇಳಿದ್ದೇವೆಲ್ಲ, ಆದರೆ ಇದು ಭ್ರಷ್ಟಾಚಾರದ ವಿಕೇಂದ್ರೀಕರಣ ಎಂದು ಮಾತನಾಡುತ್ತಾರೆ. ಇದು ನಡೆಯತಕ್ಕಂಥ ಘಟನೆ. ನಮ್ಮಲ್ಲಿ ಒಬ್ಬ ಹುಡುಗ ಒಂದು ಅರ್ಜಿ ಕೊಟ್ಟ. ಅದಕ್ಕೆ ನಾನು ನೌಕರಿ ಹುಡುಕು, ಪಂಚಾಯಿತಿಯಲ್ಲಿ ಅರ್ಜಿ ಕೊಟ್ಟು ಏನು ಮಾಡುತ್ತೀಯಾ ಎಂದರೆ ಅವನು ನನಗೆ ಬುದ್ಧಿ ಹೇಳಿದ. ಏನ್ರಿ ಗೌಡರೆ, ಇಲ್ಲಿ ನೌಕರಿ ಸಿಗುತ್ತದೆ, ಪಂಚಾಯಿತಿ ಮೆಂಬರ್ ಆದರೆ ಐದು ವರ್ಷ ನನ್ನ ಮನೆ ನಡೆಯುತ್ತದೆ ಎಂದು ಹೇಳಿದ. ಎಂದರೆ ಪಂಚಾಯತ್ ಮೆಂಬರ್ ಆದರೆ ವ್ಯವಸ್ಥೆ ಹೇಗಿದೆ ನೋಡಿ. ತಾವು ಕಾನೂನು ಮಾಡಿ, ಕಂಟ್ರಾಕ್ಟರ್‌ಗಳೂ ಕೆಲಸ ಮಾಡಬಾರದೆಂದು ಮಾಡಿದಿರಿ ಆದರೆ ಯಾರಾದರೂ ಬಿಟ್ಟಿದ್ದಾರಾ? ಜನತಾ ಮನೆ ಕಟ್ಟುವವರು ಅವರೇ ಊರಿನ ಕೆಲಸ ಮಾಡಿಸುವುದು ಪಂಚಾಯತ್, ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್ ಮೆಂಬರ್. ಈಗ ಹೇಗಿದೆ ಎಂದರೆ ಒಂದು ಸಲ ಎಲೆಕ್ಷನ್‌ಗೆ ನಿಂತು ಗೆದ್ದು, ಅವನು ಇನ್ನೊಂದು ಸಲ ನಿಂತರೆ ಆರಿಸಿ ಬರುವುದೇ ಇಲ್ಲ.

ಪಂಚಾಯತ್ ಸದಸ್ಯರು ನಮ್ಮನ್ನು ಎಂ.ಎಲ್.ಎ.ಗಳು ತಿನ್ನುವುದಿಲ್ಲವೇನು ಎಂದು ಪ್ರಶ್ನೆ ಹಾಕಿದರು. ನಾನು ಇಲ್ಲವೆಂದು ಏನು ಹೇಳುವುದಿಲ್ಲ, ಆದರೆ ನೇರವಾಗಿ ಕಾಣತಕ್ಕಂಥಾದ್ದು ಏನೆಂದರೆ ಹಳ್ಳಿಗಳಲ್ಲಿ ಆಯಾ ವಾರ್ಡ್‌ಗಳಲ್ಲಿ ಮಾಡತಕ್ಕಂಥಾದ್ದು ಜನರಿಗೆ ನೇರವಾಗಿ ಇವರು ಏನು ಮಾಡಿದರೆಂದು ಕಾಣುತ್ತದೆ. ಈ ರೀತಿಯಾಗಿ ಜನರು ಇದನ್ನು ವಿಕೇಂದ್ರೀಕರಣವಲ್ಲ, ಇದು ಭ್ರಷ್ಟಾಚಾರದ ವಿಕೇಂದ್ರೀಕರಣವೆಂದು ಜನರು ಆಡಿಕೊಳ್ಳುವಂಥ ಮಟ್ಟಕ್ಕೆ ಇದು ಹೋಗಿದೆ.

ಶ್ರೀ ಕೆ.ಹೆಚ್ ರಂಗನಾಥ್:ಮಾನ್ಯ ಉಪಾಧ್ಯಕ್ಷರೆ, ಈ ಮಂಡಲ್ ಪ್ರಧಾನ ಮಂಡಲವೆಂದು ಮಾಡಿದೆವಲ್ಲಾ, ಆಗ ಎಲ್ಲ ಮುಖಂಡರು ನಿಮ್ಮ ಅಧಿಕಾರವನ್ನು ನಿಮಗೆ ಕೊಟ್ಟಿದ್ದೇವೆಂದು ಹಳ್ಳಿಗಾಡಿನವರಿಗೆ ಹೇಳಿದರು. ಅವರು ಅಧಿಕಾರವನ್ನು ತೆಗೆದುಕೊಂಡು ಮಾಡುತ್ತಾರೆ, ಅದಕ್ಕೆ ನಿಮ್ಮದು ಏನು ಅಡ್ಡಿ.

ಶ್ರೀ ಎಸ್.ಎಸ್.ಪಾಟೀಲ್: ಆದುದರಿಂದ, ತಾವು ಮೊದಲನೆಯದಾಗಿ ಏನು ಮಾಡಬೇಕೆಂದರೆ ಪಂಚಾಯತ್‌ನಲ್ಲಿ ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ ಏನು ಮಾಡಬೇಕು. ಅದಕ್ಕೆ ಏನು ಮಾಡಿಲ್ಲ, ಅದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು, ಅದನ್ನು ಹಾಕಿಕೊಳ್ಳಿ. ಆ ಪಂಚಾಯತ್ ಸೆಕ್ರೆಟರಿಗೆ ಬೇಕಾದಷ್ಟು ಉತ್ಪನ್ನ ಆಗುತ್ತಿದೆ, ಅವನಿಗೆ ನೀವು ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ.

ಈಗ ರಸ್ತೆಗಳನ್ನು ಮಾಡಿಲ್ಲ, ಏನು ಮಾಡಿಲ್ಲ. ರೋಜ್‌ಗಾರ್ ಯೋಜನೆ ಎಲ್ಲಾ ಬಂದು ಹೋಗಿದೆ. ಪಂಚಾಯತ್ ಸೆಕ್ರೆಟರಿಗಳಿಗೆ ಮನೆಗಳ ಕರವನ್ನು ವಸೂಲು ಮಾಡುವುದಕ್ಕೆ ಹೋಗಬೇಕೆಂಬ ಕಲ್ಪನೆಯೂ ಇಲ್ಲ. ಆ ಬಗ್ಗೆ ಡಿಮ್ಯಾಂಡ್ ಮಾಡುವುದಿಲ್ಲ, ಮತ್ತೆ ನಮ್ಮ ಮಾನ್ಯ ಸಚಿವರನ್ನು ಕೇಳುವುದೇನೆಂದರೆ ಈ ಪಂಚಾಯತ್ ಕರ ನಾವು 'ಮನೆಪಟ್ಟಿ' ಎಂದು ಏನು ಕರೆಯುತ್ತೇವೆ. ಇದನ್ನು ಸುಮಾರು 30ವರ್ಷಗಳ ಹಿಂದೆ ಮಾಡಿರುವಂಥಾದ್ದು. ಅದೊಂದು ರೂಪಾಯಿ 50 ಪೈಸೆ ಎಂದು ಮಾಡಿದ್ದು, ಇವತ್ತಿಗೂ ಹಾಗೆ ಇದೆ. ಅದನ್ನು ಈಗಿನ ಪ್ರಕಾರ ಬದಲಾವಣೆ ಮಾಡಬೇಕಲ್ಲವೇ? ಬದಲಾವಣೆ ಮಾಡಬೇಕು. ಅವರು ಇದನ್ನು ಮಾಡುವುದಿಲ್ಲ ಏಕೆಂದರೆ ಮತ್ತೆ ಮೆಂಬರ್ ಆಗಿ ಆರಿಸಿ ಬರುವುದಿಲ್ಲವೆಂದು ಅವರು ಇದನ್ನು ಹೆಚ್ಚು ಮಾಡುವುದಿಲ್ಲ. ಇವತ್ತಿನ ರೇಟ್ ಪ್ರಕಾರ ಇದನ್ನು ಹೆಚ್ಚು ಮಾಡಿ, ಏಕೆಂದರೆ ಗ್ರಾಮಾಂತರ ಪ್ರದೇಶದಲ್ಲಿ ನಾವು ಉತ್ಪನ್ನ ಮಾಡಿ ಕೊಡದೇ ಹೋದರೆ ಸರ್ಕಾರದಿಂದ ಕೊಡುವಂತಹ ದುಡ್ಡನ್ನು ಬೇಕಾದರೆ ಅವರು ಕಳುಹಿಸಿ ಬಿಡುತ್ತಾರೆ. ಅವರು ಅದಕ್ಕಾಗಿ ನೀರಿನ, ವಿದ್ಯುತ್ ಕರವನ್ನು ತುಂಬಿಲ್ಲ, ಬಲ್ಪ್ ತಂದು ಹಾಕುವುದಿಲ್ಲ, ಈ ದುಡ್ಡು ಎಲ್ಲಾ ಅಲ್ಲಿದೆ. ಆದರೂ ಅವರು ಮಾಡುತ್ತಿಲ್ಲ. ಆದಕಾರಣ ಅಲ್ಲಿ ಸಂಪನ್ಮೂಲಗಳು ಹೆಚ್ಚು ಮಾಡುವಂಥಾದ್ದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಅದನ್ನು ಹೆಚ್ಚು ಮಾಡುವಂತಹ ಪ್ರಯತ್ನವನ್ನು ಮಾಡಿ. ಆ ಪಂಚಾಯತ್ ಆದಾಯ ಅಲ್ಲಿರತಕ್ಕಂಥ ನೌಕರರುಗಳ ಖರ್ಚು ಆ ಆದಾಯದಲ್ಲಿ ಆಗಬೇಕಾಗುತ್ತದೆ. ಈಗ ತಾವು ಪಂಚಾಯತ್ ಸೆಕ್ರೆಟರಿಯವರಿಗೆ ಕೊಡುವುದಕ್ಕೆ ಹೋಗಿದ್ದೀರಿ. ಈಗ ಅವರ ಮೇಲೆ ಪಗಾರವನ್ನು ಹಾಕಿದರೆ ಪಂಚಾಯತ್ ಎಲ್ಲಾ ಬಂದ್ ಆಗುತ್ತದೆ. ಅಲ್ಲಿ ನೀರು ಬಿಡುವವರಿಗೆ ಪಗಾರವಿಲ್ಲ, ಅವರು ಆರು ತಿಂಗಳು, ವರ್ಷಕ್ಕೆ ಪಗಾರವನ್ನು ತೆಗೆದುಕೊಳ್ಳುತ್ತಾದೆ. ಅವನು ಐನೂರು, ಆರು ನೂರು, ಮೂರು ನೂರು ಪಗಾರವನ್ನು ತೆಗೆದುಕೊಳ್ಳುತ್ತಾನೆ. ಪ್ರತಿ ದಿವಸ ನೀರು ಬಿಡಬೇಕೆಂದರೆ ಎಲ್ಲಿಂದ ಬಿಡುತ್ತಾರೆ? ಈಗ ಸೆಕ್ರೆಟರಿಗೆ ಎಂಟು ಸಾವಿರ, ಆರು ಸಾವಿರ ಇರುವುದಿಲ್ಲ. ಅವರ ಪರಿಸ್ಥಿತಿ ಏನಿದೆ, ಹೇಗಿದೆ ಎಂಬ ಬಗ್ಗೆ ಮುಂದೆ ಹೇಳುತ್ತೇನೆ. ಅದನ್ನು ಮುಂದೆ ನೋಡೋಣ. ಆದರೆ ಅಲ್ಲಿ ಇವತ್ತು ಕರಗಳ ಪರಿಷ್ಕರಣೆ ಮಾಡಿ, ಈ 20-30 ವರ್ಷಗಳಿಂದ ಇರುವಂತಹ 1 ರೂಪಾಯಿ 50 ಪೈಸೆ ಅವು ತಾವು ಹೇಳಿದ ಹಾಗೆ ಬಡವರ ಮನೆಗೆ ಇದೆ. ದೊಡ್ಡವರ ಮನೆಗಳಿಗೆ ಎರಡು ರೂಪಾಯಿ ಇದೆ. ಅದೇ ಗುಡಿಸಲುಗಳಿಗೂ ಎರಡು ರೂಪಾಯಿಗಳು ಇದೆ. ಈ ರೀತಿಯಾಗಿ ಪರಿಸ್ಥಿತಿ ನಡೆಯುತ್ತಿದೆ. ಅಲ್ಲಿ ಹರಿಜನ ಗಿರಿಜನ, ಬಡವರಿಗೂ ಏರಿಸಿದ್ದಾರೆ, ಚೇರ್ಮನ್ ಮನೆಗೆ ಕರವನ್ನು ಏರಿಸಿಲ್ಲ. ನಾನು ಇದೆಲ್ಲವನ್ನು ಪರಿಶೀಲನೆ ಮಾಡುವಾಗ ನೋಡಿದ್ದೇನೆ. ಆ ಕಾರಣದಿಂದ ಗ್ರಾಮೀಣ ಸಚಿವರಲ್ಲಿ ಕೇಳುವುದೇನೆಂದರೆ ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಬೇಕು. ಅಲ್ಲಿರುವಂತಹ ಎಲ್ಲಾ ನೌಕರರಿಗೂ ಸಂಬಳವನ್ನು ಏರಿಸಿದ್ದೀರಿ. ಏಳುನೂರು ಕೋಟಿ ರೂಪಾಯಿಗಳಿಂದ ಎಂಟು ನೂರು ಕೋಟಿ ರೂಪಾಯಿಗಳಿಗೆ ಏರಿಸಿದ್ದೇವೆ, ಆದರೂ

ಇನ್ನು ದಾಂಧಲೆ ಇದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಭೆಯಲ್ಲಿ ಇಲ್ಲ. ವಿರೋಧಪಕ್ಷದಲ್ಲಿ ಕುಳಿತಾಗ ಏನೇನು ಆಯಿತು ಎಂದು ಹೇಳುತ್ತೇನೆ. ನಮ್ಮ ನೌಕರರು ಸತ್ಯಾಗ್ರಹ ಮಾಡಿದರು, ಎಂಟನೂರು ಕೋಟಿ ರೂಪಾಯಿಗಳು ಆಯಿತು, ಆಗ ಪ್ಲಾನ್ ಕಟ್ ಮಾಡಿದೆವು. ಇಲ್ಲಿ ಕಟ್ ಮಾಡಿ ಅಲ್ಲಿ ಕೊಟ್ಟಿರಿ, ಆಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪಾಟೀಲ್‌ರವರೆ ಎಲ್ಲಾ ವಸೂಲು ಮಾಡಿ ನೌಕರರಿಗೇ ಕೊಟ್ಟು ಬಿಡೋಣ, ಆಗ ಸಮಾಧಾನವಾಗುತ್ತದೆಯೇ ಎಂದರು. ಇಬ್ಬರೂ ಹುಡುಗಾಟ ಆಡಿದ್ದೀರಿ, ಏನಾದರೂ ಮಾಡಿ ಸರ್ಕಾರದವರು ನ್ಯಾಯವಾಗಿ ಬೇಡಿಕೆಗಳನ್ನು ಈಡೇರಿಸಬೇಕೆಂದು ಮಾನ್ಯ ಯಡಿಯೂರಪ್ಪನವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸ್ಟೇಟ್‌ಮೆಂಟ್ ಕೊಟ್ಟರು. ಅಲ್ಲಿ ಹಳ್ಳಿಯಲ್ಲಿರುವಂತಹ 300 ರೂಪಾಯಿ, 500 ರೂಪಾಯಿಗಳ ಸಂಬಳ ಇರುವವರಿಗೆ ಪಗಾರವಿಲ್ಲ. ಇಲ್ಲಿ ಪಗಾರವಿರುವವರಿಗೆ ಅದನ್ನು ಏರಿಸಿದ್ದಾರೆ. ನಾನು ನಿಮಗೆ ಹೇಳುವಂಥಾದ್ದು ನಮಗೆ ಯಾವುದು ಬೇಡ ಸಾಲ ಮಾಡುವುದು ಬೇಕಾಗಿಲ್ಲ. ಶೇ.20ರಷ್ಟು ಮೊದಲು ಸಂಬಳವನ್ನು ಕಟ್ ಮಾಡಿ, ನಮ್ಮಲ್ಲಿರುವಂತಹ ನೌಕರರ ಸಂಬಳ ಶೇ. 18ರಷ್ಟು ಕಟ್ ಮಾಡಿ ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗೆ ಅಂದರೆ ಹೈಯರ್ ಎಜುಕೇಶನ್‌ರವರಿಗೆ ಅನ್ಯಾಯ ಮಾಡುವುದಿಲ್ಲ ಎಂದರೆ ಹೇಗೆ ಅನ್ಯಾಯವಾಗದ ಹಾಗೆ ಮಾಡುತ್ತೀರಾ? ಆ ವಿಷಯ ಬಂದಾಗ ಮಾತನಾಡುತ್ತೇನೆ. ಈಗ ಆ ಚರ್ಚೆ ಬೇಡ. ಅವರಿಗೆ ನೀವು ಅನುದಾನವನ್ನು ಕೊಡುತ್ತೇವೆಂದರೆ ಶೇ. 18ರಷ್ಟು ಪಗಾರವನ್ನು ಕಟ್ ಮಾಡಿ ಮಾಡುತ್ತೀರಿ. ಈಗಾಗಲೇ ನಾವು ನೋಡುತ್ತೇವೆ, ಪರಿಶೀಲನೆ ಮಾಡುತ್ತೇವೆಂದು ಮಾನ್ಯ ಮಂತ್ರಿಯವರು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದೀರಿ. ಅದನ್ನು ಚರ್ಚೆ ಮಾಡೋಣ, ಈ ಪಂಚಾಯತ್ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ ನಮ್ಮ ಜನತಾಪಕ್ಷದ ಸರ್ಕಾರದಲ್ಲಿ ಇದ್ದ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ, ಮಾನ್ಯ ನಜೀರ್‌ಸಾಬ್‌ರವರಿಗೆ, ಮತ್ತೆ ಮಾನ್ಯ ಯಾವಗಲ್‌ರವರಿಗೆ ಕೀರ್ತಿ ಸಲ್ಲುತ್ತದೆ. ಆಗ ಮಾನ್ಯ ಯಾವಗಲ್‌ರವರು ನಮ್ಮ ಪಕ್ಷದಲ್ಲಿ ಇದ್ದಂತಹ ಸಮಯದಲ್ಲಿ ಸ್ಟೇಟ್ ಮಿನಿಸ್ಟರ್ ಆಗಿದ್ದರು. ಈ ವ್ಯವಸ್ಥೆಯನ್ನು ಬಲಪಡಿಸಬೇಕೆಂಬ ದೃಷ್ಟಿಯಿಂದ ಎಲ್ಲಾ ರಾಜ್ಯಗಳನ್ನು ಮಾನ್ಯ ನಜೀರ್‌ಸಾಬ್‌ರವರು ಸುತ್ತಾಡಿಕೊಂಡು ಬಂದು ಎರಡು ಹಂತದ ವ್ಯವಸ್ಥೆಯನ್ನು ಜಾರಿಗೆ ತಂದರು. ಅದು ಮಂಡಲ್ ಪಂಚಾಯತ್ ಹಾಗೂ ಜಿಲ್ಲಾ ಪಂಚಾಯಿತಿ ವ್ಯವಸ್ಥೆಯನ್ನು ಜಾರಿಗೆ ತಂದರು. ನಾವೆಲ್ಲ ಅಧಿಕಾರವನ್ನು ನಿಮಗೆ ಕೊಡುತ್ತೇವೆಂದು ಕೊಟ್ಟೆವು. ಅದು ಕೊಟ್ಟಿದ್ದು ಯೋಗ್ಯವಿದೆ. ನೀವು ಸಹ ಅದೇ ಘೋಷಣೆಯನ್ನೆ ಮಾಡಿದ್ದೀರಿ. ಇದನ್ನು ನಿಮ್ಮ ಮಂತ್ರಿಯವರು ಉತ್ತರದಲ್ಲಿ ಹೇಳುತ್ತಾರೆ. ಆ ಪರಿಸ್ಥಿತಿಯೂ ಹಾಗೆ ಇದೆ ಎಂದು ಹೇಳಬೇಕಾಗುತ್ತದೆ. ನಿಮಗೆ ಈಗ ಅಮೆಂಡ್‌ಮೆಂಟ್ ಮಾಡುವಂತಹ ಮನಸ್ಸು ಇರಲಿಲ್ಲ, ಆದರೂ ನೀವು ಮಾಡಿದ್ದೀರಿ. ಆ ಪರಿಸ್ಥಿತಿ ಹಾಗೆಯೇ ಇದೆ ಏನು ಮಾಡುವುದಕ್ಕಾಗುವುದಿಲ್ಲ. ಈ ಎರಡು ವ್ಯವಸ್ಥೆಯನ್ನು ಮಾನ್ಯ ನಜೀರ್‌ಸಾಬ್‌ರವರು ತಂದರು. ಆ ಐದು ವರ್ಷಗಳ

ಅವಧಿಯಲ್ಲಿ ಮಾನ್ಯ ಯಾವಗಲ್‌ರವರಿಗೆ ಈ ಕೀರ್ತಿ ಸಲ್ಲುತ್ತದೆ. ನಾನು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಈ ರಾಜ್ಯದಲ್ಲಿ ಬಹಳ ಉತ್ತಮವಾದಂತಹ ವ್ಯವಸ್ಥೆಯನ್ನು ಜಾರಿಗೆ ತಂದರು. ಆಗಿನ ಪ್ರಧಾನಮಂತ್ರಿಗಳಾಗಿದ್ದ ಶ್ರೀ ರಾಜೀವ್‌ಗಾಂಧಿಯವರು ಸಹ ಬಂದು ಇದನ್ನು ನೋಡಿಕೊಂಡು ಹೋದರು. ಈ ವ್ಯವಸ್ಥೆಯನ್ನು ರೂಲ್ 73ರ ಅಮೆಂಡ್‌ಮೆಂಟ್‌ನಲ್ಲಿ ತರಬೇಕೆಂದು ಇದಕ್ಕೆ ಒಂದು ಸಂವಿಧಾನ ಬದ್ಧವಾದ ರಕ್ಷಣೆಯನ್ನು ಕೊಡಬೇಕೆಂದು ಹೇಳಿ, ಅದಕ್ಕೆ ಸ್ವಲ್ಪ ಹೊಸದು ಏನಾದರೂ ಸೇರಿಸಬೇಕೆಂದು ನಾವು ಜನತಾಪಕ್ಷದವರು ಮಾಡಿದ್ದು ತಾವು ತಮ್ಮದು ಎಂದು ತೋರಿಸಿಕೊಂಡು ಈ ವ್ಯವಸ್ಥೆಯನ್ನು ತಂದಿರಿ. ತಾವು ಇದಕ್ಕೆ ತಾಲ್ಲೂಕು ಪಂಚಾಯತ್ ವ್ಯವಸ್ಥೆಯನ್ನು ಕೂಡಿಸಿ ಇಟ್ಟಿದ್ದೀರಿ. ಆ ರೀತಿ ಹೊಸ ವ್ಯವಸ್ಥೆಯನ್ನು ಸೇರಿಸಿದ್ದೀರಿ. ಈಗ ಮತ್ತೆ ಸಣ್ಣ ಪಂಚಾಯತ್ ಎಂದು ಮಾಡಿದ್ದೀರಿ, ನಾವು ಬಂದು ದೊಡ್ಡ ಪಂಚಾಯತ್ ಎಂದು ಮಾಡುವುದಕ್ಕೆ ಹೋದೆವು, ಈ ರೀತಿಯಾಗಿ ಇದು ನಡೆದಿದೆ. ಈ ರೀತಿ ಅಧಿಕಾರಕ್ಕೆ ಬಂದಾಗ ನಾವು ಒಂದು ಹೇಳುವುದು, ನೀವು ಅಧಿಕಾರಕ್ಕೆ ಬಂದಾಗ ನೀವು ಒಂದು ಹೇಳುವಂಥಾದ್ದು, ಈ ರೀತಿ ಆಗಿ ಜನರಿಗೆ ಬೇಜಾರು ಆಗಿಹೋಗಿದೆ. ನಾವು ಅಧಿಕಾರಕ್ಕೆ ಬರುವುದು ಬೇಡವೆಂದು, ನೀವು ಬರಬೇಕೆಂದು ಹೀಗೆ ದೇಶದಲ್ಲಿ ನಡೆದಿದೆ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಅಧ್ಯಕ್ಷರೆ, ನಾವು ಯಾವುದಾದರೂ ಒಂದು ಅಮೆಂಡ್‌ಮೆಂಟ್ ಮಾಡಿದರೆ 15-20-25 ವರ್ಷಗಳು ಅದು ಇರಬೇಕಾಗುತ್ತದೆ. ಅದರ ಸಾಧಕ ಬಾಧಕಗಳು ಆದಮೇಲೆ ಅಮೆಂಡ್‌ಮೆಂಟ್ ವಗೈರೆ ಮಾಡಬೇಕಾಗುತ್ತದೆ. ಇದು ಈ ಲೆಜಿಸ್ಲೇಚರ್‌ನಲ್ಲಿರುವಂತಹ ನೀತಿಯಾಗಿದೆ, ಆದರೆ ತಾವು ಮಂಡಲ್ ಪಂಚಾಯತ್ ಮಾಡಿದ್ದು, ಹೇಗಿತ್ತು ಎಂದರೆ ದೊಡ್ಡ ವ್ಯಾಪಕವಾದ ವಿಸ್ತೀರ್ಣದಲ್ಲಿ ಇತ್ತು. ದೊಡ್ಡ ದೊಡ್ಡ ತಾಲ್ಲೂಕುಗಳು, ದೊಡ್ಡ ಗ್ರಾಮಗಳು ದೂರ ದೂರವಿರುವಂಥಾದ್ದು ಆಗಿತ್ತು. 100-15 ಕಿ.ಮೀ.ಗಳು ದೂರ ಇದ್ದರೆ ಹೇಗೆ ಆಡಳಿತವನ್ನು ಮಾಡುತ್ತೀರಿ? ನೀವು ಮಲೆನಾಡಿನಲ್ಲಿ ನೋಡುವುದಾದರೆ ಒಂದೊಂದು ಊರಿನಲ್ಲಿ ಕಡಿಮೆ ಸಂಖ್ಯೆಯಲ್ಲಿ ಮನೆಗಳು ಇರುತ್ತದೆ, ಅದು ದೂರ ದೂರ ಇರುತ್ತವೆ, ಇವೆಲ್ಲವನ್ನು ಪರಿಶೀಲನೆ ಮಾಡಿ ಅದನ್ನು ಸ್ವಲ್ಪ ಚಿಕ್ಕದು ಮಾಡಿದ್ದೇವೆ. ನೀವು ರಾಜಕೀಯವಾಗಿ ಮಾತನಾಡುವುದಕ್ಕಾಗಿ ಮಾತನಾಡುತ್ತಿದ್ದೀರಿಯೇ ಹೊರತು ಅದರ ಉದ್ದೇಶ ಏನಿತ್ತು, ಎನ್ನುವ ಬಗ್ಗೆ ಪೂರ್ವಭಾವಿಯಾಗಿ ಒಪ್ಪಿಕೊಳ್ಳುವಂತಹ ದೃಷ್ಟಿಕೋನ ನಮ್ಮಲ್ಲಿ ಬರಲಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ನಾನು ನಿಮ್ಮ ಮಾತನ್ನು ಖಂಡಿತವಾಗಿಯೂ ಒಪ್ಪುತ್ತೇನೆ. ನಾವು ಮಂಡಲ್, ತಾಲ್ಲೂಕ್ ಪಂಚಾಯತ್ ವ್ಯವಸ್ಥೆಯನ್ನು ತಂದೆವು. ಅದು ಚೆನ್ನಾಗಿ ನಡೆದು ಇಪ್ಪತ್ತೈದು ವರ್ಷಗಳು ಇರಬೇಕಾಗಿತ್ತು. ಆದರೆ ನಿಮ್ಮ ಸರ್ಕಾರ ಬಂದ ಮೇಲೆ ಬದಲಾವಣೆ ಮಾಡಿಬಿಟ್ಟರು. ಇದು ಬಂದು ಇನ್ನು ಐದು

ವರ್ಷಗಳಾಗಿದ್ದವು. ಇದನ್ನು ನೀವು ಇಪ್ಪತ್ತೈದು ವರ್ಷಗಳು ಬಿಡಲಿಲ್ಲ, ಮಾನ್ಯ ಎಂ.ವೈ.ಘೋರ್ಪಡೆಯವರು ಅದನ್ನು ಮತ್ತೆ ಸಣ್ಣ ಸಣ್ಣ ಪಂಚಾಯತ್‌ಗಳನ್ನಾಗಿ ಮಾಡಿದರು. ಆನಂತರ ಚುನಾವಣೆಗಳನ್ನು ನಡೆಸಿದಿರಿ ಆಗ....

6-00 ಪಿ.ಎಂ

ಅದರಲ್ಲಿ ಫೇಲ್ ಆಗಿ ಬಿಟ್ಟಿರಿ. ಎಲ್ಲ ಕಡೆ ನಮ್ಮವೇ ಬಂದುಬಿಟ್ಟವು. ಅದೆಲ್ಲವನ್ನೂ ಲೆಕ್ಕ ಹಾಕಿ ನೋಡಿ ನಿಮಗೆ ಅಂಜಿಕೆ ಬಂತು. ತಾಲ್ಲೂಕು ಪಂಚಾಯಿತಿಯದು ಮಾಡಲಿಲ್ಲ, ಜಿಲ್ಲಾ ಪಂಚಾಯಿತಿಯ ಮಾಡಲಿಲ್ಲ, ಎ.ಪಿ.ಎಂ.ಸಿ.ಯದು ಮಾಡಲಿಲ್ಲ, ಒಂದು ಸೊಸೈಟಿಯ ಚುನಾವಣೆಗಳನ್ನು ಮಾಡಲಿಲ್ಲ. ಯಾವ ಚುನಾವಣೆಯನ್ನೂ ನೀವು ಮಾಡಲಿಲ್ಲ. ಹಾಗೇ ಹೋಗಿ ಬಿಟ್ಟಿದ್ದಿರಿ. ಅವೆಲ್ಲಾ ನಮಗೆ ಬಂದವು. ಹೀಗೆ ನಾವು ನೂರೆಂಟು ಚುನಾವಣೆಗಳನ್ನು ಮಾಡಿದೆವು. ಆ ರೀತಿ ಎಂದಾದರೂ ನೀವು ಮಾಡಿದ್ದಿರೇನು? ಎಲ್ಲಾ ಬೈ-ಎಲೆಕ್ಷನ್‌ಗಳನ್ನೂ ಮಾಡಿದೆವು. ಸ್ವಾತಂತ್ರ್ಯ ಬಂದ 50 ವರ್ಷಗಳ ಇತಿಹಾಸದಲ್ಲಿ ಹೆಚ್ಚು ಚುನಾವಣೆಗಳನ್ನು ನಾವು ಮಾಡಿದ್ದೇವೆ. ನಮ್ಮ ನಾಲ್ಕೂವರೆ ವರ್ಷಗಳ ಅವಧಿಯಲ್ಲಿ ನಾವು ಮಾಡಿದಷ್ಟು ಚುನಾವಣೆಗಳನ್ನು ನೀವು ಯಾರೂ ಮಾಡಲಿಲ್ಲ, ಮಾಡಲೂ ಆಗುವುದಿಲ್ಲ. ನಮ್ಮ ಉದ್ದೇಶ ಏನಿತ್ತು ಎಂದರೆ, ನಾವು ತಂದಿದ್ದ ಮಂಡಲ್ ಪಂಚಾಯಿತಿ ವ್ಯವಸ್ಥೆ ಚನ್ನಾಗಿದೆ, ಅದನ್ನು ತರುತ್ತೇವೆ ಎಂದು ಹೇಳಿಯೇ ನಾವು ಅಧಿಕಾರಕ್ಕೆ ಬಂದಿದ್ದೆವು. ಆ ದೃಷ್ಟಿಯಿಂದ ಚುನಾವಣೆಯನ್ನು ಮುಂದೆ ಹಾಕಿದೆವು. ಮೊನ್ನೆ ಮುಖ್ಯ ಮಂತ್ರಿಗಳು ಮಾತನಾಡುತ್ತಾ ಕೊನೆಗೆ ಈ ಬುದ್ಧಿ ನಿಮಗೆ ಏಕೆ ಬಂತು ಎಂದು ಕೇಳಿದರು. ಕೊನೆಗೆ ಬಂದಿದ್ದಲ್ಲ, ಪಂಚಾಯಿತಿಗಳ ಅವಧಿ ಇತ್ತು. ನಡುವೆ ಅದನ್ನು ಕಟ್ ಮಾಡುವುದು ಬೇಡ ಎನ್ನುವ ದೃಷ್ಟಿಯಿಂದ ಬಿಟ್ಟಿದ್ದೆವು. ಅದನ್ನು ತರಬೇಕಾದರೆ, ದುರ್ದೈವದಿಂದ ಏನೇನೋ ಆಯಿತು, ನಮ್ಮ ಸರ್ಕಾರ ಬಿತ್ತು. ಮತ್ತೆ ನೀವು ಅದನ್ನೇ ಮಾಡಿದಿರಿ. ಅದು ಇರಲಿ. ನಿಜವಾಗಿ ನಾವು ಈ ಸಂದರ್ಭದಲ್ಲಿ ನಜೀರ್ ಸಾಹೇಬರನ್ನು ನೆನೆಸಿಕೊಳ್ಳಬೇಕು. ಇವತ್ತು ಆ ಕಡೆ ಹೋಗಿ ಕುಳಿತಿರತಕ್ಕಂಥ ನಮ್ಮ ಯಾವಗಲ್‌ರವರನ್ನೂ ಕೂಡ ನಾವು ನೆನೆಸಿಕೊಳ್ಳುತ್ತೇವೆ. ಅವರು ಇವತ್ತೂ ಅದಕ್ಕೆ ಅಂಟಿಕೊಳ್ಳುತ್ತಾರೆ ಎಂದು ನನಗನ್ನಿಸುತ್ತದೆ. ಬಹಳ ಉತ್ತಮವಾದ ವ್ಯವಸ್ಥೆಯಾಗಿತ್ತು. ತಾವೂ ಕೂಡ ಅದಕ್ಕೆ ಜವಾಬ್ದಾರರಾಗುತ್ತೀರಿ. ಆವತ್ತು ತಾವೂ ಕೂಡ ಮಂತ್ರಿಗಳಾಗಿ ಒಳ್ಳೆಯ ಕೆಲಸ ಮಾಡಿದ್ದೀರಿ. ತಾವೇ ಹೇಳಬೇಕು, ಆಗಿನ ಮಂಡಲ ಪಂಚಾಯಿತಿ ವ್ಯವಸ್ಥೆ ಏನಿತ್ತು ಅದು ಹೇಗೆ ಕೆಲಸ ಮಾಡುತ್ತಿತ್ತೆಂದು. ನಾನು ನೋಡಿದ್ದೇನೆ, ತಮ್ಮ ಕಾಲದಲ್ಲಿ ಬಹಳ ಉತ್ತಮವಾದಂಥ ಕೆಲಸಗಳು, ಹಳ್ಳಿಹಳ್ಳಿಗಳಲ್ಲೂ ತಾವು ಮಾಡಿದಂಥ ಕೆಲಸವನ್ನು ನೋಡಿದರೆ ಇವತ್ತು ಆ ವ್ಯವಸ್ಥೆಯನ್ನು ನಾವು ನೆನೆಸಿಕೊಳ್ಳಬೇಕಾಗುತ್ತದೆ. ಏನೇ ಇದ್ದರೂ ಕೂಡ ಇವತ್ತು ಇದನ್ನು ತಂದಿದ್ದೀರಿ. ಈ ಒಂದು ವ್ಯವಸ್ಥೆಯನ್ನು ತಂದಿದ್ದೀರಿ, ಚುನಾವಣೆ ನಡೆದಿದೆ. ಕೃಷ್ಣಪ್ಪನವರೇ ಬಸವಣ್ಣನವರ ವಚನ

ಹೇಳುತ್ತೇನೆ, ಕೇಳುತ್ತೀರೇನು?

ಶ್ರೀ ಎ.ಕೃಷ್ಣಪ್ಪ: ಬಸವಣ್ಣನವರ ವಚನಗಳನ್ನು ತಾವು ಹೇಳಿ, ಕೇಳಿಸಿಕೊಳ್ಳುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್: ನಾವು ಏನು ಹೇಳಿದರೂ ಪ್ರಯೋಜನವಾಗುತ್ತಿಲ್ಲ, ಏನು ಮಾಡುವುದು, 'ಗೋರ್ಕಲ್ಲ ಮೇಲೆ ನೀರ್ಗರೆದರೆ, ಕಲ್ಲು ನೀರ ಕುಡಿಯಬಲ್ಲದೆ' ಎಂದು ಹೇಳಿದ್ದಾರೆ.

ಶ್ರೀ ಬಿ.ಆರ್.ಯಾವಗಲ್: ಮಾನ್ಯ ಉಪಾಧ್ಯಕ್ಷರೇ, ನಾವು ಏನು ಮಾಡಿದ್ದೆವು, ಅದನ್ನು ಈಗಲೂ ಅವರು ಒಪ್ಪಿಕೊಳ್ಳುತ್ತಾರೆ ಎಂದು ಎಸ್.ಎಸ್.ಪಾಟೀಲರು ಹೇಳಿದರು ಒಪ್ಪಿಕೊಳ್ಳಲೇಬೇಕು. ಆದರೆ ಈಗ ಬಂದಂಥ ಪಂಚಾಯಿತಿ ವ್ಯವಸ್ಥೆಯಲ್ಲಿ ಆ ಮೂಲಭೂತ ತತ್ವಕ್ಕೆ ಹೆಚ್ಚು ಮಹತ್ತರವಾದ ಬದಲಾವಣೆ ಏನೂ ಇಲ್ಲ. ಆಗಿನ ಕಲ್ಪನೆ, ಕನಸು ಏನಿತ್ತು ಎಂದರೆ, ಆಡಳಿತಾತ್ಮಕವಾಗಿ ಸಾಧುವಾಗಿರುವಂಥ ಉತ್ತಮವಾದಂಥ ಒಂದು ಘಟಕವನ್ನು ಮಾಡಬೇಕು ಎನ್ನುವ ಕಲ್ಪನೆ ಇತ್ತು. ಅದೇ ಮೂಲಭೂತವಾಗಿ ಆವತ್ತಿನ ಉದ್ದೇಶವಾಗಿತ್ತು. ಅದೇ ನಜೀರ್ ಸಾಹೇಬರ ಕಲ್ಪನೆಯಾಗಿತ್ತು, ಆಗಿನ ಹೊಸ ಕಲ್ಪನೆಯಾಗಿತ್ತು. ತದನಂತರ ಬಂದಂಥ ಪಂಚಾಯಿತಿ ವ್ಯವಸ್ಥೆಯೂ ಸಹ ಗಾತ್ರದಲ್ಲಿ ಚಿಕ್ಕದಿದ್ದರೂ ತತ್ವದಲ್ಲೇನೂ ಬದಲಾವಣೆಯಿಲ್ಲ. ಅದಕ್ಕಾಗಿ, ನಾವು ಬರೀ ಪಂಚಾಯಿತಿಯ ಗಾತ್ರದ ಮೇಲೆ ಹೆಚ್ಚು ಒತ್ತನ್ನು ಕೊಡುವ ಬದಲು ಅದನ್ನು ಎಂಪವರ್‌ಮೆಂಟ್ ಮಾಡಬೇಕು. ಏಕೆಂದರೆ ಅದು ಆಗಿಹೋಗಿದೆ. ಪಂಚಾಯಿತಿಯ ಸದಸ್ಯರನ್ನು ಮಾಡುವುದರಲ್ಲಿ ಮತ್ತು ನಮ್ಮ ಇರುವಿಕೆಯಲ್ಲಿ ಬಹಳ ವ್ಯತ್ಯಾಸವಿದೆ ಎಂದು ನಾನು ತಿಳಿದುಕೊಳ್ಳುವುದಿಲ್ಲ. ನಾವು ಹೇಗಿದ್ದೇವೋ, ಅವರೂ ಹಾಗೇ ಇದ್ದಾರೆ. ಎಂಪರ್‌ಮೆಂಟ್ ಮಾಡಬೇಕು. ಆ ಕಾನ್ಸೆಪ್ಟ್ ಬೆಳೆಯುವ ರೀತಿಯಲ್ಲಿ ಮಾಡಬೇಕು ಎಂದು ನನ್ನ ಒಂದು ಸಲಹೆ.

ಶ್ರೀ ಎಸ್.ಎಸ್.ಪಾಟೀಲ್: ಖಂಡಿತವಾಗಿಯೂ ನಾನು ಆ ಮಾತಿಗೆ ಒಪ್ಪಿಕೊಳ್ಳುತ್ತೇನೆ. ಅವರಿಗೆ ಅಧಿಕಾರವನ್ನೇ ಕೊಟ್ಟಿರಲಿಲ್ಲ. ತಮಗೆ ಗೊತ್ತಿದೆ. ಹುಡುಗಾಟದ ಮೇಲೆ ವಿನೋದವಾಗಿ ಹೇಳುತ್ತಿದ್ದೆವು, ನಾವು ಮಾಡಿದಂಥ ಮಂಡಲ್ ಪಂಚಾಯಿತಿ ವ್ಯವಸ್ಥೆ ಏನಿತ್ತು, ಆಗ ಅದರ ಛೇರ್‌ಮನ್ ಹಿಂದೆ ಸೆಕ್ರೆಟರಿ ಕೈಚೀಲ ಹಿಡಿದುಕೊಂಡು ಹೋಗಬೇಕಾಗಿತ್ತು. ನಮ್ಮ ಘೋರ್ಪಡೆಯವರು ಬಂದಾಗ ಅದನ್ನು ತಿದ್ದಿ ಐದು ವರ್ಷ ಮಾಡಿದರಲ್ಲ, ಆಗ ಸೆಕ್ರೆಟರಿಯವರು ಹಿಂದೆ ಛೇರ್‌ಮನ್ ಕೈಚೀಲ ಹಿಡಿದು ಹೋಗಬೇಕಾಗಿತ್ತು. ಜಿಲ್ಲಾ ಪಂಚಾಯಿತಿಗಳಿಗೆ ಅಷ್ಟೊಂದು ಅಧಿಕಾರ ಇಲ್ಲದ ಹಾಗೆ ಮಾಡಿದ್ದಿರಿ. ಜಿಲ್ಲಾ ಪಂಚಾಯಿತಿ ಹಣೆಬರಹ ಅಷ್ಟೇ, ನಮ್ಮದೂ ನಿಮ್ಮದೂ ಅಷ್ಟೇ ಆಗಿತ್ತು. ಮುಂದೆ ನಾವು ಬಂದ ಮೇಲೆ ಕೆಲವು ಅಧಿಕಾರಗಳನ್ನು ಅವರಿಗೆ ಕೊಟ್ಟೆವು. ಈಗ ಇನ್ನಷ್ಟು ಕೊಡಿ, ನಾವು ಬೇಡ ಅನ್ನುವುದಿಲ್ಲ. ಹೆಚ್ಚು ಅಧಿಕಾರ ಕೊಡಬೇಕು ಮತ್ತು ಅವರು ಅಷ್ಟೇ ಪ್ರಾಮಾಣಿಕವಾಗಿ ಇರಲು ಕಲಿಸಬೇಕು. ಏಕೆಂದರೆ

ಈ ಇಲಾಖೆ ಇವತ್ತು ಪ್ರಾಮಾಣಿಕ ಮಂತ್ರಿಗಳಿಂದ ನಡೆಯುತ್ತಿದೆ. ನಿಮ್ಮ ಮೇಲೆ ಯಾವ ಆಪಾದನೆಗಳೂ ಇಲ್ಲ, ನಾವು ಅದನ್ನು ಸ್ಪಷ್ಟವಾಗಿ ಹೇಳುತ್ತೇವೆ. ಪ್ರಾಮಾಣಿಕವಾದ ಒಬ್ಬ ಮಂತ್ರಿ ಈ ಇಲಾಖೆಯಲ್ಲಿರುವುದರಿಂದ ಭ್ರಷ್ಟಾಚಾರವನ್ನು ಮೇಲಿನಿಂದ ಕೆಳಗೆ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದೇನೆ. ಮೊದಲು ಕೆಳಗಿನಿಂದ ಮೇಲಿನವರೆಗೆ ಮಾಡುತ್ತಿದ್ದರು, ಅದನ್ನು ಬಿಟ್ಟು ಮೇಲಿನಿಂದ ಕೆಳಗೆ ತೆಗೆದುಕೊಂಡು ಬನ್ನಿ. ಭ್ರಷ್ಟಾಚಾರ ಕೆಳಗೆ ಇಲ್ಲ, ಮೇಲಿನಿಂದಲೇ ಶುರುವಾಗಿದೆ. ಇದು ಎಲ್ಲರಿಗೂ ಗೊತ್ತಿದೆ. ಮೊನ್ನೆ ಒಂದು ಚರ್ಚೆಯಾಯಿತು, ಅದನ್ನು ಕೇಳಿ ಆಶ್ಚರ್ಯವಾಯಿತು. ಪ್ರಾಮಾಣಿಕವಾದ ಮಾತು ಹೇಳಿದ್ದಕ್ಕೆ ಅವರ ಎಂ.ಎಲ್.ಎ. ಗಿರಿ ಹೋಗಲಿಕ್ಕೆ ಹತ್ತಿತ್ತು. ಈ ವ್ಯವಸ್ಥೆಯನ್ನು ನೋಡಿ ಬಹಳ ಬೇಸರವಾಯಿತು. ಹೇಗಿದೆ ನೋಡಿ, ಎಂಥ ವ್ಯವಸ್ಥೆ ಇದು. ಅಪ್ರಮಾಣಿಕತೆ ಎಲ್ಲಿಗೆ ಬಂದಿದೆ ಎಂದರೆ, ಅವರು ಪ್ರಾಮಾಣಿಕವಾಗಿ ಹೇಳಲು ಹೋದರೆ, ನಮ್ಮ ಶಿವಕುಮಾರ್‌ರವರು ನಾನಂತೂ ಮಾಡಿಲ್ಲ ಎಂದು ಹೇಳಿದರು. ಪ್ರಾಮಾಣಿಕತೆಯನ್ನು ಹೇಳಲು ಹೋದರೆ ಅಲ್ಲೇ ಅಳಿಸಿಬಿಟ್ಟೆವು ನಾವು. 'ಯಾರು ಪಾಕೆಟ್ ಹಂಚಲಿಲ್ಲ, ಯಾರು ಇದನ್ನು ಮಾಡಲಿಲ್ಲ. ಹೇಗಿದೆ ನೋಡಿ, ಪ್ರಾಮಾಣಿಕವಾಗಿ ಹೇಳುವ ಹಾಗೇ ಇಲ್ಲ. ಕಾಯಿದೆಗಳೇ ಹಾಗೆ ಬಂದವು. ಪ್ರಾಮಾಣಿಕತೆ ಎಲ್ಲಿಗೆ ಹೋಗಿದೆ ಎಂದರೆ, ಸ್ವಾಮಿಗಳು ಸಹ ಸುಳ್ಳು ಲೆಕ್ಕ ಬರೆಯಲು ಹಚ್ಚಿಬಿಟ್ಟಿರಿ. ಇವತ್ತು ಅವರೂ ಕೂಡ ಸುಳ್ಳು ಲೆಕ್ಕ ಬರೆಯಬೇಕು. ಇಲ್ಲದಿದ್ದರೆ ಅವರಿಗೂ ಟ್ಯಾಕ್ಸ್ ಹಾಕುತ್ತಾರೆ. ಕಳೆದ 50 ವರ್ಷಗಳಿಂದ ನಾವು ತಂದಂಥ ಅವ್ಯವಸ್ಥೆಯಿಂದ ಪ್ರಾಮಾಣಿಕತೆಯನ್ನು ಅಳಿಸಿಬಿಟ್ಟೆವು. ನಾವು ಕಾಯಿದೆಗಳ ಮೂಲಕ ಪ್ರಾಮಾಣಿಕತೆಯನ್ನು ಕಳೆದೆವು. ಇದು ಈ ವ್ಯವಸ್ಥೆಯನ್ನು ಬದಲು ಮಾಡಲು ಕಾರಣವಾಯಿತು. ಆ ಕಾರಣದಿಂದ ತಾವು ಮುಂದಿನ ನಾಲ್ಕುವರೆ ವರ್ಷಗಳ ಕಾಲ ಇರುತ್ತೀರಿ ಎನ್ನುವುದು ಗ್ಯಾರಂಟಿ ಇದೆ, ತಾವು ರಾಜೀನಾಮೆ ಕೊಡಲು ಹೋಗುವುದಿಲ್ಲ. ಆದರೆ ಹೇಳಲು ಬರುವುದಿಲ್ಲ. ಮೊನ್ನೆ ರಾಜೀನಾಮೆ ಕೊಡುತ್ತಾರೆ ಎಂದು ಮಾಡಿದ್ದೆವು. ಆದರೆ ಕೊಡಲಿಲ್ಲ. ಕೃಷ್ಣಪ್ಪನವರೇ ಒಂದು ವಚನ ಹೇಳಬೇಕೆಂದು ಮಾಡಿದ್ದೇನೆ, ನಡುವೆ ಇಂಥವು ಒಂದೊಂದು ಬೇಕು. ನಿನ್ನೆ ಹೇಳಬೇಕು ಎಂದರೆ ಅಧ್ಯಕ್ಷರು ಹೇಳಗೊಡಲಿಲ್ಲ, ಟೈಂ ಆಯಿತು ಅಂದುಬಿಟ್ಟರು. ಮುಖ್ಯಮಂತ್ರಿಗಳಿಗೂ ಹೇಳಿ ನೋಡಿದೆವು, ನಿಮಗೂ ಹೇಳಿ ನೋಡಿದೆವು, ಏನೇ ಹೇಳಿ ನೋಡಿದರೂ ಸಾಧ್ಯವಾಗಲಿಲ್ಲ, ನಿಮ್ಮದನ್ನೇ ಸಾಧಿಸಿಬಿಟ್ಟಿರಿ. ಅದಕ್ಕಾಗಿ ನನಗೆ ಬಸವಣ್ಣನವರ ಒಂದು ವಚನ ನೆನಪಾಗಿದೆ.

''ಹಾವು ತಿಂದವರ ನುಡಿಸಲು ಬಹುದು,
ಗರ ಹೊಡೆದವರ ನುಡಿಸಲು ಬಹುದು,
ಸಿರಿಯ ಗರ ಹೊಡೆದವರ ನುಡಿಸಲು ಆಗದು ಕೂಡಲ ಸಂಗಮದೇವ''

ಎಂದು ಬಸವಣ್ಣನವರು ಹೇಳಿದ್ದಾರೆ. ಹಾಗೆಯೇ, ಇಲ್ಲಿ ''ಹಾವು ತಿಂದವರ

ನುಡಿಸಬಹುದು, ಗರ ಹೊಡೆದವರನ್ನು ನುಡಿಸಬಹುದು, ಸಿರಿಯ ಗರ ಹೊಡೆದವರನ್ನೂ ನುಡಿಸಬಹುದು, ಆದರೆ ಅಧಿಕಾರದ ಗರ ಹೊಡೆದ ಈ ಕಾಂಗ್ರೆಸ್‌ನವರನ್ನು ನುಡಿಸಲಾಗಲಿಲ್ಲ ವೆಂಕಟರಮಣ''

ಶ್ರೀ ಎಸ್.ಜಿ. ನಂಜಯ್ಯನಮಠ್:(ಬೇರೆ ಸದಸ್ಯರ ಸ್ಥಾನದಿಂದ): ನಿಮ್ಮ ವಚನದ ಪ್ರಕಾರವೇ, ಅಧಿಕಾರದ ಹುಚ್ಚು ಹಿಡಿದವರನ್ನು ಮೊನ್ನೆ ಎಲೆಕ್ಷನ್‌ನಲ್ಲಿ ಸರಿಯಾಗಿ ಹೊಡೆದರು. ಮೊನ್ನೆ ನಿಮಗೆ ಆಗಿದ್ದು ಅದೇ.

ಶ್ರೀ ಡಿ.ವಿ.ಸದಾನಂದಗೌಡ: ದಯವಿಟ್ಟು ನೀವು ನಿಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ. ತಾವು ತಮ್ಮ ಸೀಟಿನಲ್ಲಿಲ್ಲ.

ಶ್ರೀ ಕೆ.ಹೆಚ್.ರಂಗನಾಥ್: ತಾವು ಅದನ್ನು ಕಲಿತುಕೊಳ್ಳಬೇಡಿ.

ಶ್ರೀ ಡಿ.ವಿ.ಸದಾನಂದಗೌಡ:ನೀವು ಅದನ್ನು ಕಲಿತುಕೊಳ್ಳಬೇಡಿ ಎಂದು ತಾವು ಹೇಳಿದರೂ ಕೂಡ ಸದನದಲ್ಲಿ ಬರುವಂಥ ವಿಚಾರಗಳನ್ನು ನಾವು ಸ್ವಲ್ಪ ಗಹನವಾಗಿ ಆಲೋಚನೆ ಮಾಡಬೇಕಾಗುತ್ತದೆ. ನಾವು ಯಕ್ಷಗಾನ ಕಲಿತಿದ್ದೇವೆ, ಈಗ ಸ್ವಲ್ಪ ಬಸವಣ್ಣನವರ ವಚನಗಳನ್ನೂ ಕಲಿಯೋಣ ಎಂದಷ್ಟೇ. ಅದರಲ್ಲೇನು ತಪ್ಪಿದೆ?

ಶ್ರೀ ಕೆ.ಹೆಚ್.ರಂಗನಾಥ್: ಅಧಿಕಾರದ ಗರ ಹೊಡೆದು, ಈಗ ಅಲ್ಲಿ ಬಂದು ಕುಳಿತಿದ್ದೇವೆ ಎಂದು ಸತ್ಯ ಹೇಳಿದರು.

ಶ್ರೀ ಎಸ್.ಎಸ್.ಪಾಟೀಲ್: ನೀವು ಮಾಡಿ ಇಲ್ಲಿಗೆ ಬಂದಿದ್ದಿರಿ. ಈಗ ಮತ್ತೆ ನಾವು ಮಾಡಿ ಇಲ್ಲಿಗೆ ಬಂದಿದ್ದೇವೆ. ಹೀಗೆ ಮತ್ತೆ ಮತ್ತೆ ನಮ್ಮಿಬ್ಬರ ನಡುವೆಯೇ ಇದು ನಡೆಯುವುದು. ಅವರು ಮಾತನಾಡಿ ಪ್ರಯತ್ನ ಮಾಡುತ್ತಾರೆ, ಆದರೆ ಅವರ ಕೆಲಸ ಆಗುವುದಿಲ್ಲ.

ಶ್ರೀ ಕೆ.ಹೆಚ್.ರಂಗನಾಥ್: ಅವರು ಬಂದು ಆಗಿದೆಯಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಅವರು ದೆಹಲಿಯಲ್ಲಿ ಬಂದರು. ನಮ್ಮ ಕೂಡಿಕೊಂಡು ಬರಲು ಹೋದರು, ಬರೋಬರಿ ನೋಡಿಕೊಳ್ಳಲಿಲ್ಲ, ಅದು ಕೂಡಿಕೆಯಾಗಿಬಿಟ್ಟಿತು. ಬರೋಬರಿ ಲಗ್ನವಾಗಿದ್ದರೆ ಕೂಡಿ ಬಾಳ್ವೆ ಮಾಡಬಹುದಾಗಿತ್ತು.

ಶ್ರೀ ಕೆ.ಹೆಚ್.ರಂಗನಾಥ್: 1947ರಿಂದ 1983ರವರೆಗೆ ಮತ್ತು ಇಳಿದಿರಲಿಲ್ಲ. 1983ರಲ್ಲಿ ಇಳಿಯಿತು ಮತ್ತೆ ಸರಿ ಬರಲಿಲ್ಲ. ಮತ್ತೆ 1985ರಲ್ಲಿ, 1995ರಲ್ಲಿ ಇಳಿಯಿತು.

ಶ್ರೀ ಎಸ್.ಎಸ್.ಪಾಟೀಲ್: ಈ ಸಂದರ್ಭದಲ್ಲಿ ಇವತ್ತು ಮಾನ್ಯ

ಜೆ.ಹೆಚ್.ಪಟೇಲ್‌ರನ್ನು ಎಲ್ಲರೂ ನೆನೆಸಿಕೊಳ್ಳುತ್ತಾರೆ. ಆವತ್ತು ಅವರು ಹೇಳಿದ ಒಂದು ಮಾತನ್ನು ಹೇಳಿಬಿಡುತ್ತೇನೆ. ಅದು ತೃಣಮೂಲ ಕಾಂಗ್ರೆಸ್ ಅಂತೆ. ನೀವು (ಕಾಂಗ್ರೆಸ್‌ನವರು) ಋಣ ಮೂಲ. ಇವರು (ಬಿ.ಜ.ಪಿ.ಯವರು) ಅಣುಮೂಲ, ನಮ್ಮದು ರಣಮೂಲ ಎಂದು ಹೇಳಿದ್ದರು. ತೃಣಮೂಲ ಕಾಂಗ್ರೆಸ್ ಎಂದರೆ, ಅದು ತೃಣ ಮೂಲ ಆಗಿದೆ, ನಿಮ್ಮದು ಋಣ ಮೂಲ ಅಂದರೆ 50 ವರ್ಷಗಳಾದರೂ ನಿಮಗೆ ಜನರ ಋಣವೇ ತೀರಿಸಲು ಆಗಲಿಲ್ಲ. ಅದಕ್ಕಾಗಿ ನಿಮ್ಮದು ಋಣಮೂಲ. ಇವರದು ಅಣುಮೂಲ, ಏಕೆಂದರೆ ಇವರು ಆಗಾಗ ಸ್ಫೋಟ ಮಾಡುತ್ತಿರುತ್ತಾರೆ. ನಮ್ಮದು ರಣಮೂಲ, ಏಕೆಂದರೆ ದಿನಾ ಗುದ್ದಾಡಲು ಹತ್ತಿದ್ದೇವಲ್ಲ, ಅದಕ್ಕೇ ಹೀಗೆಂದು ಹೇಳಿದ್ದರು. ಹಾಗೆಯೇ ಇವತ್ತು ನೀವೂ ಕೂಡ ರಣಮೂಲರಾಗಿದ್ದೀರಿ. ರಂಗನಾಥ್‌ರವರೆ, ಹಿಂದೆ ತಾವು ಇದ್ದಿರೆಂದು ಕಾಣುತ್ತದೆ. ಅದನ್ನು ತಾವು ಹೇಗೆ ಸಹಿಸಿಕೊಂಡಿರಿ?

ಮಾನ್ಯ ವೀರಪ್ಪಮೊಯಿಲಿ ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಅವರ ಸಂಪುಟದಲ್ಲಿದ್ದವರೊಬ್ಬರು ಹೊಡೆಯುವುದಕ್ಕೆ ಹೋಗಿರುವ ಘಟನೆ ನಡೆದಿತ್ತು. ಕಾಂಗ್ರೆಸ್‌ನವರೇ ಮಾನ್ಯ ಮುಖ್ಯಮಂತ್ರಿಯವರಿಗೆ ಚೂರಿ ಹಾಕುವದಕ್ಕೆ ಹೋಗಿದ್ದರು ಎಂದು ಪೇಪರ್‌ನಲ್ಲಿ ಬಂದಿತ್ತು. ನಾನು ಸುಳ್ಳು ಹೇಳುತ್ತಿಲ್ಲ. ಆ ಸಂದರ್ಭದಲ್ಲಿ ಮಾನ್ಯ ರಂಗನಾಥ್ ಅವರು ಇರಲಿಲ್ಲವೆಂದು ತೋರುತ್ತದೆ. ಅಲ್ಲವೇ? ಮಾನ್ಯ ರಂಗನಾಥ್ ಅವರಂಥ ಹಿರಿಯರು ಅಲ್ಲಿ ಇರಲಿಕ್ಕೆ ಸಾಧ್ಯವಿಲ್ಲ. ಹಸಿರು ಕಾರ್ಡು ಬಗ್ಗೆ ನಮ್ಮ ಮಾನ್ಯ ಸಿಂಧ್ಯ ಅವರು ಮಾತನಾಡಿದಾಗ ಆ ಸಂದರ್ಭದಲ್ಲಿ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇದ್ದಿದ್ದರೆ, ಅದರ ಬಗ್ಗೆ ಸುಮಾರು 3 ಗಂಟೆಗಳ ಕಾಲ ಚರ್ಚೆ ನಡೆಯುತ್ತಿದ್ದು, ಆ ಮಂತ್ರಿಯವರು ಕೆಲವು ಬುಕ್‌ಗಳನ್ನು ತೆಗೆದುಕೊಂಡು ಉದಾಹರಣೆಕೊಟ್ಟು, ನಿಯಮಗಳನ್ನು ಕೋಟ್ ಮಾಡಿಕೊಂಡು ಉತ್ತರ ಹೇಳುತ್ತಿದ್ದರು. ಆದರೆ ಹಿರಿಯ ಸಚಿವರಾದ ತಾವು ಒಂದೇ ಒಂದು ಮಾತಿನಲ್ಲಿ ಶ್ರೀ ಸಿಂಧ್ಯ ಅವರನ್ನು ಗಪ್‌ಚಿಪ್ ಮಾಡಿಬಿಟ್ಟಿರಿ. ಅಂದರೆ ಇಲ್ಲಿ ವಿತಂಡ ವಾದಕ್ಕೆ ಅವಶ್ಯಕತೆಯಿಲ್ಲ. ಇನ್ನು ವಿಷಯಕ್ಕೆ ಬರೋಣ. ಪಂಚಾಯಿತಿ ವ್ಯವಸ್ಥೆಯಲ್ಲಿ ತಮ್ಮ ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ''ಸರ್ಕಾರವು ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಸಮಾಜಕಲ್ಯಾಣ ಮತ್ತು ಗ್ರಾಮೀಣ ಅಭಿವೃದ್ಧಿಯಂತಹ ಅತ್ಯಾವಶ್ಯಕ ವಲಯಗಳ ಸುಧಾರಣೆಗೆ ಆದ್ಯತೆ ನೀಡುತ್ತೇವೆ'' ಎಂದು ಹೇಳಿದ್ದೀರಿ. ಆದರೆ ಆದ್ಯತೆ ನೀಡಿದ್ದೀರಾ? ಈ ಎಲ್ಲಾ ವಲಯಗಳಿಗೆ ಆದ್ಯತೆ ನೀಡುತ್ತೇವೆಂದು ಹೇಳಿದಿರಿ, ಮಾನ್ಯ ಘೋರ್ಪಡೆಯವರೆ, ತಾವು ಹೇಳಬೇಕು, ಆದ್ಯತೆ ಅಂದರೇನು? ಹಣ ಇಲ್ಲದೆ ಅಭಿವೃದ್ಧಿ ಕೆಲಸವನ್ನು ಮಾಡುತ್ತೀರಾ? ನಿಮ್ಮ ಗ್ರಾಮೀಣಾಭಿವೃದ್ಧಿಗೆ 7000 ಕೋಟಿ ರೂಪಾಯಿಗಳ ಬಜೆಟ್‌ನಲ್ಲಿ 300 ಕೋಟಿ ರೂಪಾಯಿಗಳಷ್ಟು ಸಹ ಕೊಟ್ಟಿಲ್ಲ. ಇದರ

ವಿವರ ಹೇಳುತ್ತೇನೆ. ಇದು ಆ ನಿಮ್ಮ ಸರ್ಕಾರ ಕೊಡುತ್ತಿರುವ ಆದ್ಯತೆಯೇ? ಇಷ್ಟು ಹಣದಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ನಮ್ಮ ರಾಜ್ಯದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 70ರಷ್ಟು ಗ್ರಾಮೀಣ ಜನರಿಲ್ಲವೇ? ಈ ಬಜೆಟ್‌ನಲ್ಲಿ ಅರ್ಧದಷ್ಟು ಅಂದರೆ ಏಳೂವರೆ ಸಾವಿರ ಕೋಟಿ ರೂಪಾಯಿಗಳಲ್ಲಿ ಕನಿಷ್ಟ ಮೂರುವರೆ ಸಾವಿರ ಕೋಟಿ ರೂಪಾಯಿಗಳಷ್ಟನ್ನಾದರೂ ಗ್ರಾಮೀಣಾಭಿವೃದ್ಧಿಗೆ ಇಡಬೇಕಾಗಿತ್ತು. ಅಷ್ಟು ಹಣ ಕೊಟ್ಟಿದ್ದರೆ, ಇವರ ಸರ್ಕಾರ ಗ್ರಾಮಿಣಾಭಿವೃದ್ಧಿಗೆ ಒತ್ತು ಕೊಟ್ಟಿದ್ದಾರೆಂದು ನಾನು ಹೇಳುತ್ತಿದ್ದೆ. ಆದರೆ ಅಷ್ಟು ಹಣವನ್ನು ಬಜೆಟ್‌ನಲ್ಲಿ ತಾವು ಕೊಡಲಿಲ್ಲ. ನಮ್ಮ ಸರ್ಕಾರ ಇದ್ದಾಗ ಎಷ್ಟು ಹಣ ಇಡಲಾಗಿತ್ತೊ ಅದಕ್ಕಿಂತ ಕಡಿಮೆ ಹಣ ಇಟ್ಟಿದ್ದೀರಿ ಎಂದು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕೃಷಿ ಮತ್ತು ಸಂಬಂಧಪಟ್ಟ ಸೇವೆ ಇದಕ್ಕೆ 313.29 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ನಮ್ಮ ಸರ್ಕಾರ ಇದ್ದಾಗ ಇದಕ್ಕೆ ಶೇಕಡ 5.23 ರಷ್ಟು ಹಣ ಇಟ್ಟಿದ್ದರೆ ಈಗಿನ ಸರ್ಕಾರ ಅದನ್ನು ಕಡಿಮೆ ಮಾಡಿ ಶೇಕಡ 4.31 ರಷ್ಟು ಹಣವನ್ನು ಇಟ್ಟಿದ್ದೀರಿ. ಹಾಗೆಯೇ ತಾವು ಹೇಳಿರುವ ಇನ್ನೊಂದು ವಿಚಾರವನ್ನು ಇಲ್ಲಿ ಓದುತ್ತೇನೆ. ''ಎಲ್ಲಾ ತೊಂದರೆಗಳ ನಡುವೆಯೂ ನಮ್ಮ 2000-2001ರ ವಾರ್ಷಿಕ ಯೋಜನಾ ವೆಚ್ಚವನ್ನು 7,274 ಕೋಟಿ ರೂಪಾಯಿಗಳಿಗೆ ನಿಗದಿಗೊಳಿಸಿರುವುದನ್ನು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಸಂತೋಷವಾಗುತ್ತದೆ. 1999-2000ರ ಪರಿಷ್ಕೃತ ವಾರ್ಷಿಕ ಯೋಜನಾ ವೆಚ್ಚದ ಮೊತ್ತವಾದ 5,731 ಕೋಟಿ ರೂಪಾಯಿಗಳಿಗೆ ಇದನ್ನು ಹೋಲಿಸಿ ನೋಡಬಹುದಾಗಿದೆ. ಈ ಶೇಕಡ 40ರ ಬೆಳವಣಿಗೆಯು ಈ ಹಿಂದೆ ಎಂದೂ ಆಗಿರಲಿಲ್ಲ'' ಎಂದು ಹೇಳಿದ್ದೀರಿ. ಆದರೆ ಇಲ್ಲಿ ಗ್ರಾಮಿಣಾಭಿವೃದ್ಧಿಗೆ ಕಡಿಮೆ ಹಣವನ್ನು ಇಟ್ಟಿದ್ದೀರಿ. ಏಕೆ ಹೀಗೆಮಾಡಿದ್ದೀರಿ ಎಂಬುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಇಲ್ಲಿ ಶೇಕಡ 40ರಷ್ಟು ಬೆಳವಣಿಗೆಯಾಗಿದೆ ಎಂದು ಹೇಳಿದ ಮೇಲೆ ನಾವು ಕಳೆದ ವರ್ಷ ಶೇಕಡ 5.23ರಷ್ಟು ಹಣ ಇಟ್ಟಿರುವುದಕ್ಕೆ ನಿಮ್ಮ ಸರ್ಕಾರದವರು ಇನ್ನೂ 40 ಪರ್ಸಂಟ್ ಹಣ ಹೆಚ್ಚಿಗೆ ಸೇರಿಸಿ ಇಡಬೇಕಿತ್ತು. ನನ್ನ ಪ್ರಕಾರ ಬಜೆಟ್‌ನಲ್ಲಿರುವ ಒಟ್ಟು ಹಣದಲ್ಲಿ ಕನಿಷ್ಟ 50 ಭಾಗವಾದರೂ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಹಣವನ್ನು ಇಡಬೇಕಾಗಿತ್ತು. 100ಕ್ಕೆ 50ರಷ್ಟು ಆದರೂ ಹಣ ಗ್ರಾಮೀಣ ಪ್ರದೇಶಕ್ಕೆ ಖರ್ಚು ಮಾಡಿದಾಗ ಮಾತ್ರ ನೀವು ''ಗ್ರಾಮ ಸ್ವರಾಜ್ಯದ ಕನಸು'' ಕಾಣುವುದಕ್ಕ ಸಾಧ್ಯವಾಗುತ್ತದೆ ಮತ್ತು ಅಲ್ಲಿಯ ಅಭಿವೃದ್ದಿಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಬಜೆಟ್‌ನಲ್ಲಿ ಇಟ್ಟಿರತಕ್ಕಂಥ ಹಣದಲ್ಲಿ 4,000 ಕೋಟಿ ರೂಪಾಯಿಗಳು ಪಂಚಾಯಿತಿಗಳ ಮೂಲಕ ಖರ್ಚು ಆಗುತ್ತವೆ, ಮತ್ತು ನಮ್ಮ ಡಿಪಾರ್ಟ್‌ಮೆಂಟ್‌ಗೆ 1,000ಕೋಟಿ ರೂಪಾಯಿಗಳು ಸಿಕ್ಕಿದೆ, ಹೀಗೆ ಒಟ್ಟು 5,000 ಕೋಟಿ ರೂಪಾಯಿಗಳು ಗ್ರಾಮೀಣ ಅಭಿವೃದ್ಧಿಗೋಸ್ಕರ ಖರ್ಚು ಆಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನೀರಾವರಿಗೆ, ರಸ್ತೆಗೆ, ವಿದ್ಯುತ್‌ಗೆ ಹೀಗೆ ಬೇರೆ ಬೇರೆ ಕೆಲಸಗಳಿಗೆ ಕೊಟ್ಟಿರುವ ಹಣವನ್ನು ಗ್ರಾಮೀಣಾಭಿವೃದ್ಧಿಗೆ ಕೊಟ್ಟಿದ್ದೇವೆಂದು ಹೇಳುವುದಾದರೆ ಇನ್ನು 'ಗ್ರಾಮೀಣಾಭಿವೃದ್ಧಿಗೆ' ಎಂದು ಪ್ರತ್ಯೇಕವಾಗಿ ನಮೂದಿಸಿ ಇದರಲ್ಲಿ ಹಣವನ್ನು ಏಕೆ ಇಟ್ಟಿದ್ದೀರಿ? ಹಾಗಾದರೆ ಗ್ರಾಮೀಣಾಭಿವೃದ್ಧಿಗೆಂದು ಇದರಲ್ಲಿ 300 ಕೋಟಿ ರೂಪಾಯಿಗಳನ್ನು ಏಕೆ ಇಟ್ಟಿದ್ದೀರಿ? ಇದಕ್ಕೆ ಮೂರೂವರೆ ಸಾವಿರ ಕೋಟಿ ರೂಪಾಯಿಗಳನ್ನು ಇಡಿ. ನಿಮ್ಮಿಂದ ಇಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗೆ ಎಲ್ಲಾ ಐಟಂಗಳಲ್ಲಿ ಕಡಿಮೆ ಹಣವನ್ನು ಇಟ್ಟಿದ್ದೀರಿ. ಗ್ರಾಮೀಣ ಅಭಿವೃದ್ಧಿಗೆ ನಮ್ಮ ಸರ್ಕಾರ ಶೇಕಡ 4.21 ಹಣ ಇಟ್ಟಿದ್ದರೆ ನೀವು 3.94 ಪರ್ಸೆಂಟ್ ಹಣ ಇಟ್ಟಿದ್ದೀರಿ. ಕೈಗಾರಿಕೆ ಮತ್ತು ಖನಿಜಕ್ಕೆ ಹಿಂದೆ ನಮ್ಮ ಸರ್ಕಾರ ಶೇಕಡ 2.68 ಇಟ್ಟಿದ್ದರೆ ಈಗ ಶೇಕಡ 2.25 ಹಣ ಇಟ್ಟಿದ್ದೀರಿ. ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ ಇದಕ್ಕೆ ನಮ್ಮ ಹಿಂದಿನ ಸರ್ಕಾರ ಶೇಕಡ 6.20 ಹಣ ಇಟ್ಟಿದ್ದರೆ ನೀವು ಈಗ 5.83 ಪರ್ಸೆಂಟ್ ಹಣ ಇಟ್ಟಿದ್ದೀರಿ. ಇನ್ನೊಂದು ಮಹತ್ವವಾದ ಇಲಾಖೆಗೆ ಹಣ ಕಡಿಮೆ ಇಟ್ಟಿರುವುದನ್ನು ಇಲ್ಲಿ ಹೇಳಿಬಿಡುತ್ತೇನೆ. ಹರಿಜನ ಗಿರಿಜನ ಹೀಗೆ ಎಲ್ಲರೂ ಕಾಂಗ್ರೆಸ್‌ನಿಂದಲೇ ಉದ್ಧಾರವಾಗುವುದು ಎನ್ನುವ ರೀತಿಯಲ್ಲಿ ಭಾಷಣ ಮಾಡುತ್ತೀರಿ. ಪುನಃ ಅಧಿಕಾರಕ್ಕೆ ಅವರಿಂದಲೇ ನೀವು ಬರುವುದು, ಪುನಃ ನಿಮ್ಮ ಸರ್ಕಾರವನ್ನು ಅವರು ಈ ಸಲ ಆರಿಸಿ ಕಳುಹಿಸಿದ್ದಾರೆ. ಆದರೆ, ಅವರಿಗೆ ನಿಮ್ಮ ಸರ್ಕಾರ ಮಾಡಿದ್ದೇನು? ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ನಮ್ಮ ಹಿಂದಿನ ಸರ್ಕಾರ ಶೇಕಡ 3.20 ಹಣವನ್ನು ಬಜೆಟ್‌ನಲ್ಲಿ ಇಟ್ಟಿದ್ದರೆ ಈಗಿನ ನಿಮ್ಮ ಸರ್ಕಾರ ಶೇಕಡ 2.92ಕ್ಕೆ ಇಳಿಸಿದ್ದೀರಿ. ಇನ್ನು ಸಮಾಜ ಕಲ್ಯಾಣ ಮತ್ತು ಪೌಷ್ಠಿಕ ಆಹಾರಕ್ಕೆ ನಮ್ಮ ಹಿಂದಿನ ಸರ್ಕಾರ ಶೇಕಡ 1.46 ಹಣವನ್ನು ಬಜೆಟ್‌ನಲ್ಲಿ ಇಟ್ಟಿದ್ದರೆ ನಿಮ್ಮ ಸರ್ಕಾರ ಈಗ ಕೇವಲ ಶೇಕಡ 0.24 ಇಟ್ಟಿದ್ದೀರಿ. ಹೀಗೆ ಯಾವುದೇ ಐಟಂಗಳನ್ನು ನೋಡಿದರೂ ಕೂಡ ಎಲ್ಲದರಲ್ಲೂ ಸಹ ಕಡಿಮೆ ಹಣವನ್ನು ಇಟ್ಟಿದ್ದೀರಿ. ಯಾವುದರಲ್ಲೂ ಹೆಚ್ಚು ಹಣ ಇಟ್ಟಿಲ್ಲ. ಹೀಗಾದರೆ ನೀವು ಗ್ರಾಮೀಣ ಪ್ರದೇಶವನ್ನು ಹೇಗೆ ಅಭಿವೃದ್ಧಿ ಮಾಡುತ್ತೀರಿ?

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಎಸ್.ಎಸ್.ಪಾಟೀಲರೆ, ನೀವು ಕಾಂಗ್ರೆಸ್‌ನ್ನು ಯಾವಾಗ ಬಿಟ್ಟಿರಿ?

ಶ್ರೀ ಎಸ್.ಎಸ್.ಪಾಟೀಲ್: ನಾನು ಕಾಂಗ್ರೆಸ್ಸಿಗನೇ ಆಗಿದ್ದೆ. ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷರಾಗಿದ್ದಾಗ ನಾವು ಕಾಂಗ್ರೆಸ್ ಬಿಡಬೇಕಾಯಿತು.

ಶ್ರೀ ಕೆ.ಹೆಚ್.ರಂಗನಾಥ್: ಹಾಗಾದರೆ ನಮ್ಮ ಟೋಪಿಯನ್ನು ನೀವು ಏಕೆ ಇಟ್ಟು ಕೊಂಡಿದ್ದೀರಿ?

ಶ್ರೀ ಎಸ್.ಎಸ್.ಪಾಟೀಲ್: ಅಯ್ಯೋ, ಟೋಪಿ ಸುದ್ದಿ ಹೇಳಬೇಕೇನು?

ಶ್ರೀ ಕೆ.ಶ್ರೀನಿವಾಸಗೌಡ: ಒಂದ್ನಿಮಿಷ, ಕಾಂಗ್ರೆಸ್‌ನಲ್ಲಿದ್ದಾಗ ಆಗ ಟೋಪಿಗಳನ್ನು ಹಾಕುತ್ತಿದ್ದರು. ಈಗೆಲ್ಲಾ ಟೋಪಿಗಳನ್ನು ಹಾಕುವುದೇ ಬಿಟ್ಟುಬಿಟ್ಟರು.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಉಪಾಧ್ಯಕ್ಷರೆ, ಹಿಂದೆ ಯಾರು ಆ ಟೋಪಿ ಪಾರ್ಟಿಯಲ್ಲಿ ಇದ್ದರು, ಈಗ ಅವರೆಲ್ಲ ಟೋಪಿ ಹಾಕುವುದಕ್ಕೆ ಹೊರಟು ತಾವೇ ಟೋಪಿ ಧರಿಸುವುದನ್ನು ಬಿಟ್ಟುಬಿಟ್ಟದ್ದಾರೆ. ಯಾರು ಆ ಟೋಪಿ ಹಾಕದವರು. ಹಿಂದಿನಿಂದಲೇ ಟೋಪಿ ಧರಿಸುತ್ತಿದ್ದವರು ಈಗ ಟೋಪಿ ಇಟ್ಟುಕೊಂಡಿದ್ದಾರಷ್ಟೆ.

ಶ್ರೀ ಎಸ್.ಎಸ್.ಪಾಟೀಲ್: ಸ್ವಾತಂತ್ರ್ಯ ಪೂರ್ವದಲ್ಲಿ ಈ ಟೋಪಿಗೆ ಗೌರವವಿತ್ತು. ಮಾನ್ಯ ನಿಜಲಿಂಗಪ್ಪನವರು ಈ ರಾಷ್ಟ್ರದ ಕಾಂಗ್ರೆಸ್ಸಿನ ಅಧ್ಯಕ್ಷರು ಆಗಿರುವವರೆಗೆ ಈ ಟೋಪಿಗೆ ಗೌರವವಿತ್ತು. ತದನಂತರ ಈ ಟೋಪಿಗೆ ಏನಾಗಿದೆ ಎಂದು ನಿಮಗೆ ಹೇಳಲೇನು?

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಿಜಲಿಂಗಪ್ಪನವರು ಇವರ ಸಹವಾಸ ಸಾಕೆಂದು ಹೇಳಿ ಇವರ ಸಂಬಂಧವನ್ನು ಬಿಟ್ಟು ಅವರು ಒಂಟಿಯಾಗಿ ಸುಖವಾಗಿ ಇದ್ದಾರೆ. ಅವರು ಇವರನ್ನು ನಂಬಿಕೊಂಡು ರಾಜಕಾರಣ ಮಾಡಿದರು. ಆ ಮೇಲೆ ಅವರಿಗೆ ಸುಸ್ತಾಗಿ ಇವರ ಸಹವಾಸವನ್ನೇ ಅವರು ಬಿಟ್ಟುಬಿಟ್ಟರು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಈ ಟೋಪಿ ಬಗ್ಗೆ ಏನಾಗಿದೆ ಎಂದರೆ - ಬಹುಶಃ ನಾನು ಬೆಂಗಳೂರಿಗೆ ಬರುವುದಕ್ಕೆ ಮುಂಚೆ, ಮೊದಲೆಲ್ಲ ಟೋಪಿ ಹಾಕಿಕೊಂಡು ಬರುತ್ತಾರೆಂದರೆ ಬಹಳ ಗೌರವಸ್ಥರು, ಬಹಳ ದೊಡ್ಡ ಮನುಷ್ಯರು, ಗಾಂಧಿವಾದಿಗಳು, ಸತ್ಯವಂತರು, ಇದ್ದದ್ದನ್ನು ಇದ್ದಹಾಗೆ ಹೇಳುವವರು ಎನ್ನುವ ಅಭಿಪ್ರಾಯ ಆಗ ಇತ್ತು. ಅಂದರೆ ಎಲ್ಲರೂ ಕಾಂಗ್ರೆಸಿಗರು ಎಂದು ಇತ್ತು, ಸಾಮಾನ್ಯವಾಗಿ ಟೋಪಿ ಹಾಕುವವರು ಎಂದರೆ ಇವರು ಕಾಂಗ್ರೆಸಿನವರು ಎಂದು ಹೇಳುತ್ತಿದ್ದರು. ಏಕೆಂದರೆ, ಇವರ ಬಗ್ಗೆ ಬಹಳ ಗೌರವ ಇತ್ತು ಇವರು ಬಹಳ ಹೋರಾಟ ಮಾಡಿದವರು ಎಂದು ಜನ ಹೇಳುತ್ತಿದ್ದರು. ಇವತ್ತು ನೀವು ಹೇಳಿದ ಹಾಗೆ ನಾನು ಈ ಟೋಪಿಯನ್ನು ತೆಗೆಯುವ ಸಂದರ್ಭ ಬಂದಿದೆ. ಏಕೆಂದರೆ, ಇವತ್ತು ಟೋಪಿ ಹಾಕಿದವರು ಎಂದರೆ ಮೂರು ಬಿಟ್ಟವರು. ಎಂದು ಅರ್ಥ ಮೂರು ಬಿಟ್ಟವರು ಎಂದರೆ ನಾನು ಇವತ್ತು ಅವನ್ನು ಹೇಳಬಾರದು ಏಕೆಂದರೆ ಅಲ್ಲಿ ಅದು ಮೂಡಬಾರದು, ಅದು ತಪ್ಪಾಗುತ್ತದೆ. ಅವು ಮೂರು ಯಾವ್ಯಾವು ಎಂದರೆ. ಕಚ್ಚೆ, ಕೈ,ಬಾಯಿ, ಈ ಮೂರು ಶುದ್ಧ ಇಲ್ಲದ ಜನ. ಈ ಮೂರು ಬಿಟ್ಟಂಥ ಜನ ಎಂದು ಇವತ್ತು ನಮ್ಮನ್ನು ಗುರುತಿಸುತ್ತಾರೆ. ಏಕೆಂದರೆ, ಇವನು ಈ ರೀತಿ ಡ್ರೆಸ್ ಹಾಕಿದ್ದಾನೆಂದರೆ ಇವನು ಬಹಳ ಡೇಂಜರ್ ಮನುಷ್ಯ ಎಂದು ಜನರು ಭಾವಿಸುತ್ತಾರೆ. ಯಾರೂ ಇದನ್ನು ಇವತ್ತು ಅಲ್ಲಗಳೆಯುವುದಕ್ಕೆ ಆಗುವುದಿಲ್ಲ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ: ನಿಮ್ಮ ಮಾತಿನಿಂದ ಗೌರವದಿಂದ ಇರುವಂಥ ನಮ್ಮಂಥವರಿಗೂ ಮರ್ಯಾದೆ ತೆಗೆಯುತ್ತೀರಿ ಗೌರವ ಇರುವಾಗ ಮರ್ಯಾದಸ್ಥರಿಗೂ ನೀವು ಮರ್ಯಾದೆ ತೆಗೆಯುತ್ತೀರಿ ಎಂದು ಕಾಣುತ್ತದೆ. ಬಸವಣ್ಣನವರ ವಚನ ಏನಿದೆ ಅದನ್ನು ಹೇಳುವುದಕ್ಕಿಂತ, ಅವರು ಹೇಗೆ ನಡೆದು ತೋರಿಸಿದ್ದಾರೆ ಆ ಪ್ರಕಾರವಾಗಿ ನಡೆಯಬೇಕೆಂದು ನಾವು ಎಲ್ಲರೂ ಇಲ್ಲಿಗೆ ಬಂದಿರುವುದು. ವಿಧಾನ ಸಭೆಯಲ್ಲಿ ನಾವು ಕೇವಲ ಮಾತು ಹೇಳುವುದಕ್ಕಲ್ಲ. ನಾವು ಎಲ್ಲರೂ ಇಲ್ಲಿ ಬಂದದ್ದು ಏಕೆ ಅಂದರೆ ಬಸವಣ್ಣನ ಕಾಯಕಕ್ಕೆ ಬಂದಿರುವುದು. ಬಸವಣ್ಣ ಸಮತಾವಾದ ಸಿದ್ಧಾಂತವನ್ನು ತೆಗೆದುಕೊಂಡು ಬಂದಿದ್ದ ಸಮಾಜದಲ್ಲಿ ಎಲ್ಲರಿಗೂ ಹಂಚಿ ಎಲ್ಲ ಅಭಿವೃದ್ಧಿಯನ್ನು ಮಾಡುವಂಥ ಕಾರ್ಯದಲ್ಲಿ ಏನು ಆ ಬಸವಣ್ಣ ತೊಡಗಿದ್ದಾನೋ ಆ ಒಂದು ಕಾಯಕಕ್ಕಾಗಿಯೇ ನಾವು ಎಲ್ಲರೂ ಇಲ್ಲಿಗೆ ಬಂದಿರುವುದು. ನಾವು ಈ ಗೌರವವನ್ನು ತರಲಿಕ್ಕೆ ಮಹಾತ್ಮ ಗಾಂಧೀಜಿಯವರ ಕಾಲದಿಂದಲೂ ಇರುವಂಥ ಈ ಟೋಪಿಗೆ ಒಂದು ಬೆಲೆ ಇದೆ. ಆ ಬೆಲೆಯನ್ನು ಉಳಿಸಿಕೊಳ್ಳುವಂಥ ಜನರು ಈ ಟೋಪಿಯನ್ನು ಹಾಕಿಕೊಳ್ಳುವ ಅಗತ್ಯವಿದೆ. ಮಾನ್ಯ ಪಾಟೀಲರು ಹೇಳಿದಂತೆ ಅದರ ಬೆಲೆ ಕಳೆದಿದೆ, ಕಳೆದಿದ್ದಾರೆಂದು ಹೇಳುವ ಮಾತು ಬೇರೆ. ಆದರೆ ಇರುವಂಥ ಜನ ಆದರೂ ಅದನ್ನು ಉಳಿಸಿಕೊಳ್ಳುವ ಅಗತ್ಯ ಇದೆ. ಇದನ್ನು ನಮ್ಮ ಮಾನ್ಯ ರಂಗನಾಥರವರು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ನಾವು ಈ ವಿಚಾರವನ್ನು ಹೇಳುವುದಕ್ಕೆ ನೀವು ಬಿಡಲಿಲ್ಲ ಇಲ್ಲಿ ಏನಾಗಿದೆ ಎಂದರೆ ಮಾನ್ಯ ಚಂದ್ರಕಾಂತ್ ಬೆಲ್ಲದ್‌ರಂಥವರು ಸ್ವಲ್ಪ ಮಂದಿ ಇದ್ದರು ಇವರು ಕೂಡ ಅದರಲ್ಲಿ ಕೂಡಿ ಹೋಗಿದ್ದಾರೆ.

ಶ್ರೀ ಚಂದ್ರಕಾಂತ್ ಬೆಲ್ಲದ್:ಎಲ್ಲರಿಗೂ ಹೋಗಲಿಕ್ಕೆ ಆಗುವುದಿಲ್ಲ. ಜನರಲ್ಲಿ ಆ ನಮೂನೆ ಭಾವನೆ ಬಂದಿದೆ. ಎಲ್ಲರೂ ಹೋಗುವುದಿಲ್ಲ, ಅವರು ತಮ್ಮ ತನವನ್ನು ಉಳಿಸಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಬೆಲ್ಲದ್‌ರವರು ಹೇಳಿದ ಮಾತಿಗೆ ಒಂದು ಮಾತು ನನಗೆ ನೆನಪಾಗುತ್ತದೆ ಅದನ್ನು ಹೇಳಿದರೆ ತಪ್ಪೇನು ಆಗುವುದಿಲ್ಲ ಏಕೆಂದರೆ ಅದು ಇಲ್ಲಿ ಚರ್ಚೆಯಾಗಬೇಕಾಗುತ್ತದೆ. ಸುಮಾರು 20-25 ವರ್ಷಗಳ ಹಿಂದೆ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಒಂದು ಕಾರ್ಟೂನ್ ಬಂದಿತ್ತು. ನಾನು ಅದನ್ನು ನೋಡಿದ್ದೇ, ಅದು ಏನೆಂದರೆ, ಮಹಾತ್ಮ ಗಾಂಧೀಜಿಯವರ ಜಯಂತಿಯ ದಿವಸ ಪೂಜ್ಯ ಗಾಂಧೀಜಿಯವರ ಭಾವಚಿತ್ರವನ್ನು ಅಲ್ಲಿ ಹಾಕಿದ್ದರು, ನಮ್ಮಂಥ ಟೋಪಿ ಹಾಕಿದ ಪುಢಾರಿಗಳು ಆ ಫೋಟೋದ ಮುಂದೆ ನಿಂತುಕೊಂಡು ಒಬ್ಬ ಪುಢಾರಿ ಏನು ಕೇಳುತ್ತಿದ್ದ ಎಂದರೆ ''ಇಲ್ಲಿ ಹಾಕಿರುವ ಭಾವಚಿತ್ರ ಯಾರದ್ದು? ಎಂದು ಕೇಳುತ್ತಿದ್ದ. ಇಂಥ ಸ್ಥಿತಿಗೆ ನಾವಿಂದು ಹೋಗಿದ್ದೇವೆ. ಮಹಾತ್ಮ ಗಾಂಧಿಜಿಯವರನ್ನೇ ನಾವು

ಮರೆತಿದ್ದೇವೆ ಎಂದರೆ, ಆತನ ತತ್ವಗಳು ಎಲ್ಲಿ ಹೋಗಿವೆ? ಆತನ ತತ್ವಗಳು ಎಲ್ಲ ಹೋಗಿವೆ? ಬಹುಶಃ ನಾನು ಈ ಮಾತನ್ನು ಸುಮಾರು ಹತ್ತು ಸಲ ಹೇಳಿರಬಹುದು. ಅದೇನೆಂದರೆ, ಗಾಂಧೀಜಿಯ ಕೊಲೆಗಾರ ಗೋಡ್ಸೆ ಅಲ್ಲ, ಸ್ವಾತಂತ್ರ್ಯದ ನಂತರ ಪೂಜ್ಯ ಪಿತಮಹಾನ ತತ್ವಗಳನ್ನು ನಾವು ಕೊಲೆ ಮಾಡಿದೆವು. ಆದ್ದರಿಂದ ನಾವೇ ನಿಜವಾದ ಕೊಲೆಗಾರರು. ಗೋಡ್ಸೆ ಕೇವಲ ಪೂಜ್ಯ ಗಾಂಧೀಜಿಯವರನ್ನು ಹೊಡೆದು ಹಾಕಿರಬಹುದು ಆದರೆ ಆತನ ಆತ್ಮ ನಮ್ಮೆಲ್ಲರ ಮಧ್ಯದಲ್ಲಿದೆ. ಆತನ ತತ್ವಗಳು ನಮ್ಮೆಲ್ಲರ ಮಧ್ಯದಲ್ಲಿದೆ. ಆತನ ನಿಜವಾದ ಆತ್ಮಕ್ಕೆ ದ್ರೋಹ ಬಗೆದವರು ಯಾರು ಎಂದರೆ, ಕಳೆದ 40 ವರ್ಷಗಳಿಂದ ಈ ದೇಶವನ್ನು ಆಳಿದಂಥ ಈ ಕಾಂಗ್ರೆಸ್‌ನವರು ಕಾರಣ ಎನ್ನತಕ್ಕಂಥ ಮಾತನ್ನು ನಾನು ಹೇಳಬಯಸುತ್ತೇನೆ. ನಾನು ಕೂಡ ಕಾಂಗ್ರೆಸಿಗ ಎಂದು ಈಗಾಗಲೇ ಹೇಳಿಕೊಂಡೆ ಈ ಮಾತನ್ನು ಹೇಳುತ್ತಿರುವುದು, ನಾನು ಆ ದಿನ ಕಾಂಗ್ರೆಸ್ ಒಡೆದು ಹೋದ ಮೇಲೆ ನಾನು ಇಲ್ಲಿಗೆ ಬಂದಿದ್ದೇನೆ. ಈ ವಿಚಾರ ಕೂಡ ಬೇಕಾಗುತ್ತವೆ, ಬಸವಣ್ಣನವರ ತತ್ವಕೂಡ ಹೇಳುತ್ತೇನೆ.

ಡಾ: ವೈ.ನಾಗಪ್ಪ: ಮಾನ್ಯ ಎಸ್.ಎಸ್.ಪಾಟೀಲ್‌ರವರು ಬಹಳ ಹಿರಿಯ ಸದಸ್ಯರು, ನೀವು ನಿಮ್ಮ ಭಾಷಣದಲ್ಲಿ ಬರೀ ಕಾಂಗ್ರೆಸ್‌ನ್ನು ಟೀಕೆ ಮಾಡಿಕೊಂಡು ಹೋಗುತ್ತಿದ್ದೀರಿ. ನೀವೇನು ಈ ಸಭೆಯಲ್ಲಿ ಬಸವಣ್ಣನವರ ತತ್ವವನ್ನು ಪ್ರತಿಪಾದನೆ ಮಾಡುತ್ತೀರಲ್ಲ ಅದಕ್ಕೆ ಅವರೇ ಹೇಳಿರುವ ಒಂದು ವಚನವನ್ನು ಇಲ್ಲಿ ಹೇಳಬಯಸುತ್ತೇನೆ.

''ಲೋಕದ ಡೊಂಕು ನೀವೇಕೆ ತಿದ್ದುವಿರಿ,
ನಿಮ್ಮ ನಿಮ್ಮ ತನವ ಸಂತೈಸಿಕೊಳ್ಳಿ,
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ,
ಪರಮನೆಯ ದುಃಖಕ್ಕೆ ಆಳುವವರ ಮೆಚ್ಚ
ಕೂಡಲ ಸಂಗಮದೇವಾ''

ಈ ಕೆಲಸ ತಾವು ಮೊದಲು ಮಾಡಿಕೊಳ್ಳಿ, ಮೊದಲು ನೀವು ಸುಧಾರಿಸಿಕೊಳ್ಳಿ, ನೀವು ಮೊದಲು ಸರಿಯಾಗಿದ್ದು ಬೇರೆಯವರನ್ನು ಸರಿ ಮಾಡಿರಿ.

ಶ್ರೀ ಎಸ್.ಎಸ್.ಪಾಟೀಲ್: ಮೊದಲು ನನ್ನನ್ನು ನಾನು ತಿದ್ದಿಕೊಳ್ಳಬೇಕು, ಇಲ್ಲವೆಂದು ನಾನು ಹೇಳುವುದಿಲ್ಲ. ನಾನು ಬದ್ಮಾಶ್ ಇದ್ದು, ಲಂಚ ಹೊಡೆದು, ಬೇರೆಯವರಿಗೆ ಲಂಚ ತಿನ್ನಬೇಡ ಎಂದು ಹೇಳಿದರೆ ನಡೆಯುವುದಿಲ್ಲ ಇದೇ ಮಾತನ್ನು ಬಸವಣ್ಣನವರು ಹೇಳಿದ್ದು. ಮೊದಲು ಹೇಳುವವನು ನಾನು ಶುದ್ಧ ಇರಬೇಕಾಗುತ್ತದೆ, ನಾನು ಮೊದಲು ಪರಿಶುದ್ಧ ಇದ್ದ ಮೇಲೆ ಬೇರೆಯವರಿಗೆ ಹೇಳಬೇಕು ಎಂದು ತಾವೇನು ಹೇಳಿದಿರಿ ಅದು ನಿಜವಾದ ಮಾತು. ಕಳೆದ 50 ವರ್ಷಗಳಿಂದ ಏನಾಗಿದೆ ಎಂದರೆ, ನಾವು ಕೇವಲ ಜನಗಳಿಗೆ ಹೇಳಿದ್ದೇವೆಯೇ ಹೊರತು ನಾವೇನು ಆಗಿದ್ದೇವೆ

ಎನ್ನುವುದನ್ನು ನೋಡಿಕೊಂಡಿಲ್ಲ ಇದಕ್ಕಾಗಿಯೇ ಈ ದೇಶದ ಸ್ಥಿತಿ ಇವತ್ತು ಈ ರೀತಿ ಇರುವುದು.

(ಈ ಹಂತದಲ್ಲಿ ಛೇರ್ಮನ್‌ರವರಾದ ಶ್ರೀ ಬಿ.ಆರ್. ಯಾವಗಲ್‌ರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇವರ ಆಯವ್ಯಯವನ್ನು ನೋಡಿದರೆ ಇವರು ಗ್ರಾಮೀಣಾಭಿವೃದ್ಧಿ ಮಾಡುತ್ತಾರೆ, ಇದು ಅಭಿವೃದ್ಧಿಯಾಗುತ್ತದೆ ಎನ್ನುವ ವಿಶ್ವಾಸ ನನಗಂತೂ ಇಲ್ಲ. ಆದರೂ ಕೂಡ ಅತ್ಯಂತ ಪ್ರಾಮಾಣಿಕವಾದ ಮಂತ್ರಿ ಇರುವುದರಿಂದ ಇದ್ದುದರಲ್ಲೇ ಇದನ್ನು ಅಭಿವೃದ್ಧಿ ಮಾಡುವುದಕ್ಕೆ ತಾವು ಶ್ರಮಿಸಬೇಕಾಗುತ್ತದೆ. ತಾವು ಇದನ್ನು ಬದಲಾವಣೆ ಮಾಡಬೇಕು. ನಿಮಗೆ ಇವತ್ತು ಮೆಜಾರಿಟಿ ಇದೆ. ಹೀಗಾಗಿ ತಾವು ಮಂಜೂರು ಮಾಡಿಸಿಕೊಂಡು ಇರಬಹುದು. ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ನಾವು ಹೇಳುವುದು ಹೇಳುತ್ತೇವೆ ನಿಮಗೆ ಮೆಜಾರಿಟಿ ಇರುವುದರಿಂದ ನಿಮಗೆ ತಿಳಿದಿದ್ದನ್ನೇ ತಾವು ಮಾಡುತ್ತೀರೆಂದು ಹೇಳಿ ಅವರು ಸುಮ್ಮನೆ ಕುಳಿತುಬಿಟ್ಟರು. ಏಕೆಂದರೆ, ಅವರು ಹೇಳುವ ಮಾತು ನಿಜ ಇದೆ, ಇವತ್ತು ನಿಮಗೆ ಮೆಜಾರಿಟಿ ಇರುವುದರಿಂದ ನೀವು ಮಂಜೂರು ಮಾಡಿಕೊಂಡು ಅಪ್ರೂವ್ ಮಾಡಿ ಕೊಳ್ಳುತ್ತೀರಿ ಮುಂದೆ ನೀವು ಏನಾಗುತ್ತೀರಿ ಎಂಬುದು ಕೂಡ ಅವರಿಗೆ ಗೊತ್ತಿದೆ. ನಾವು ನಿಮಗೆ ಹೇಳುವುದು ಒಂದು ರೀತಿ ಗುಡ್ಡಕ್ಕೆ ಕಲ್ಲು ಹೊತ್ತ ಹಾಗೆ ಆಗುತ್ತದೆ. ಆದರೆ, ಈಗಲಾದರೂ ಸಹಿತ, ತಮಗೇನಾದರೂ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವ ಬಗ್ಗೆ ಕಲ್ಪನೆ ಏನಾದರೂ ಇದ್ದರೆ, ಈ ಗ್ರಾಮೀಣಾಭಿವೃದ್ಧಿಗೆ ಒತ್ತು ಕೊಡಬೇಕು ಎನ್ನುವ ಉದ್ದೇಶ ಇದ್ದರೆ, ಕನಿಷ್ಟ ಬಜೆಟ್‌ನಲ್ಲಿ ಈ ಬಾಬಿಗೆ ಹೆಚ್ಚು ಹಣ ನೀಡಬೇಕಾಗುತ್ತದೆ. ಈಗ ಬಜೆಟ್‌ನಲ್ಲಿ ತಾವೇನು 300 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ ಅದನ್ನು ತೆಗೆದುಕೊಂಡು ಬನ್ನಿ ಹೇಗೆ ತರುತ್ತಿರೋ ಒಟ್ಟಿನಲ್ಲಿ ತೆಗೆದುಕೊಂಡು ಬನ್ನಿ. ಬೇಕಾದರೆ, ಇದನ್ನು ತರುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವುದಾದರೆ, ನಾನೀಗಾಗಲೇ ಕೊಟ್ಟಿರುವ ಸಲಹೆಯಂತೆ ಶ್ವೇತಪತ್ರದ ಮೇಲೆ ಚರ್ಚೆ ಮಾಡಿ ಮೂರುವರೆ ಸಾವಿರ ಕೋಟಿ ರೂಪಾಯಿ ನಾನು ಹೊಂದಿಸಿಕೊಡುತ್ತೇನೆ. ಆವತ್ತು ನಮ್ಮ ಸರ್ಕಾರ ಇದ್ದಾಗಲೂ ಕೂಡ ನಾನು ಇದೇ ಮಾತನ್ನು ಹೇಳಿದ್ದೇನೆ, ಇವತ್ತು ಕೂಡ ಇದೇ ಮಾತನ್ನೇ ಹೇಳುತ್ತೇನೆ. ಆಗ ಇದು ಆಗಿಲ್ಲ, ಆಗಲೇ ಏಕೆ ಇದನ್ನು ನೀವು ಮಾಡಲಿಲ್ಲವೆಂದು ಕೇಳಬಹುದು. ಇದು ಹೀಗೆ ಮಾತಿಗೆ ಮಾತು ಬರುತ್ತದೆ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಬಸವಣ್ಣನವರ ವಚನದಂತೆ ''ಲೋಕದ ಡೊಂಕು'' ಎನ್ನುವಂಥ ಸ್ಥಿತಿಗೆ ಬಂದಿದೆ. ಹೀಗಾಗಿ ಗ್ರಾಮೀಣಾಭಿವೃದ್ಧಿಯ ಬಗ್ಗೆ ಕಲ್ಪನೆಯನ್ನು ನಾವು ಇಟ್ಟುಕೊಳ್ಳಬೇಕಾಗುತ್ತದೆ. ಇನ್ನು ಕಾಯಿದೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊನ್ನೆ ಕೂಡ ತಾವೇನು ಕಾಯಿದೆ ಮಾಡಿದಿರಿ, ಇದಕ್ಕೆ ತಮಗೆ ಮೆಜಾರಿಟಿ ಇದೆ ತಾವು ಮಾಡಿಕೊಳ್ಳಿ, ಆದರೆ, ಹಿರಿಯ ಸದಸ್ಯರಾದ ಮಾನ್ಯ ಘೋರ್ಪಡೆಯವರು, ಮಾನ್ಯ ರಂಗನಾಥ್‌ರವರು

ಹಾಗೂ ಇನ್ನಿತರ ಹಿರಿಯ ಸದಸ್ಯರು ಇದ್ದಾಗ ಒಂದು ಪ್ರಾಮಾಣಿಕತೆಯಿಂದ ಕೂಡಿರತಕ್ಕಂಥ ಕಾಯಿದೆಗೆ ತಿದ್ದುಪಡಿ ತರುತ್ತಾರೆಂದು ನಾನು ಭಾವಿಸಿದ್ದೆ. ಅದೇನೆಂದರೆ, ಈ ಪಕ್ಷಾಂತರ ನಿಷೇಧ ಕಾಯಿದೆ. ಇದು ಬಹಳ ಅಪಾಯಕಾರಿ. ಮೊದಲು ಒಬ್ಬೊಬ್ಬರೂ ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಹೋಗುತ್ತಿದ್ದರು. ಈಗ ಅವರ ಜೊತೆಯಲ್ಲಿ ಗುಂಪು ಗುಂಪಾಗಿ ಕರೆದುಕೊಂಡು ಪಕ್ಷಾಂತರ ಮಾಡುತ್ತಿದ್ದಾರೆ, ಇದನ್ನು ನೋಡಿದರೆ ಎಂಥ ಪರಿಸ್ಥಿತಿ ಬಂದಿದೆ? ಎಷ್ಟು ಹದಗೆಟ್ಟು ಹೋಗಿದೆ ಎನ್ನತಕ್ಕಂಥದ್ದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ನಾವು ಎಲ್ಲರೂ ಇದನ್ನು ಅನುಭವಿಸುತ್ತೇವೆ, ಅದರಲ್ಲೂ ಕೂಡ ಆಡಳಿತ ಪಕ್ಷದವರು ಈ ಸಮಸ್ಯೆಯನ್ನು ಹೆಚ್ಚಾಗಿ ಅನುಭವಿಸುತ್ತಾರೆ. ಏಕೆಂದರೆ, ಯಾರಿಗಾದರೂ ಒಬ್ಬನಿಗೆ ಮೆಜಾರಿಟಿ ಇರುವಂಥವನು ತನ್ನ ಜೊತೆಗೆ ಇತರರನ್ನು ಕರೆದುಕೊಂಡು ಈ ಕಡೆಗೆ ಬಂದು ಬಿಡುತ್ತಾನೆ. ನನಗೆ ಬಹಳ ನೋವಾಗುತ್ತದೆ, ಮೊನ್ನೆ ಒಬ್ಬ ಮುದುಕ ಒಂದು ಹೇಳಿದ. ಬಹಳ ಕೆಟ್ಟ ಶಬ್ದದಲ್ಲಿ ಆ ಮಾತನ್ನು ಹೇಳಿದಾಗ ನನಗೆ ಬಹಳ ನೋವಾಯಿತು. ಯಾರೇ ಒಬ್ಬ ಸದಸ್ಯ ಒಂದು ಪಕ್ಷದಿಂದ ಗೆದ್ದ ನಂತರ ಮತ್ತೊಂದು ಪಕ್ಷಕ್ಕೆ ಪಕ್ಷಾಂತರ ಮಾಡಿದಾಗ ಆತನ ಸದಸ್ಯತ್ವ ರದ್ದಾಗಬೇಕು, ದಯಮಾಡಿ ನೀವು ಈ ಬಗ್ಗೆ ಕಾನೂನು ಮಾಡಿ. ಅವನಿಗೆ ಅಷ್ಟೊಂದು ಧೈರ್ಯ ಇದ್ದರೆ ಮತ್ತೊಂದು ಸಾರಿ ಗೆದ್ದು ಬರಲಿ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಅಧ್ಯಕ್ಷರೆ, ದಿವಂಗತ ಮಧುಲಿಮೆಯೆ ಅವರ ಹೆಸರು ಬಹುಶಃ ಕೇಳಿರಬಹುದು. 1972ರಲ್ಲಿ ಜನತಾ ಸರ್ಕಾರ ಕೇಂದ್ರದಲ್ಲಿ ಬಂದಾಗ ಡಿಫೆಕ್ಷನ್ ವಿಚಾರ ಬಂತು. ಶ್ರೀಯುತರು ಲೋಕಸಭೆಯಲ್ಲಿ ಮಾಡಿರುವ ಭಾಷಣವನ್ನು ತಾವು ಕೂಡ ಓದಿರಬಹುದು. ಕಾನ್‌ಸೆನ್ಸ್‌ಗೆ ವಿರುದ್ಧವಾಗಿ ಕಾನೂನು ಮಾಡುವುದು ಸರಿಯಲ್ಲವೆಂದು ಅವರು ತಮ್ಮ ವಿಚಾರಧಾರೆಯನ್ನು ಮುಂದಿಟ್ಟಿದ್ದಾರೆ. ಇದು ವಾದಗ್ರಸ್ತವಾಗಿರತಕ್ಕಂಥ ವಿಚಾರ. ನಾವೇನು ಈಗ ತತ್‌ಕ್ಷಣ ಯಾವುದೋ ಒಂದು ದೃಷ್ಟಿಯಿಂದ ಇದು ಸರಿಯಲ್ಲ ಹಾಗೆ, ಹೀಗೆ ಎಂದು ಹೇಳಿದರೆ ಅದು ಸರಿ ಕಾಣುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಸರಿಯಾಗುವುದಿಲ್ಲವೆಂದು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಸರಿಯಾಗುವುದಿಲ್ಲವೆಂದು ಎಲ್ಲರಿಗೂ ಗೊತ್ತಿದೆ, ಆದರೆ ಸರಿ ಮಾಡುವುದಕ್ಕೆ ಪ್ರಯತ್ನವಂತೂ ಮಾಡಬೇಕಲ್ಲವೆ?

ಶ್ರೀ ಕೆ.ಹೆಚ್.ರಂಗನಾಥ್: ಇದಕ್ಕೆಲ್ಲಾ ಆತ್ಮ ಸಂಯಮ ಬೇಕಾಗುತ್ತದೆ. ಕಾನೂನಿನಿಂದ ಇದನ್ನು ಸರಿ ಮಾಡುವಂಥದ್ದಲ್ಲ. ತಾವೇನು ಈಗ ಮೂಲಭೂತವಾದ ಪ್ರಶ್ನೆ ಹೇಳುತ್ತಿದ್ದೀರಿ ಅದನ್ನು ನಾವು ಒಪ್ಪುತ್ತೇವೆ. ಆದರೆ ಒಂದು ಪಕ್ಷಕ್ಕೆ ಸೇರುವಾಗ ಸೇರುವ ಪಕ್ಷದ ಸಿದ್ಧಾಂತ ಮುಂತಾದ ಅಂಶಗಳನ್ನು ಗಮನಿಸಿ ಅದಕ್ಕೆ ಅಂಟಿಕೊಂಡಿರುತ್ತಾರೆ. ಬದಲಾವಣೆ ಆಗಬೇಕು ಎನ್ನುವ ಉದ್ದೇಶದಿಂದ ಈ ರೀತಿ

ಆಗುತ್ತದೆ. ಉದಾಹರಣೆಗೆ ಹೇಳುವುದಾದರೆ ಚರ್ಚಿಲ್ ಎನ್ನುವವರು ಬರೀ ಕನ್ಸರ್ವೆಟೀವ್ ಪಾರ್ಟಿಯಲ್ಲಿಯೇ ಇರಲಿಲ್ಲ ಲಿಬರಲ್ ಪಾರ್ಟಿಯಲ್ಲೂ ಇದ್ದರು. ಈ ತರಹದ ಎಷ್ಟೋ ಉದಾಹರಣೆಗಳು ಪಾರ್ಲಿಮೆಂಟರಿ ಡೆಮಕ್ರಾಸಿಯ ಇತಿಹಾಸದಲ್ಲಿ ಸಿಗುತ್ತವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ತಾವು ಹೇಳಿದ ಹಾಗೆ ಡಿಫೆಕ್ಷನ್ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡೋಣ. ಮಾನ್ಯ ಮುಖ್ಯಮಂತ್ರಿಗಳು ಕೂಡ ಟೆನ್ತ್ ಷೆಡ್ಯೂಲ್ ಹಾಗೂ ಡಿಫೆಕ್ಷನ್ ಬಗ್ಗೆ ಚರ್ಚೆ ಮಾಡೋಣ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ, ಪಕ್ಷದಲ್ಲಿದ್ದುಕೊಂಡೇ ಬೇರೆ ಕಡೆಗೆ ವೋಟನ್ನು ಹಾಕತಕ್ಕಂಥದ್ದರ ಬಗ್ಗೆ ಇದು ಎಷ್ಟರಮಟ್ಟಿಗೆ ಸಮಂಜಸ ಎಂದು ತಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಪಕ್ಷ ಬಿಟ್ಟು ಪಕ್ಷ ಸೇರಿರುವುದಕ್ಕೆ ನಾವು ಪಕ್ಷಾಂತರ ಎಂದು ಅರ್ಥ ಮಾಡಿಕೊಳ್ಳಬಹುದು. ಪಕ್ಷದಲ್ಲಿದ್ದುಕೊಂಡು ಬೇರೆ ಕಡೆಗೆ ವೋಟು ಕೊಡತಕ್ಕಂಥದ್ದರ ಬಗ್ಗೆ ನಾವು ಇದಕ್ಕೆ ಏನು ವಿವರಣೆ ಕೊಡಬೇಕು?

ಶ್ರೀ ಕೆ.ಶ್ರೀನಿವಾಸ ಗೌಡ: ಅದು ಕಾನ್‌ಸೆನ್ಸ್ ಅಥವಾ ಅನ್‌ಕಾನ್‌ಸೆನ್ಸ್.

ಶ್ರೀ ಕೆ.ಹೆಚ್.ರಂಗನಾಥ್: ಇದಕ್ಕೆಲ್ಲಾ ಆತ್ಮ ಸಂಯಮ ಬೇಕಾಗುತ್ತದೆ.

6-30 ಪಿ.ಎಂ

ಹಾಗೆಯೆ ವಿಧಾನ ಸಭೆಗೆ ಬಂದಿರುವವರೆಲ್ಲರೂ ಮಹಾಮೇಧಾವಿಗಳೆಂದು ಪರಿಗಣಿಸಬೇಕಾಗಿಲ್ಲ. ಈ ಒಂದು ಕ್ಷೇತ್ರದಲ್ಲಿ ಸಾರ್ವಜನಿಕ ಕೆಲಸ ಮಾಡುವುದಕ್ಕೆ ನಾವೆಲ್ಲಾ ಬಂದಿದ್ದೇವೆ. ನಾವು ಹೇಗೆ ಇರಬೇಕೆಂಬುದನ್ನು ವಿಚಾರ ಮಾಡಿಕೊಳ್ಳಬೇಕಾಗುತ್ತದೆಯೇ ವಿನಃ ಅದನ್ನು ಹಿಡಿತದಲ್ಲಿಟ್ಟುಕೊಳ್ಳುತ್ತೇನೆಂಬುದು ಸರಿಯಲ್ಲ. ಮಾನ್ಯ ಸಿಂಧ್ಯಾರವರು ಹೇಳಿರುವುದು 100ಕ್ಕೆ 100ರಷ್ಟು ಸತ್ಯ. ಆದರೆ ಅದು ಆಗಬಾರದು. ಒಂದು ವೇಳೆ ಇದು ಆದರೆ ಪ್ರಜಾಪ್ರಭುತ್ವ ಅಭದ್ರವಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ಪಕ್ಷಕ್ಕೆ 18 ಓಟುಗಳು ಇರುವುದರಿಂದ ನಾವು ರಾಜ್ಯಸಭೆಯಲ್ಲಿ ಗೆಲ್ಲುವುದಕ್ಕೆ ಆಗುವುದಿಲ್ಲ. ಹಾಗೆಯೆ ಇನ್ನ್ಯಾವುದೊ ಎಕ್ಸ್, ವೈ, ಝಡ್ ಪಕ್ಷಕ್ಕೆ 36 ಸೀಟ್ ಇರುತ್ತದೆ. ಇಂಥವರು ಕೂಡ ಸಹ ರಾಜ್ಯಸಭಾ ಚುನಾವಣೆಗೆ ನಿಲ್ಲಬಾರದು. 36 ಸೀಟ್ ಇದ್ದುಕೊಂಡು ರಾಜ್ಯಸಭಾ ಚುನಾವಣೆಗೆ ನಿಂತುಕೊಂಡು ಬೇರೆಯವರ ಓಟುಗಳನ್ನು ತೆಗೆದುಕೊಂಡು ಗೆದ್ದು ಹೋಗತಕ್ಕಂಥವರು ಅಥವಾ 32 ಸೀಟ್ ಇಟ್ಟುಕೊಂಡು ರಾಜ್ಯಸಭಾ ಚುನಾವಣೆಯಲ್ಲಿ ಗೆದ್ದು ಹೋಗತಕ್ಕಂಥವರು ಬೇರೆಯವರಿಗೆ ತತ್ವ ಹೇಳುತ್ತಿದ್ದೀರಿ. ಇದನ್ನು ಮಂಡಲ್ ಪಂಚಾಯಿತಿಯವರು ಹೇಗೆ ತೆಗೆದುಕೊಳ್ಳುತ್ತಾರೆ?

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಮಂತ್ರಿಗಳು ಕಾನ್‌ಸೆನ್ಸ್ ಬಗ್ಗೆ ಹೇಳುವಾಗ ಅವರ ಮನಸ್ಸಿಗೆ ಒಪ್ಪುವ ರೀತಿಯಲ್ಲಿ ಕೆಲವು ವಿಚಾರಗಳನ್ನು ಇಟ್ಟುಕೊಂಡು ಪಕ್ಷಾಂತರ ಮಾಡಿಕೊಳ್ಳುತ್ತಾರೆಂದು ಹೇಳಿದರು. ಆದರೆ ಮತದಾರ ಯಾವುದೊಂದು ನಿರ್ದಿಷ್ಟ ವಿಚಾರದ ಕಡೆ ಅಥವಾ ನಿರ್ದಿಷ್ಟ ರಾಜಕಾರಣದ ಕಡೆ ಮನಸ್ಸಿದ್ದು ಮತ ಕೊಟ್ಟು ಚುನಾಯಿಸಿರುತ್ತಾನೆ. ಆ ಎಲ್ಲಾ ಮತಗಳನ್ನು ಪಡೆದುಕೊಂಡ ವ್ಯಕ್ತಿ ಕೇವಲ ಅವನ ಮನಸ್ಸಿಗೆ ಇಂಥ ಒಂದು ರಾಜಕೀಯ ಪಕ್ಷ ಸರಿ ಇದೆ ಎಂದು ಪಕ್ಷಾಂತರ ಮಾಡುವುದು ಎಷ್ಟರಮಟ್ಟಿಗೆ ಸಮಂಜಸವಾಗಿರುತ್ತದೆ? ಇಲ್ಲಿ ಮತದಾರರನ್ನು ಕಡೆಗಣಿಸಿದಂತಾಗುತ್ತದೆ.

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ ಸಚಿವರು): ಇದು ಒಂದು ನಿಮಿಷ ಅಥವಾ ಎರಡು ನಿಮಿಷದಲ್ಲಿ ವಿಚಾರ ಮಾಡತಕ್ಕಂಥ ವಿಚಾರವಲ್ಲ. ಇದು ಬಹಳ ದೊಡ್ಡ ವಿಚಾರ. ಇವತ್ತಿನ ದಿವಸ ನನ್ನ ಮತ್ತು ನಿಮ್ಮ ಹಾಗೂ ಮಾನ್ಯ ಸಿಂಧ್ಯಾರವರ ಅಭಿಪ್ರಾಯ ಬೇರೆ ಇರುತ್ತದೆ. ಆದ್ದರಿಂದ ಒಂದು ಘಳಿಗೆಯಲ್ಲಿ ಇದಕ್ಕೆ ಪರಿಹಾರ ಕಂಡುಹಿಡಿಯುವುದಕ್ಕೆ ಆಗುವುದಿಲ್ಲ. ಸರ್ವರೋಗ ನಿವಾರಣೆ ಎನ್ನತಕ್ಕಂಥ ರೀತಿಯಲ್ಲಿಯೂ ಕೂಡ ಇದನ್ನು ಹೇಳುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂಥ ವಿಚಾರವಾಗಿದೆ. ಆದರೆ ಇದು ಈಗ ಆಗುತ್ತಿದೆ. ಈಗ ಸಾಕಷ್ಟು ಪ್ರಮಾಣದಲ್ಲಿ ನಮ್ಮ ಚರಿತ್ರೆಯನ್ನು ನೋಡಿದಾಗ ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ನಾವು ಕೆಲಸ ಮಾಡಿಲ್ಲವೆಂದು ಹೇಳಿದರೆ ಮಾನ್ಯ ಸದಸ್ಯರ್‍ಯಾರು ತಪ್ಪು ತಿಳಿದುಕೊಳ್ಳಬಾರದು. ಈಗ ರಾಜ್ಯಾಂಗದಲ್ಲಿ ಸದಸ್ಯನಲ್ಲದೇ ಇರುವವನು ಮಂತ್ರಿಯಾಗಬಹುದೆಂದು ಇದೆ. 1952ರಲ್ಲಿ ಮೊದಲನೇ ಸಾರಿ ರಾಜ್ಯಾಂಗವನ್ನು ತರಲಾಯಿತು ಹಾಗೆಯೇ ಮೊದಲನೆ ಚುನಾವಣೆ ಕೂಡ ನಡೆಯಿತು. ದಿವಂಗತ ಮೊರಾರ್ಜಿದೇಸಾಯಿಯವರು ಬುಲ್ಸರ್ ಕ್ಷೇತ್ರದಲ್ಲಿ ಸೋತು ಹೋದರು. ಒಬ್ಬ ಸೋಷಿಯಲಿಸ್ಟ್ ಜಂಟಲ್ ಮ್ಯಾನ್ ಮುಂದೆ ಇವರು ಚುನಾವಣೆಯಲ್ಲಿ ಸೋತರು. ನೆಹರುರವರು ಇವರಿಗೆ ನೀವು ಮುಖ್ಯಮಂತ್ರಿಗಳು ಆಗಲೇ ಬೇಕೆಂದು ಹೇಳಿದಾಗ ಇವರು ಒಪ್ಪಿಕೊಂಡರು. ಈ ರೀತಿಯ ಅವಕಾಶ ಕಾನೂನಿನಲ್ಲಿರುವುದರಿಂದ ಮುಖ್ಯಮಂತ್ರಿಗಳಾಗಲು ಒಪ್ಪಿಕೊಂಡರು. ದಿವಂಗತ ರಾಜ್‌ಗೋಪಾಲ್‌ಚಾರಿಯವರು ಗೌರ್ನರ್ ಜನರಲ್ ಆಗಿದ್ದರು. ಆ ಸಂದರ್ಭದಲ್ಲಿ ತಮಿಳುನಾಡಿನಲ್ಲಿ ಪರಿಸ್ಥಿತಿ ತುಂಬಾ ಹದಗೆಟ್ಟಿದೆ ಆದ್ದರಿಂದ ತಮಿಳುನಾಡಿನ ಮುಖ್ಯಮಂತ್ರಿಗಳಾಗಬೇಕೆಂದು ಹೇಳಿದಾಗ ಅವರು ಅಲ್ಲಿಂದ ಇಲ್ಲಿಗೆ ಬಂದರು. ನಾವು ಒಂದೊಂದೇ ಇಟ್ಟಿಗೆಯನ್ನು ಇಟ್ಟು ಪ್ರಜಾಪ್ರಭುತ್ವವನ್ನು ಭದ್ರ ಮಾಡುವುದನ್ನು ಬಿಟ್ಟು ಒಂದೊಂದೇ ಇಟ್ಟಿಗೆಯನ್ನು ತೆಗೆದು ಅದನ್ನು ಅಭದ್ರ ಮಾಡಿದ್ದೇವೆ. ಪ್ರಜಾಪ್ರಭುತ್ವದ ಬೆಳವಣಿಗೆಯಲ್ಲಿ, ಚರಿತ್ರೆಯಲ್ಲಿ ಇದು ಆಗತಕ್ಕಂಥ, ಬರತಕ್ಕಂಥ ಒಂದು ಪರಿಸ್ಥಿತಿಯಾಗಿದೆ. ಇದು ಕೇವಲ ನಮ್ಮ ದೇಶದಲ್ಲಿಯೇ ಅಲ್ಲ, ಬೇರೆ ಬೇರೆ ದೇಶದಲ್ಲಿಯೂ ಇದು ಇದೆ. ಆದ್ದರಿಂದ ಇದು

ಸಣ್ಣ ವಿಚಾರ ಅಲ್ಲ, ಇದೊಂದು ದೊಡ್ಡ ವಿಚಾರವಾಗಿದೆ. ನಾವು ಒಂದೊಂದು ಸಾರಿ ಬಹಳ ಸುಲಭವಾಗಿ ಮಾತನಾಡಬಹುದು. ಮಾನ್ಯ ಸಿಂಧ್ಯಾರವರು ಈಗಾಗಲೇ ಹೇಳಿರುವಂತೆ, ಪಕ್ಷದಲ್ಲಿದ್ದುಕೊಂಡು ಆಘಾತಮಾಡತಕ್ಕಂಥದ್ದು ಅಕ್ಷಮ್ಯ ಅಪರಾಧ, ಅದು ಆಗಲೇಬಾರದು. ಅದು ಒಂದು ವೇಳೆ ಆದರೆ ಪ್ರಜಾಪ್ರಭುತ್ವ ಭದ್ರವಾಗುವುದಿಲ್ಲ.

ಶ್ರೀ ಕೆ.ಶ್ರೀನಿವಾಸಗೌಡ: ಶ್ರೀಮತಿ ಇಂದಿರಾಗಾಂಧಿಯವರು ಇದರ ಮೊದಲನೇ ಪುಟವನ್ನು ತೆಗೆದರು. ಒಂದು ಪಕ್ಷದಲ್ಲಿದ್ದುಕೊಂಡು ಬೇರೆ ಪಕ್ಷಕ್ಕೆ ಓಟು ಹಾಕುವುದು ಅಪರಾಧವೆಂದು ತಾವೇ ಒಪ್ಪಿಕೊಂಡಿದ್ದೀರಿ. ಇದಕ್ಕೆ ಮೊದಲನೆಯದಾಗಿ ನಿಮ್ಮ ಪಕ್ಷದ ನಾಯಕಿಯವರೇ ಪ್ರಚೋದನೆ ಕೊಟ್ಟರು. ಇದನ್ನು ಕೂಡ ತಾವು ಅರ್ಥ ಮಾಡಿಕೊಳ್ಳಬೇಕು. ಪ್ರಜ್ಞಾಪ್ರಭುತ್ವದ ಇಟ್ಟಿಗೆಯನ್ನು ಒಂದೊಂದಾಗಿ ಇಳಿಸುತ್ತಿದ್ದೇವೆಂದು ಹೇಳಿದ್ದೀರಿ. ಆದರೆ ಇದು ಮೊದಲು ಎಲ್ಲಿಂದ ಆರಂಭವಾಯಿತು ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗಿದೆ.

ಡಾ: ವೈ.ನಾಗಪ್ಪ: ವಿರೋಧಪಕ್ಷದವರು ಕೇವಲ ಸಿದ್ಧಾಂತಗಳನ್ನು ಹೇಳುತ್ತಿದ್ದೀರಷ್ಟೆ. ಮಾನ್ಯ ಸದಾನಂದಗೌಡರು ಸಿದ್ಧಾಂತದ ಬಗ್ಗೆ ಮಾನ್ಯ ಹಿರಿಯ ಸಚಿವರಾದಂಥ ಮಾನ್ಯ ರಂಗನಾಥ್‌ರವರಿಗೆ ಒಂದು ಪ್ರಶ್ನೆಯನ್ನು ಕೇಳಿದರು. ಇವತ್ತಿನ ದಿವಸ ರಾಜಕೀಯತತ್ವಗಳು ಮತ್ತು ಸಿದ್ಧಾಂತಗಳೇ ಬೇರೆ ಇರುತ್ತವೆ. ಕೇಂದ್ರದಲ್ಲಿ ನೀವು 18 ಪಕ್ಷಗಳು ಸೇರಿಕೊಂಡು ಕಾಂಗ್ರೆಸ್‌ನ್ನು ಸೋಲಿಸಬೇಕೆಂದು ರಾಜ್ಯಭಾರ ಮಾಡಿದ್ದೀರಿ. ಆದ್ದರಿಂದ ಇದನ್ನು ಯಾವ ಸಿದ್ಧಾಂತಗಳ ಮೇಲೆ ಮಾಡಿದ್ದೀರಿ? ಇದಕ್ಕೆ ಯಾರು ಉತ್ತರ ಕೊಡುತ್ತಾರೆ?

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್: ಡಾ:ನಾಗಪ್ಪನವರಿಗೆ ಒಂದೇ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ. ಏನೆಂದರೆ, ಕೇಂದ್ರದಲ್ಲಿ ಚುನಾವಣೆಗಿಂತ ಮುಂಚಿತವಾಗಿ ನಾವೆಲ್ಲರೂ ಒಟ್ಟಿಗೆ ಸೇರಿಕೊಂಡು ನ್ಯಾಷನಲ್ ಅಜೆಂಡವನ್ನು ಮಾಡಿದ್ದೆವು. ಆದರೆ ನಿಮ್ಮ ಅಜೆಂಡಾ ಬಿಹಾರದಲ್ಲಿ ಏನಾಯಿತು?

ಡಾ: ವೈ.ನಾಗಪ್ಪ: ನಿಮ್ಮಂತವರ ಸ್ನೇಹ ಮಾಡಿಯೆ ಈ ರೀತಿಯಾಗಿದೆ.

ಶ್ರೀ ಎಸ್.ಸುರೇಶ್‌ಕುಮಾರ್: ನಮ್ಮ ಜೊತೆ ನಿಮ್ಮ ಸ್ನೇಹ ದಯವಿಟ್ಟು ಬೇಡ.

ಡಾ: ವೈ.ನಾಗಪ್ಪ: ಇದೊಂದು ವೈರಸ್ ಡಿಸೀಸ್ ಇದ್ದ ಹಾಗೆ.

ಶ್ರೀ ಬಿ.ರಮಾನಾಥ್‌ರೈ (ಮೀನುಗಾರಿಕೆ, ಬಂದರು ಸಚಿವರು): ಜಾತ್ಯಾತೀತ

ಸಿದ್ಧಾಂತದ ಬಗ್ಗೆ ಎತ್ತರದ ಮಾತುಗಳನ್ನು ಹೇಳಿದವರೆಲ್ಲ ಇವತ್ತಿನದಿವಸ ನಿಮ್ಮ ಜೊತೆಗೆ ಸೇರಿಕೊಂಡಿದ್ದಾರೆ. ಆದರೆ ನೀವು ಅವರ ಜೊತೆ ಸೇರಿಕೊಂಡಿದ್ದೀರಿ. ಹೀಗೆ ಸಮಾನ ಮನಸ್ಕರೆಲ್ಲರೂ ನಿಮ್ಮ ಜೊತೆ ಇದ್ದಾರೆ.

ಶ್ರೀ ಎನ್.ಯೋಗಿಶ್‌ಭಟ್: ಸಮಾನ ಮನಸ್ಕರು ಎಂದು ಹೇಳುವುದರ ಬದಲು ಸಮಾನ ವ್ಯಸನಸ್ಥರು ಎಂದು ಹೇಳಿದರೆ ಅದಕ್ಕೆ ಒಂದು ಅರ್ಥವಿರುತ್ತದೆ.

ಶ್ರೀ ಸಿ.ಬೈರೇಗೌಡ: ಇನ್ನು ಕೆಲವೇ ದಿನಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಏನು ನಡೆಯುತ್ತದೆ ಎನ್ನತಕ್ಕಂಥದನ್ನು ಎಲ್ಲರೂ ನೋಡುತ್ತಾರೆ. ಈ ಥಿಯರಿಗಳು, ತತ್ವಗಳು ಹಾಗೂ ಸಿದ್ಧಾಂತಗಳೆಲ್ಲಕ್ಕೂ ಕೂಡ ಅಲ್ಲಿ ಎಷ್ಟರಮಟ್ಟಿಗೆ ಬೆಲೆ ಇರುತ್ತದೆ ಎನ್ನತಕ್ಕಂಥದ್ದನ್ನು ಎಲ್ಲರೂ ಕಾದು ನೋಡೋಣ.

ಶ್ರೀ ಬಿ.ರಮಾನಾಥ್‌ರೈ: ಈಗಿರತಕ್ಕಂಥ ವರ್ತಮಾನ ವಿಚಾರಕ್ಕೆ ಮಾತ್ರ ನಾವೆಲ್ಲರೂ ಸೀಮಿತರಾಗೋಣ.

ಶ್ರೀ ಎಸ್.ಎಸ್.ಪಾಟೀಲ್(ಮುಂಡರಗಿ): ನನ್ನ ಆತ್ಮೀಯರಾದಂಥ ಮಾನ್ಯ ರಂಗನಾಥ್‌ರವರಿಗೆ ಕೆಲವು ವಿಷಯಗಳನ್ನು ಹೇಳುವಾಗ ಮಾನ್ಯ ಘೋರ್ಪಡೆಯವರು ಇರಲಿಲ್ಲ. ಆದ್ದರಿಂದ ತಾವು ಈಗ ಇರತಕ್ಕಂತ ಪಕ್ಷಾಂತರ ಕಾಯಿದೆಯನ್ನು ತಿದ್ದುಪಡಿ ಮಾಡುವುದಕ್ಕೆ ಧೈರ್ಯ ಮಾಡಬೇಕು. ಪಕ್ಷಾಂತರ ಮಾಡಿದರೆ ಆತನ ಸದಸ್ಯತ್ವವೇ ಹೋಗುವಂತೆ ಮಾಡಬೇಕು. ಆಗ ಒಳ್ಳೆಯ ಸಂಪ್ರದಾಯವನ್ನು ತಾವು ಹಾಕಿಕೊಟ್ಟಂತೆ ಆಗುತ್ತದೆ. ಆನಂತರ ಇದು ಕೇಂದ್ರಕ್ಕೂ ಮಾದರಿಯಾಗುತ್ತದೆ. ಸದಸ್ಯತ್ವದಿಂದ ತೆಗೆದರೆ ಆತ ಮತ್ತೆ ಚುನಾವಣೆಗೆ ನಿಂತು ಗೆದ್ದು ಬರಬೇಕು. ಆದ್ದರಿಂದ ದಯವಿಟ್ಟು ಈ ಒಂದು ಕಾಯಿದೆಯನ್ನು ತರಬೇಕು. ಇದಕ್ಕೆ ನಾವೆಲ್ಲರೂ ಸ್ವಾಗತ ಮಾಡುತ್ತೇವೆ.

ಡಾ: ವೈ.ನಾಗಪ್ಪ: 1987ರಲ್ಲಿ ತಾವು ಮಾಡಿರುವ ಕಾಯಿದೆ ಹಾಗೆಯೇ ಇದೆ. ಮತ್ತೆ ಹೊಸದಾಗಿ ಮಾಡಬೇಕಾಗಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಆಗಾಗ ಅದನ್ನು ಸ್ವಲ್ಪ ಬದಲಾವಣೆ ಮಾಡಬೇಕಾಗುತ್ತದೆ. ನೀವು ಮಾಡುವುದಾದರೆ ಮಾಡಿ ಅಥವಾ ಬಿಡಿ. ನಾವು ಹೇಳುವುದು ಹೇಳುತ್ತೇವೆ. ನಮ್ಮಲ್ಲಿ ಆಡಳಿತ ಪಕ್ಷದಲ್ಲಿದ್ದಾಗ ಮಾತನಾಡುವುದೇ ಬೇರೆ ಮತ್ತು ವಿರೋಧಪಕ್ಷದ ಕಡೆ ಇರುವಾಗ ಮಾತನಾಡುವುದೇ ಬೇರೆ, ಇದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಹಿಂದೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಎಚ್.ಕೆ.ಪಾಟೀಲ್‌ರವರು ನಮ್ಮನ್ನು ಬಹಳ ಬೈದಿದ್ದಾರೆ. ಈಗಲೂ ಕೂಡ ಅತ್ತ ಕಡೆ ಹೋಗಿ ಇದನ್ನೇ ಮಾಡುತ್ತಿದ್ದೀರಿ. ಆದರೆ ಮಾನ್ಯ ಘೋರ್ಪಡೆಯವರು ಏನು ಮಾಡುವುದಕ್ಕಾಗುವುದಿಲ್ಲ.

ಹೋದಸಲ ಅವರು ಮಾದರಿಯಾಗಿ ಒಳ್ಳೆಯ ಹೆಸರನ್ನು ಹಾಗೆ ಉಳಿಸಿಕೊಂಡಿದ್ದರು. ಈ ಸಲ ನಿಮ್ಮ ಅಂಜಿಕೆಗೆ ಅವರು ಸುಮ್ಮನಾದರು, ರಾಜೀನಾಮೆ ಕೊಡುವುದಕ್ಕೆ ಹೋಗಲಿಲ್ಲ. ರಾಜೀನಾಮೆ ಕೊಟ್ಟರೆ ಪಕ್ಷಕ್ಕೆ ಕೆಟ್ಟ ಹೆಸರು ಬರುತ್ತದೆಂದು ಮತ್ತು ಸರ್ಕಾರ ಬಿದ್ದು ಹೋಗುತ್ತದೆಂದು ರಾಜೀನಾಮೆ ಕೊಡದೇ ಬಹಳ ನೋವಿನಿಂದ ಸುಮ್ಮನಾದರು. ''ಹೊಗಳಿ ಹೊಗಳಿ ಹೊನ್ನ ಶೂಲಕ್ಕೆ ಏರಿಸಬೇಡವಯ್ಯ'' ಎನ್ನುವ ಹಾಗೆ ಇಲ್ಲದನ್ನು ಹೇಳುವುದೇ ಹೊಗಳಿಕೆ. ಯಾರಾದರೊಬ್ಬ ಮನುಷ್ಯ ಮೊದಲು ಬಂದಾಗ ಈಗ ಬಹಳ ದೊಡ್ಡ ಮನುಷ್ಯ ಎಂದು ಹೇಳುತ್ತೇವೆ. ಆದರೆ ಈತ ಬಲು ಮೋಸಗಾರ ಎಂದು ಮನಸ್ಸಿನಲ್ಲಿರುತ್ತದೆ ಆದರೂ ಕೂಡ ಈ ರೀತಿ ಹೊಗಳುವುದಿಲ್ಲ. ಇಲ್ಲದ್ದನ್ನು ಹೇಳಿದರೆ ಹೊಗಳಿಕೆಯಾಗುತ್ತದೆ. ಆದರೆ, ಇದ್ದುದನ್ನು ಇದ್ದ ಹಾಗೆ ಹೇಳುವುದು ಹೊಗಳಿಕೆಯಾಗುವುದಿಲ್ಲ. ಇದ್ದುದನ್ನು ಇದ್ದ ಹಾಗೆ ಹೇಳಿದರೆ ಹೊಗಳಿಕೆಯಾಗುವುದಿಲ್ಲವೆಂದು ಪೂಜ್ಯ ಬಸವಣ್ಣನವರು ಸಹ ಹೇಳಿದ್ದಾರೆ. ಈಗ ರಂಗನಾಥ್ ಬಗ್ಗೆ ಹೇಳುವುದಕ್ಕೆ ಆಗುತ್ತದೆಯೇ? ಅವರ ಎದುರಿಗೆ ನಿಂತುಕೊಂಡು ಹೊಗಳುವುದಕ್ಕಾಗುವುದಿಲ್ಲ. ಈ ಮಾತು ಈಗ ಬೇಡ. ಮಾನ್ಯ ಸಚಿವರಾದಂಥ ಕೃಷ್ಣಪ್ಪನವರು ಒಳ್ಳೆಯ ಉತ್ತರವನ್ನು ಕೊಡುತ್ತಾರೆಂದು ಮೊನ್ನೆದಿವಸ ಅವರು ಮಾತನಾಡಿದಾಗ ನಾನು ಹೇಳಿದೆ. ಈ ರೀತಿ ಅಭ್ಯಾಸ ಮಾಡಿಕೊಂಡು ಬಂದು ಉತ್ತರ ಕೊಡಬೇಕು. ಕೆಲವು ಮಂತ್ರಿಗಳ ಬಗ್ಗೆ ಒಳ್ಳೆಯದನ್ನು ಹೇಳಬೇಕಾಗುತ್ತದೆ ಮತ್ತು ಸರಿಯಾದ ಉತ್ತರ ಕೊಡದೇ ಇದ್ದರೆ ಸರಿ ಇಲ್ಲವೆಂದು ನಾವು ಇಲ್ಲಿ ನಿಂತುಕೊಂಡು ಹೇಳಬೇಕಾಗುತ್ತದೆ. ಸನ್ಮಾನ್ಯ ಶಿವಪ್ಪನವರು ಹಿರಿಯ ಸದಸ್ಯರು, ಮೊನ್ನೆದಿವಸ ಯಾರೊಬ್ಬರು ಮಂತ್ರಿ ಬಂದಾಗ ಆ ಮಂತ್ರಿ ಯಾರು ಎಂದು ಮಾನ್ಯ ಶಿವಪ್ಪನವರು ನನ್ನನ್ನು ಕೇಳುತ್ತಾರೆ ಈಗಾಗಲೇ ನೀವು ಬಂದು ಆರು ತಿಂಗಳಾಗಿದೆ. ನಾವು ಎಷ್ಟರ ಮಟ್ಟಿಗೆ ಇಲ್ಲಿಗೆ ಬರುತ್ತೇವೆಂದು ಇದರಿಂದ ನೀವೇ ತಿಳಿದುಕೊಳ್ಳಬಹುದು. ನಾನು ದಿನ ಇಲ್ಲಿ ಕುಳಿತಿದ್ದರೂ ಸಹ ಮಾನ್ಯ ಶಿವಪ್ಪನವರು ಆ ಮಂತ್ರಿ ಯಾರೆಂದು ಕೇಳಿದಾಗ ನನಗೆ ಗೊತ್ತಿಲ್ಲದೇ ತಿಳಿದುಕೊಂಡು ಹೇಳುತ್ತೇನೆಂದು ಹೇಳಿದೆ. ನಿಮ್ಮಲ್ಲಿ ಇಂಥ ಮಂತ್ರಿಗಳು ಇದ್ದೀರಿ ಏನು ಮಾಡುವುದು? ಆದ್ದರಿಂದಲೇ ಕೇವಲ 27 ಮಂತ್ರಿಗಳನ್ನು ಮಾತ್ರ ಉಳಿಸಿಕೊಳ್ಳಿ ಎಂದು ಹೇಳಿದ್ದೇನೆ. ಮೊದಲು ನಿಮ್ಮಲ್ಲಿ ಕಠಿಣ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಈ ವಿಷಯವನ್ನು ಚರ್ಚೆಗೆ ಬಂದಾಗ ಮಾತನಾಡುತ್ತೇನೆ. ಕಠಿಣ ನಿರ್ಧಾರ ಎಂದರೆ ಯಾವುದು? ಸಿಂಗಾಪುರ ಮಾಡುತ್ತೇವೆಂದು ಹೇಳುತ್ತೀರಲ್ಲ. ಮೊದಲು ಸಿಂಗಾಪುರದಲ್ಲಿ ಏನು ಮಾಡಿದ್ದಾರೆಂಬುದನ್ನು ಹೋಗಿ ನೋಡಬೇಕು. ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು 20 ಪರ್ಸೆಂಟ್‌ನಷ್ಟು ಸದಸ್ಯರ ಭತ್ಯೆಯನ್ನು ಕಡಿತ ಮಾಡುವುದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದರು. ನಮ್ಮ ಭತ್ಯೆಯಲ್ಲಿ 20 ಪರ್ಸೆಂಟ್ ಕಟ್ ಮಾಡುವುದಕ್ಕೆ ಎಲ್ಲರೂ ಸರ್ವಾನುಮತದಿಂದ ಒಪ್ಪಿಗೆ ಸೂಚಿಸೋಣ. ಇದಕ್ಕೆ ನೀವು ಒಪ್ಪುತ್ತೀರಾ? ಸರಿ ಹಾಗಾದರೆ ಇದಕ್ಕೊಂದು ಖಾಸಗಿ ಗೊತ್ತುವಳಿಯನ್ನು ತೆಗೆದುಕೊಂಡು ಬನ್ನಿ. ನಮ್ಮ

ಭತ್ಯೆಯಲ್ಲಿ 20 ಪರ್ಸೆಂಟ್‌ನಷ್ಟು ಕಡಿತವಾಗಲಿ, ಇದು ಮೊದಲು ನಮ್ಮಿಂದಲೇ ಪ್ರಾರಂಭವಾಗಲಿ. ಆಂದರೆ ಈ ರಾಜ್ಯ, ದೇಶ ಉಳಿಯುತ್ತದೆ. ಇಲ್ಲದಿದ್ದರೆ ಮುಂದಿನ ಪೀಳಿಗೆ ನಮ್ಮನ್ನು ಶಪಿಸುತ್ತಾರೆ. ಎಷ್ಟು ಸಾಲವನ್ನು ಹುಟ್ಟಿಸುತ್ತೀರಿ, ನೀವು ಹಣವನ್ನು ಎಲ್ಲಿಂದ ತರುತ್ತೀರಿ? ಎಲ್ಲಾ ಹಣ ಬಡ್ಡಿಗೆ ಹೋಗುತ್ತದೆ. ಆ ನೀರು ಕೊಡು ಈ ನೀರು ಎಂದರೆ ಕೊಡು ಎಲ್ಲಿಂದು ಕೊಡುತ್ತೀರಿ? ಎಲ್ಲಾ ನೌಕರದಾರರಿಗೆ ಸಂಬಳವನ್ನು ಕೊಟ್ಟು ಹೋಗುವುದು ಬಂದಿರುತ್ತದೆ.

ಶ್ರೀ ವೈ.ನಾಗಪ್ಪ: ಮಾನ್ಯ ಎಸ್.ಎಸ್.ಪಾಟೀಲ್‌ರವರೆ, ನೀವು ಹೇಳುವ ದಾಟಿಯನ್ನು ನೋಡಿದರೆ, ನಿಮ್ಮದು ಒಂದು ವಿಧಾನಸೌಧದ ಮುಂದೆ ಸ್ಟ್ಯಾಚು ಇರಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿರಬೇಕು.

ಶ್ರೀ ಎಸ್.ಎಸ್.ಪಾಟೀಲ್: ನನಗೆ ಆ ಒಂದು ಆಸೆ ಇರುವುದಿಲ್ಲ, ರಾಜ್ಯದ ಪರಿಸ್ಥಿತಿಯನ್ನು ಕಂಡುಕೊಂಡರೆ ಅದರ ಬಗ್ಗೆ ನಿಮಗೆ ತಿಳಿಯುತ್ತದೆ. ನಿಮ್ಮ 5 ವರ್ಷದ ಅಧಿಕಾರದಲ್ಲಿ ನೌಕರದಾರರಿಗೆ ನೀವು ಪಗಾರ ಇಲ್ಲದಂತೆ ಮಾಡಿಹೋಗುತ್ತೀರಿ. ಅದಕ್ಕೆ ನಾನೂ ಸಂಬಂಧಿಕನಾಗಿರುತ್ತೇನೆ. ಯಾರು ಎಂದು ಅಲ್ಲ, ಅಂತಹ ಸ್ಥಿತಿ ಬಂದಿದೆ. ಆ ಸರ್ಕಾರ ಈ ಸರ್ಕಾರ ಎಂದು ನಾನು ಅನ್ನುವುದಿಲ್ಲ. ನಾವು 10- 12 ಸಾವಿರ ಕೋಟಿ ಹುಟ್ಟಿಸಿದ್ದೇವೆ ನೀವು ಒಂದು 20 ಕೋಟಿ ಹುಟ್ಟಿಸುವುದಕ್ಕೆ ಹೋಗುತ್ತಿದ್ದೀರಿ. ಟೋಟಲ್ 28 ಸಾವಿರ ಕೋಟಿ ರೂಪಾಯಿಗಳು ಆಗಿದೆ, ಒಟ್ಟು 48 ಸಾವಿರ ಕೋಟಿ ರೂಪಾಯಿಗಳು ಆಗುತ್ತದೆ. ಎಲ್ಲಿಂದ ಆ ಹಣವನ್ನು ಕೊಡುತ್ತೀರಿ, ನೌಕರದಾರರಿಗೆ ಪಗಾರ ಇಲ್ಲದಂತಾಗಿ ಹೋಗುತ್ತೇವೆ. ಅದು ಇವತ್ತಿನ ರಾಜ್ಯದ ಸ್ಥಿತಿ, ಆ ಕಾರಣದಿಂದ ಹೇಳುತ್ತಿದ್ದೇನೆ. ಇಲ್ಲಿ ಖಾಯಂ ಕುರ್ಚಿ ಹಿಡಿದುಕೊಂಡು ಕೂಡಬೇಕೆಂದು ನನಗೇನು ಇಲ್ಲ. ಇನ್ನು ನಮ್ಮ ಗಣಿ ಮತ್ತು ಭೂ ವಿಜ್ಞಾನ ಸಚಿವರು. ಆ ಕುರ್ಚಿ ಏನಾದರೂ ತಗ್ಗು ಬಿದ್ದಿದೆ ಏನು ನೋಡಿ. ಬೈರೇಗೌಡರು ಮಾತನಾಡುವಾಗ ಬಹಳ ಜಿಗಿದು ಬರುವವರು. ಅವರ ಇಲಾಖೆಯ ಬಗ್ಗೆ ಬಂದಾಗ ನಾನು ಮಾತನಾಡುತ್ತೇನೆ. ಅವರ ಹಣ ಕಲ್ಲಿನಲ್ಲಿ ಅಥವಾ ಉಸುಕಿನಲ್ಲಿ ಸೋರಿ ಹೋಗುತ್ತದೆ ಎಲ್ಲೆಲ್ಲಿ ಕೂಡಿಸಬೇಕು, ಸೋರಿಕೆಯನ್ನು ಕೂಡಿಸಿದರೆ ಎರಡು ಸಾವಿರ ಕೋಟಿ ರೂಪಾಯಿಗಳು ಕೂಡುತ್ತದೆ.

ಛೇರ್‌ಮನ್: ಎಸ್.ಎಸ್.ಪಾಟೀಲರೆ ಅವರ ತಪ್ಪಲ್ಲ, ಅದು ಕುರ್ಚಿಯ ಮಹಿಮೆ ಎಂದು ಕಾಣಿಸುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಈ ಸಲ ಅವರು ಬಹಳ ಸಂಪನ್ನರಾಗಿ ಕುಳಿತು ಬಿಟ್ಟಿದ್ದಾರೆ. ಇನ್ನೊಂದು ಪ್ರಶ್ನೆಯನ್ನು ತಮಗೆ ಕೇಳುತ್ತೇನೆ. ಬಹುಶಃ ಇದು ಎಲ್ಲರ ತಲೆಯಲ್ಲಿ ಇದೆ. ನಿಮಗೂ ಇದೆ, ಆದರೆ ನೀವು ಅದನ್ನು ಹೇಳುವುದಿಲ್ಲ. ತಾಲ್ಲೂಕು ಪಂಚಾಯಿತಿ ಅವಶ್ಯಕತೆ ಇತ್ತೋ ಹೇಗೆ? ತಾಲ್ಲೂಕು ಪಂಚಾಯಿತಿ ಆದಮೇಲೆ

ಎಂಎಲ್‌ಎಗಳ ಗತಿ ಏನು? ನೀವು ನಮಗೆ ಹೇಳಿದಿರಿ ಪಂಚಾಯಿತಿ ಸಭೆಗೆ ಹೋಗಬೇಕು. ಅಲ್ಲಿ ಬಂದು ಕುರ್ಚಿ ಹಾಕುವವರು ಇಲ್ಲ. ಅದಕ್ಕಾಗಿ ನಮ್ಮ ಶಾಸಕರು ಹೋರಾಟ ಮಾಡಿ ಆ ಒಂದು ಆಶ್ರಯ ಸಮಿತಿಯನ್ನು ತೆಗೆದುಕೊಂಡರು. ಅದಕ್ಕಾಗಿ ತಾಲ್ಲೂಕು ಪಂಚಾಯಿತಿಯ ಅವಶ್ಯಕತೆ ಇತ್ತೋ ಹೇಗೆ ಎನ್ನುವ ಬಗ್ಗೆ ನೀವು ಚಿಂತನೆಯನ್ನು ಮಾಡಬೇಕು. ಇದನ್ನು ಬೇಕಾದರೆ ಪಕ್ಷಭೇದವನ್ನು ಮರೆತು ಕೇಳಬೇಕು. ಅಲ್ಲಿ ಅಧ್ಯಕ್ಷರು ನಮಗೆ ಬೇಕಾದವರು ಇದ್ದರೆ ಬಾ ಎಂದು ಕರೆಯುತ್ತಾರೆ ಮತ್ತು ಕುಳಿತುಕೊಳ್ಳಲು ಹೇಳುತ್ತಾರೆ. ನೀವು ತಾಲ್ಲೂಕು ಪಂಚಾಯಿತಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿರುತ್ತೀರಿ, ನೀವು ಹೋಗಿ ನೋಡಿ ಅವರು ಏನೇನು ಮಾಡಿರುತ್ತಾರೆ. ಶಾಸಕರ ಹಾಗೂ ಮಂತ್ರಿಗಳ ಮಾತುಗಳನ್ನು ಕೇಳಲಿಲ್ಲ, 10 ಲಕ್ಷ 10 ಸಾವಿರ ರೂಪಾಯಿಗಳೆಂದು ಅವರು ಹಂಚಿಕೊಂಡು ಬಿಟ್ಟರು. ನೀವು ಮಿನಿಮಮ್ 5 ಲಕ್ಷ ರೂಪಾಯಿಗಳೆಂದು ಮಾಡಿದಿರಿ ಅವರು ಅಷ್ಟು ಹಾಕಿ ಕಳುಹಿಸಿಬಿಟ್ಟರು. ಅಲ್ಲಿ ಆಗತಕ್ಕಂಥ ವ್ಯವಸ್ಥೆಯನ್ನು ನಾನು ಹೇಳುತ್ತಿದ್ದೇನೆ. ಪಂಚಾಯಿತಿ ಸಭೆಗೆ ಹೋಗಲು ಹೇಳುತ್ತೀರಿ, ಅಲ್ಲಿ ಹೋದರೆ ಮರ್ಯಾದೆ ಇರುವುದಿಲ್ಲ, ಕುರ್ಚಿ ಹಾಕಿ ಕೂಡಿಸುವುದಿಲ್ಲ. ಅಲ್ಲಿ ನೀವು ಎಂ.ಪಿ ಅವರಿಗೆ ಅಡ್ಡಾಡಲು ಕಾರು ಕೊಟ್ಟಿರುತ್ತೀರಿ. ಹಾಗಾದರೆ ಶಾಸಕರು ಏನು ಮಾಡಬೇಕು? ನಮ್ಮ ವ್ಯವಸ್ಥೆಯಲ್ಲಿ ಏನಾಗಿತ್ತೆಂದರೆ ಅಲ್ಲಿ ಅಧ್ಯಕ್ಷ ಸ್ಥಾನದಲ್ಲಿ ಶಾಸಕರು ಕೂಡುತ್ತಿದ್ದರು. ಶಾಸಕರ ಒಂದು ಜವಾಬ್ದಾರಿ ಅಲ್ಲಿದೆ. ನೀವು ಪ್ರಾಮಾಣಿಕವಾಗಿ ಹೇಳಬೇಕು, ಹಳ್ಳಿಗೆ ಇವತ್ತು ಹೋಗಬೇಕು, ಅಲ್ಲಿ ಒಂದು ಬೋರ್‌ವೆಲ್‌ನ ಪಂಪ್ ರಿಪೇರಿ ಆಗಬೇಕಾದರೂ ಶಾಸಕರನ್ನು ಬೈಯ್ಯುತ್ತಾರೆ. ಎಂ.ಪಿ.ಯವರನ್ನು ಬೈಯ್ಯುವುದಿಲ್ಲ, ಪಂಚಾಯಿತಿಯ ಸದಸ್ಯರನ್ನು ಕೇಳುವುದಿಲ್ಲ. ಅಲ್ಲಿರುವಂತಹ ಪಂಚಾಯಿತಿಯ ಸದಸ್ಯರೆ ಎಂಎಲ್‌ಎ ರವರನ್ನು ಕೇಳುತ್ತಾನೆ. ಬೈಯ್ಯುವುದು ಶಾಸಕರನ್ನು, ಆದರೆ ಅವರಿಗೆ ಯಾವ ಅಧಿಕಾರ ಇರುವುದಿಲ್ಲ. ಕನಿಷ್ಟ ಆ ಒಂದು ಅಧಿಕಾರವಾದರೂ ಇತ್ತು, ಅಲ್ಲಿ ಕುಳಿತುಕೊಂಡು ಎಲ್ಲವನ್ನು ರಿವ್ಯೂ ಮಾಡುತ್ತಿದ್ದರು. ಆ ವ್ಯವಸ್ಥೆ ಹೋದಮೇಲೆ ಇವತ್ತು ಹಳ್ಳಿಯಲ್ಲಿ ಶಾಸಕನಿಗೆ ಏನೂ ಪವರ್ ಇಲ್ಲ. ಬೈಯ್ಯಿಸಿಕೊಳ್ಳುವುದು ಮಾತ್ರ ಉಳಿದಿರುತ್ತದೆ. ತಾವು ಚಿಂತನೆ ಮಾಡಬೇಕು, 73ನೇ ಅಮೆಂಡ್‌ಮೆಂಟ್ ಬಂದ ಮೇಲೆ ನಾವೆ ಮಾಡಿದವರು ಎಂದು ಕಾಣುತ್ತದೆ. ಬೇರೆ ರಾಜ್ಯದಲ್ಲಿ ಎಲ್ಲಿಯೂ ಆಗಿಲ್ಲ. ಬೇರೆ ರಾಜ್ಯದಲ್ಲಿ ಎಲ್ಲೆಲ್ಲಿ ಆಗಿವೆ ನೀವು ಅಭ್ಯಾಸ ಮಾಡಿಲ್ಲವೇ? ನಾವು ಭಾರಿ ಮುಂದೆ ಇರುವುದರಿಂದ ಇದನ್ನು ಮಾಡಿಬಿಟ್ಟಿದ್ದೇವೆ. ನೀವು ಇದೊಂದು ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ, ನಾನು ಹೇಳಿದ್ದು ಇದನ್ನು ಅಲ್ಲ. ಇದನ್ನು ತೆಗೆದುಕೊಂಡು ಬರುವುದಕ್ಕೆ ಬರುವುದಿಲ್ಲ.

ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಮಾನ್ಯ ರಾಜೀವ್ ಗಾಂಧೀಯವರು ಒಂದು ಉತ್ತರವನ್ನು ಹೇಳಿದ್ದು ತಮಗೆ ಗೊತ್ತಿರಬಹುದು. ತಾಲೂಕುಮಟ್ಟದಲ್ಲಿ ಮಾಡುವ

ಕೆಲಸ ಇದ್ದರೆ, ಅಲ್ಲಿಯೇ ಮಾಡುವ ಅಭಿಪ್ರಾಯ ಇದ್ದರೆ, ತಾಲ್ಲೂಕು ಪಂಚಾಯಿತಿಯ ಸದಸ್ಯರಾಗಬೇಕು. ಶಾಸಕರು ಮಾಡುವ ಕೆಲಸ, ಕಾನೂನು ಮಾಡುವ ಕೆಲಸವನ್ನು ನಾವು ಏನೇನು ಮಾಡುತ್ತಿದ್ದೇವೆ, ಅದನ್ನು ಮಾಡುವುದಿದ್ದರೆ ಇಲ್ಲಿ ಬರಬೇಕು. ಗ್ರಾಮೀಣ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಹೆಚ್ಚಿಗೆ ಕೆಲಸ ಮಾಡುವ ಅವಶ್ಯಕತೆ ಇದ್ದರೆ ಅಲ್ಲಿಗೆ ಹೋಗಬೇಕು. ಎರಡೂ ಕೆಲಸಗಳನ್ನು ಮಾಡುವುದಕ್ಕೆ ಬರುವುದಿಲ್ಲವೆನ್ನುವ ಬಗ್ಗೆ ಅವರು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್: ಅವರ ಉತ್ತರ ಅನುಭವದಿಂದ ತಪ್ಪಾಗಿದೆ. ಇದರಿಂದ ಶಾಸಕರು ಬೈಯ್ಯಿಸಿಕೊಳ್ಳುವುದಕ್ಕಾಗಿದೆ. ಒಂದು ಗ್ರಾಮಕ್ಕೆ ಒಂದು ಪೋಸ್ಟ್ ಮಾಡಿಸಬೇಕಾದರೆ ಯಾರನ್ನು ಕೇಳುತ್ತಾರೆ, ಎಂ.ಪಿ.ಗಳಿಗೆ ಯಾರಾದರೂ ಅರ್ಜಿಯನ್ನು ಕೊಟ್ಟಿದ್ದಾರೆಯೇ? ಅದನ್ನು ಕೂಡ ಶಾಸಕರಿಗೆ ಅರ್ಜಿ ಕೊಡುತ್ತಾರೆ. ಮೊನ್ನೆ ನಿಮ್ಮನ್ನು ಆರಿಸಿ ಕಳುಹಿಸಿದ್ದೇವೆ, ನಮ್ಮ ಮನೆಯ ಮುಂದಿರುವ ಪಂಪ್ ಮುರಿದಿದೆ, ಅದನ್ನು ನೀವು ಇನ್ನುವರೆಗೆ ಮಾಡಿಸಿಕೊಟ್ಟಿಲ್ಲವೆಂದು ಶಾಸಕರನ್ನು ಕೇಳುತ್ತಾರೆ. ಮಾನ್ಯ ರಾಜೀವ್‌ಗಾಂಧಿಯವರ ಒಂದು ತತ್ವ ಇರಬೇಕು, ಇಂದು ಅದು ಸರಿಯಾಗಿರುವುದಿಲ್ಲ, ನಾವು ಕೆಲವು ಅನುಭವದ ಮೇಲೆ ತಿದ್ದುಪಡಿಗಳನ್ನು ತರಬೇಕಾಗುತ್ತದೆ. ಅದಕ್ಕೆ ನಮಗೆ ಅಧಿಕಾರ ಇರುವುದಿಲ್ಲ. ಕೇಂದ್ರ ಸರ್ಕಾರದಲ್ಲಿ ಆರ್ಟಿಕಲ್ 73ಕ್ಕೆ ಅಮೆಂಡ್‌ಮೆಂಟ್ ಮಾಡುವವರು ಅವರು. ನಮಗೆ ಇರುವ ಅಧಿಕಾರ, ಪಕ್ಷಾಂತರ ಕಾಯಿದೆ ತಿದ್ದುಪಡಿ, ಇದನ್ನು ಈ ಸದನದಲ್ಲಿಯೇ ತೆಗೆದುಕೊಂಡು ಬಂದರೆ ಅದನ್ನು ಮಾಡಿಬಿಡುತ್ತೇವೆ. ಅದರಿಂದ ನಿಮಗೆ ಅನುಕೂಲವಾಗುತ್ತದೆ. ಏಕೆಂದರೆ ಆಡಳಿತ ಪಕ್ಷದವರೇ ಹೆಚ್ಚು ಪಕ್ಷಾಂತರವಾಗುವುದರಿಂದ ತರಬೇಕು, ನಾವು ಇದನ್ನು ಕಂಡು ಉಂಡಿರುತ್ತೇವೆ. ಯಾವ ಪಕ್ಷದಿಂದ ಆರಿಸಿ ಬಂದಿರುತ್ತಾನೆ, ಆ ಪಕ್ಷಕ್ಕೆ ರಾಜೀನಾಮೆ ಕೊಟ್ಟು, ಪುನಃ ಯಾವ ಪಕ್ಷಕ್ಕೆ ಹೋಗುತ್ತಾನೆ, ಆ ಪಕ್ಷದಿಂದ ಪುನಃ ಅವನು ಆರಿಸಿ ಬರಬೇಕು. ಅದು ಇವತ್ತು ತತ್ವ, ಆ ರೀತಿಯಾಗಿ ತಾವು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ತಾಲ್ಲೂಕು ಪಂಚಾಯತಿಯ ವ್ಯವಸ್ಥೆ ಏನು ಮಾಡಬೇಕು. ಈಗಿನ ಕೇಂದ್ರ ಸರ್ಕಾರಕ್ಕೆ ನಾವು ಸಲಹೆಯನ್ನು ಮಾಡೋಣ. ಕಾಂಗ್ರೆಸ್‌ದವರು ನೀವು ಒಪ್ಪಿದರೆ ಅಲ್ಲಿ ಮಾಡಿಸಿಬಿಡೋಣ. ಸುಳ್ಳು ಹೇಳುವುದಕ್ಕೆ ನೀವು ಬಹಳ ಸರದಾರರು ಇದ್ದಂತೆ. ನಮ್ಮ ಆರೋಗ್ಯ ಸಚಿವರು ಅಲ್ಲಿ ಕುಳಿತಿದ್ದಾರೆ, ಆ ಪ್ರಾಣಿಗೆ ನಾವು ಅನ್ನುವುದಕ್ಕಾಗುತ್ತದೆಯೇ? ನಾನು ಅವರಿಗೆ ಅನ್ನುವುದಿಲ್ಲ. ಪ್ರಾಣಿ ಎಂದರೆ ಅದು ದೇವರ ಸಮಾನ.

ಮಾನ್ಯ ಮಲಕರೆಡ್ಡಿಯವರೇ ತಾವು ಈ ಕಡೆ ಕೇಳಬೇಕು. ನಾನು ನಿಮ್ಮ ಇಲಾಖೆಯ ಬಗ್ಗೆ ಕೂಡ ಈಗ ಮಾತನಾಡುತ್ತೇನೆ. ನೀವು ಎಲ್ಲಾ ಏಡ್ಸ್ ಮಾಡಿಬಿಟ್ಟಿರುತ್ತೀರಿ, ಮೊನ್ನೆ ನೀವು ಇರಲಿಲ್ಲ. ನಿಮಗೂ ಏಡ್ಸ್ ಬರುತ್ತದೆ, ಅದು ಹೋಗುವುದು ಅಲ್ಲ. ಇಂಜಕ್ಷನ್ ಮಾಡಿದರೆ ಸಾಕು, ಅದರಿಂದ ಬರುತ್ತದಂತೆ, ನಂತರ ಕ್ಷೌರ ಮಾಡುತ್ತಾರೆ, ಅದು ಎಲ್ಲೆಲ್ಲಿಯಿಂದಲೋ ಬರುತ್ತದೆಂದು ಹೇಳುತ್ತಾರೆ. ಮಾನ್ಯ ಖರ್ಗೆ ಸಾಹೇಬರು

ಬಂದರು, ಇನ್ನು ನಮಗೆ ಜೋರಾಗಿ ಮಾತನಾಡಲು ಅವಕಾಶವಾಗುತ್ತದೆ. ಅವರು ಈ ಕಡೆ ಸ್ಥಾನದಲ್ಲಿ ಕುಳಿತಾಗ ನನ್ನನ್ನು ಸಾಕಷ್ಟು ಬೈದಿದ್ದಾರೆ. ದೇವರು ಅವರಿಗೆ ಒಳ್ಳೆಯದನ್ನು ಮಾಡಲಿ, ಪಾಪ ಅವರಿಗೆ ಏಡ್ಸ್ ಬರುವುದು ಬೇಡ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿಮಗೆ ಕರ್ಣನ ಪಾತ್ರ ಕೊಟ್ಟು, ನೀವು ಆ ಕೆಲಸವನ್ನು ಮಾಡಬೇಡ ಎಂದರೆ ಅದನ್ನು ಮಾಡಬೇಕಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಈ ಸಲ ಅಲ್ಲದಿದ್ದರೂ ಪರವಾಗಿಲ್ಲ, ಮುಂದಿನ ಮುಖ್ಯ ಮಂತ್ರಿಯಾಗಿ ಈ ರಾಜ್ಯದಲ್ಲಿ ಐದು ವರ್ಷ ಕೆಲಸವನ್ನು ಮಾಡಬೇಕು. ದೇವರು ನಿಮಗೆ ಆಶೀರ್ವಾದವನ್ನು ಮಾಡಲಿ, ಪಾಪ ಈ ವರ್ಷ ಬಹಳ ಪ್ರಯತ್ನ ಮಾಡಿದರೂ ಅವರಿಗೆ ಈ ಸಲ ಕೆಲಸವಾಗಲಿಲ್ಲ. ಅವರು ಸುಮ್ಮನೆ ಇಲ್ಲವೆಂದು ಹೇಳುತ್ತಾರೆ. ಅವರು ಏಕೆ ಪ್ರಯತ್ನವನ್ನು ಮಾಡಬಾರದು, ಈ ರಾಜ್ಯದಲ್ಲಿ 7-8 ಸಲ ಆರಿಸಿ ಬಂದಿದ್ದಾರೆ, ಯಾರು ಹಾಗೆ ಆರಿಸಿ ಬಂದಿದ್ದಾರೆ? ನಾವು ಎರಡನೆ ಸಲ ಆರಿಸಿ ಬರಬೇಕಾದರೆ ಸಲಾಯಿನ್ ಹಚ್ಚಿ ಬಂದಿರುತ್ತೇವೆ. ಕೆಲವರು ನಮ್ಮ ಕಡೆ ನಿಮ್ಮ ಕಡೆ ಇದ್ದವರು 7-8 ಸಲ ಆರಿಸಿ ಬಂದಿದ್ದಾರೆ, ಅದಕ್ಕಾಗಿ ನಾನು ಅವರನ್ನು ಅಪ್ರೀಷಿಯೇಟ್ ಮಾಡುತ್ತೇನೆ, ಆ ರೀತಿ ಆರಿಸಿ ಬರುವುದು ಹುಡುಗಾಟಿಕೆಯ ಮಾತು ಅಲ್ಲ. ಜನರನ್ನು ಹಿಡಿದುಕೊಂಡು ಆರಿಸಿ ಬರುವುದು ಬಹಳ ಸುಲಭವಲ್ಲ. ರಾಜಕೀಯವಾಗಿ ಟೀಕೆ ಮಾಡುವುದು ಬೇರೆ, ಇದ್ದದ್ದನ್ನು ಇದ್ದಂತೆ ಹೇಳುವುದು ಬೇರೆ. ಎಂಥೆಂಥವರು ಆರಿಸಿ ಬರದೇ ಹೋಗಿದ್ದಾರೆ. ನೀವು ತಾಲ್ಲೂಕು, ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿಯ ಸಲುವಾಗಿ ಕೇಂದ್ರ ಸರ್ಕಾರದ ಜೊತೆಗೆ ಮಾತನಾಡಬೇಕು. ಈ ಕಾಮಗಾರಿಗಳ ಸಲುವಾಗಿ ನೀವು ಟೆಂಡರ್‌ರನ್ನು ಕರೆಯಬೇಕು. ಅಲ್ಲಿಯ ಕಾಮಗಾರಿಯನ್ನು ಸದಸ್ಯರೆ ಮಾಡುತ್ತಾರೆ. ಮಾಡುವುದು ಇಲಾಖೆಯ ಕೆಲಸ, ಆ ಸದಸ್ಯನಿಗೆ ಸಂಬಂಧ ಇರುವುದಿಲ್ಲ, ಅಲ್ಲಿರುವ ಕಾರ್ಯದರ್ಶಿ ಸುಮ್ಮನೆ ಇವರಿಗೆ ಖರ್ಚು ಹಾಕಿ ಹಣವನ್ನು ಕೊಡಬೇಕು, ಇದು ನಡೆದುಕೊಂಡು ಬಂದಿರುವ ವ್ಯವಸ್ಥೆ, ಇದು ನಿಮಗೂ ಕೂಡ ಗೊತ್ತಿದೆ. ಪಂಚಾಯಿತಿಯಲ್ಲಿ ಕೂಡ 20-60 ಸಾವಿರ ರೂಪಾಯಿಗಳ ಕಾಮಗಾರಿ ಇರುತ್ತವೆ, ಅವುಗಳನ್ನು ಕೂಡ ಟೆಂಡರ್ ಮುಖಾಂತರ ಮಾಡಿಸುವ ಕೆಲಸವನ್ನು ಮಾಡಬೇಕು. ಕೇಂದ್ರ ಸರ್ಕಾರದವರು ಇಎಎಸ್ ವರ್ಕ್ಸ್ ಬರುವುದಿಲ್ಲವೆಂದು ಹೇಳುತ್ತಾರೆ. ದಯವಿಟ್ಟು ಟೆಂಡರ್ ಮಾಡುವುದರಿಂದ ಅನುಕೂಲವಾಗುತ್ತದೆ. ನಾನು ನಿಮ್ಮನ್ನು ಅಪ್ರಿಯೇಟ್ ಮಾಡುತ್ತೇನೆ. ಆ ಕೃಷ್ಣಾ ಯೋಜನೆ ಬಗ್ಗೆ ಹೆಚ್.ಕೆ.ಪಾಟೀಲ ಎಲ್ಲರೂ ಗಟ್ಟಿಯಾಗಿ ನಿಂತುಕೊಂಡಿರುವುದರಿಂದ 30 ಪರ್ಸೆಂಟ್ ಬಿಲೊ ಟೆಂಡರ್ ಹಾಕಿರುತ್ತಾರೆ. ಟೆಂಡರ್‌ನ್ನು ಮಾಡಿ ಎಂದು ನಾವು ಹೇಳುವುದನ್ನು ಹೇಳುತ್ತೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಇವೆಲ್ಲ ಇವರು ಪ್ರಚಾರಕ್ಕಾಗಿ ಮಾಡಿದ್ದು. ವಾಸ್ತವಾಂಶ

ಇವತ್ತಿನ ಪತ್ರಿಕೆಯಲ್ಲಿ ಬಂದಿರುತ್ತದೆ, ಬೆಂಗಳೂರು ಸಿಟಿ ಕಾರ್ಪೊರೇಷನ್‌ದಲ್ಲಿ 13 ಕೋಟಿ ರೂಪಾಯಿಗಳ ಕೆಲಸವನ್ನು ಇವತ್ತು ಟೆಂಡರ್ ಕರೆಯದೇ ಕೊಟ್ಟಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್: ನಾವು ಕೊಡಬಾರದೆಂದು ಹೇಳುತ್ತೇವೆ, ಇವರು ಕೊಟ್ಟರೆ ಏನು ಮಾಡುವುದು? ಅಲ್ಲಿ ಟೆಂಡರ್ ಕರೆದಂತೆ ಮಾಡಿ ಇಲ್ಲಿ ಎಲ್ಲವನ್ನು ಮಾಡಿದಂತೆ ಕಾಣಿಸುತ್ತದೆ. ಇವೆಲ್ಲ ಒಳಗಡೆ ಇರುತ್ತವೆ, ನಾವು ಏನು ಮಾಡುವುದು ಇದ್ದದ್ದನ್ನು ಹೇಳಿದ್ದೇವೆ. ಸರಿಯಾಗಿ ಮಾಡಿದ್ದು ಹೊಗಳಬೇಕು, ಕೆಟ್ಟದ್ದನ್ನು ಮಾಡಿದರೆ ತೆಗಳಬೇಕು. ಎಲ್ಲವನ್ನು ಬೈಯ್ಯುವುದಕ್ಕಾಗುವುದಿಲ್ಲ.

ಹೆಚ್.ಕೆ.ಪಾಟೀಲ್‌ರವರು ಉತ್ತರಕರ್ನಾಟಕದ ಬಗ್ಗೆ ಹೋರಾಟ ಮಾಡಿದ್ದೇ ಮಾಡಿದ್ದು, ಈಗ ಇವರ ಕಾಲದಲ್ಲಿ ಉತ್ತರ ಕರ್ನಾಟಕ ಪೂರ್ಣ ನಾಶವಾಗಿ ಹೋಗುತ್ತದೆ. ಮೊನ್ನೆ 15 ಪರ್ಸೆಂಟ್ ಬಜೆಟ್‌ನಲ್ಲಿ ಉತ್ತರ ಕರ್ನಾಟಕದ್ದೆ ಕಟ್ ಆಗಿರುವುದು, ಬೇಕಾದರೆ ತಾವು ಇಬ್ಬರು ಕುಳಿತುಕೊಂಡು ಲೆಕ್ಕವನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಖಾಸಗಿ ಸಂಸ್ಥೆಗಳು ಇದೆ, 15 ಪರ್ಸೆಂಟ್ ಅಲ್ಲಿಯೇ ಕಟ್ ಆಗುತ್ತದೆ. 80 ಪರ್ಸೆಂಟ್ ಉತ್ತರಕರ್ನಾಟಕದಲ್ಲಿ ಕಟ್ಟಾದರೆ ದಕ್ಷಿಣಕರ್ನಾಟಕದಲ್ಲಿ 20 ಪರ್ಸೆಂಟ್ ಕಟ್ ಆಗುತ್ತದೆ. ಕರ್ನಾಟಕವೇ ಸಮಗ್ರವಾಗಿ ಅಭಿವೃದ್ಧಿಯಾಗಬೇಕೆನ್ನುವುದು ನನ್ನ ತತ್ವವಾಗಿದೆ.

ಶ್ರೀ ಬಿ.ಎನ್.ಬಚ್ಚೇಗೌಡ: ನಿಮ್ಮ ಪಕ್ಕದಲ್ಲಿ ಕುಳಿತಿರುವ ಮಾನ್ಯ ನಂಜಯ್ಯನಮಠರವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಉತ್ತರಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ನಿಮ್ಮ ಪಕ್ಷದವರೇ ಹೇಳಿದ್ದಾರೆ.

(ಗೊಂದಲ)

ಶ್ರೀ ಎಸ್.ಜಿ.ನಂಜಯ್ಯನಮಠ: ನಾನು ಆ ವಿಷಯದಲ್ಲಿ ರಾಜೀ ಆಗುವುದಿಲ್ಲ. ಬಜೆಟ್ ನೋಡಿದರೆ ಎಷ್ಟು ಕಾಳಜಿ ಮತ್ತು ಅಂತಃಕರಣ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ನಾವು ಹೆಚ್ಚಿಗೆ ಹಣವನ್ನು ನೀರಾವರಿ ಎಲ್ಲಿ ಆಗಬೇಕು ಎನ್ನುವುದನ್ನು ನೋಡಿ ಉತ್ತರಕರ್ನಾಟಕಕ್ಕೆ ಹೆಚ್ಚು ಖರ್ಚು ಮಾಡಿದ್ದೇವೆ. ಭಾರಿ ನೀರಾವರಿಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕು, ನಾವು ಸಂತೋಷಪಡುತ್ತೇವೆ, ಅದಕ್ಕೆ ನಮ್ಮ ಭೇದಭಾವನೆ ಇಲ್ಲ. ರಾಜ್ಯದಲ್ಲಿ ಇದುವರೆಗೂ ಖರ್ಚಾಗಿರತಕ್ಕಂತಹ ಹಣದ ಬಗ್ಗೆ ಅಂಕಿಅಂಶಗಳನ್ನು ನೋಡಿದಾಗ we are spending more money towards that side: we are happy. ಅದಕ್ಕೆ ನಮ್ಮ ತಕರಾರು ಏನು ಇಲ್ಲ.

ಶ್ರೀ ಕೆ.ಶ್ರೀನಿವಾಸಗೌಡ: ನಮ್ಮ ವಾದವೇನೆಂದರೆ, ಉತ್ತರ ಕರ್ನಾಟಕ,

ದಕ್ಷಿಣಕರ್ನಾಟಕ ಪೂರ್ವ-ಪಶ್ಚಿಮ ಎಂದು ಮಾಡುವುದು ಬೇಡ, ಸಮಗ್ರ ಕರ್ನಾಟಕದ ಬೆಳವಣಿಗೆಯಾಗಬೇಕು ಸಂಪೂರ್ಣವಾಗಿ ಇದರ ಬಗ್ಗೆ ನಾವು ಚಿಂತನೆಯನ್ನು ಮಾಡೋಣ. ನಾನು ಇದರ ಬಗ್ಗೆ ನೊಂದು ಹೇಳಬೇಕಾಗುತ್ತದೆ, ನಾವು ಒಂದು ರಾಜ್ಯವನ್ನು ಮಾಡಬೇಕಾದರೆ ನಿಜಲಿಂಗಪ್ಪನವರು ಇದರ ಬಗ್ಗೆ ಎಷ್ಟು ಕಷ್ಟಪಟ್ಟಿದ್ದಾರೆ ನೋಡಬೇಕು. ಯಾವ ಜಿಲ್ಲೆಗೆ ಅನ್ಯಾಯವಾಗಿದೆ ಆ ಜಿಲ್ಲೆಯ ಹೆಸರನ್ನು ಗುರುತಿಸಿ ಮಾತನಾಡಲಿ. ಇದರಿಂದ ರಾಂಗ್‌ಸಿಗ್ನಲ್ ಹೋಗುತ್ತದೆ, ಯಾವಯಾವ ಜಿಲ್ಲೆಯು ಅಭಿವೃದ್ಧಿಯಾಗಬೇಕು. ಪಾಟೀಲ್ ಪುಟ್ಟಪ್ಪನವರು ಹಿಂದೆ ಹೇಳಿದ್ದರೂ ನಮಗೆ ಪ್ರತ್ಯೇಕ ರಾಜ್ಯ ಬೇಕು ಎಂದು ಹೇಳಿದ್ದರು. ಕೊಡಗಿನವರು ನಮಗೆ ಪ್ರತ್ಯೇಕ ರಾಜ್ಯ ಬೇಕು ಎಂದು ಮಾತನಾಡಿದರು.

ಛೇರ್ಮನ್: ಇದಕ್ಕೆ ನಮ್ಮ ಸಹಮತವಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಸಚಿವರು ಈ ಕಡೆಗೆ ತಮ್ಮ ಗಮನವನ್ನು ಹರಿಸಬೇಕು. ಗ್ರಾಮಪಂಚಾಯಿತಿ ಕೊನೆಯ ತಳ, ಇಲ್ಲಿ ಅಭಿವೃದ್ಧಿಯಾದರೆ ಅಭಿವೃದ್ಧಿಯಾಗುತ್ತದೆ. ಇಎಎಸ್ 3ನೇ ಕಂತನ್ನು ತೆಗೆದುಕೊಳ್ಳುವುದಕ್ಕೆ ನಾನು ಇದರ ಬಗ್ಗೆ ವಿಶ್ವ ಪ್ರಯತ್ನವನ್ನು ಮಾಡಿದೆ. ನಮ್ಮ ಬೆಳಗಾವಿ ಜಿಲ್ಲೆಯವರು 2-3 ಕಂತು ಪ್ರಯತ್ನ ಮಾಡಿ ತೆಗೆದುಕೊಂಡವರು ಇದ್ದಾರೆ. ಇದರ ಬಗ್ಗೆ ಯಾರು ಪ್ರಯತ್ನವನ್ನು ಮಾಡಿಲ್ಲವೋ ಅವರಿಗೆ ಅದು ಬಂದಿಲ್ಲ. ಇದರಿಂದ ರಾಜ್ಯಕ್ಕೆ ಬರುವುದು ಹೋಗುತ್ತದೆ, ಪಂಚಾಯಿತಿ ಕಾರ್ಯದರ್ಶಿಗಳು ಕೇಂದ್ರಸ್ಥಾನದಲ್ಲಿರುವುದಿಲ್ಲ, ಅವರುಗಳು ಯಾವಾಗಲೂ ಕೇಂದ್ರಸ್ಥಾನದಲ್ಲಿರಬೇಕು. ಆದ್ದರಿಂದ ಅವರಿಗೆ ಒಂದು ವಸತಿಗೃಹವನ್ನು ಕಟ್ಟಿಕೊಡುವ ಕೆಲಸವನ್ನು ತಾವು ಮೊದಲು ಮಾಡಬೇಕು. ನಾನು ಎಷ್ಟು ಸಾರಿ ಹೋಗಿ ನೋಡಿದ್ದೇನೆ, ಆ ಅಧಿಕಾರಿಗಳು ಕೇಂದ್ರಸ್ಥಾನದಲ್ಲಿ ಇರುವುದಿಲ್ಲ. ಮಾನ್ಯ ರಂಗನಾಥ್‌ರವರೆ, ನಾನು ನನ್ನ 5 ವರ್ಷದ ಆಡಳಿತದ ಅನುಭವದ ಬಗ್ಗೆ ತಮಗೆ ಹೇಳುತ್ತೇನೆ. ನಾವು ಎಲ್ಲಾದರೂ ಹೋದ ಕೂಡಲೇ ಆ ಗ್ರಾಮಲೆಕ್ಕಿಗ ಅವನು ಇರುತ್ತಿರಲಿಲ್ಲ ಅವನನ್ನು ಬೈಯ್ಯುತ್ತಿದ್ದೆವು. ಈಗ ಎಲ್ಲರೂ ಪಂಚಾಯಿತಿಯವರ ಮೇಲೆಯೆ ದೂರನ್ನು ಹೇಳುತ್ತಾರೆ. ಒಟ್ಟಿನಲ್ಲಿ ಪಂಚಾಯಿತಿ ಕಾರ್ಯದರ್ಶಿಯವರು ಕೇಂದ್ರಸ್ಥಾನದಲ್ಲಿ ಇರುವುದಿಲ್ಲ, ಅವರುಗಳು ಕೇಂದ್ರ ಸ್ಥಾನದಲ್ಲಿರುವ ಬಗ್ಗೆ ಏನಾದರೂ ಕಟ್ಟುನಿಟ್ಟಿನ ಕ್ರಮವನ್ನು ತಾವು ತೆಗೆದುಕೊಳ್ಳಬೇಕು. ಅವನು ಒಂದು ಪಕ್ಷ ಕೇಂದ್ರಸ್ಥಾನದಲ್ಲಿಲ್ಲದಿದ್ದರೆ ಅವನನ್ನು ಸಸ್ಪೆಂಡ್ ಮಾಡಬೇಕು. ಸಸ್ಪೆಂಡ್ ಎಂದರೆ ಶಿಕ್ಷೆಯಲ್ಲ, ಮೊದಲು ಅನಿವಾರ್ಯವಾಗಿ ಅದನ್ನು ಮಾಡಲೇಬೇಕು, ಇದಾದರೆ ಅಧಿಕಾರಿಗಳು ಹೆದರುತ್ತಾರೆ. ನಿಮ್ಮವರ ಹಣೆಬರಹವು ಅಷ್ಟೇ ಆಗಿದೆ, ನಿಮ್ಮದನ್ನು ಮುಂದೆ ನಾನು ಹೇಳುತ್ತೇನೆ. ಆದರೆ ನಿಮಗಿಂತ ಕಾರ್ಯದರ್ಶಿಗಳು ಬಹಳ ಡೇಂಜರ್ ಆಗಿರುತ್ತಾರೆ, ಅನಂತರ ಕೃಷಿ ಸಹಾಯಕರು, ವಿಷಯದ ಬಗ್ಗೆ ಮಾತನಾಡುತ್ತೇನೆ. ಪಂಚಾಯಿತಿ ಕಾರ್ಯದರ್ಶಿಯವರು ಬೇರೆ ಹಳ್ಳಿಗಳಿಗೆ ಹೋಗುವುದಿಲ್ಲ, ತಾವು ಏನು

ಕಾನೂನು ಮಾಡಿ 5-6 ಹಳ್ಳಿಗಳ ಜವಾಬ್ದಾರಿಯನ್ನು ವಹಿಸಿಕೊಟ್ಟಿದ್ದರೂ ಸಹ ಕೇಂದ್ರಸ್ಥಾನದಲ್ಲಿರುವಂತಹ ಹಳ್ಳಿಗಳನ್ನೇ ನೋಡುವುದಿಲ್ಲ, ಉಳಿದ ಹಳ್ಳಿಗಳನ್ನು ಎಲ್ಲಿ ನೋಡುತ್ತಾರೆ? ಪ್ರತಿ ಹಳ್ಳಿಗಳಿಗೆ ಹೋದ ಬಗ್ಗೆ ಏನಾದರೂ ಟೂರ್ ಪ್ರೋಗ್ರಾಮ್‌ನ್ನು ಹಾಕಿಸುತ್ತೀರಾ? ಅವರು ಹಳ್ಳಿಗಳಿಗೆ ಹೋದ ಬಗ್ಗೆ ಟಿ.ಪಿ.ಯನ್ನು ಕಳುಹಿಸಿಕೊಡುವುದಕ್ಕೆ ಹೇಳಬೇಕು. ನೀವೊಬ್ಬರೆ ರಾಜ್ಯವನ್ನು ನೋಡುವುದಕ್ಕಾಗುವುದಿಲ್ಲ, ನೀವು ಬಿಡಿಓವನ್ನು ತೆಗೆದು ಹಾಕಿರುವುದು ಸರಿಯಾಗಿದೆ, ಇದನ್ನು ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗಲೇ ಮಾಡಿದ್ದೆವು. ಈಗ ಏನು ಬಿಡಿಓರವರ ಅವಶ್ಯಕತೆ ಇರುವುದಿಲ್ಲ. ಆದರೆ ಈ ಕಾರ್ಯದರ್ಶಿಗಳು ನಿಗದಿತ ವೇಳೆಗೆ ಹಳ್ಳಿಗಳಿಗೆ ಹೋಗಿ ಅಲ್ಲಿಯ ಕೆಲಸವನ್ನು ನೋಡಿದರೆ ಮಾತ್ರ ಅಭಿವೃದ್ಧಿಯಾಗುತ್ತದೆ. ಆದರೆ ಆ ಕಾರ್ಯದರ್ಶಿಗಳಿಗೆ ಆ ಊರೇ ಗೊತ್ತಿರುವುದಿಲ್ಲ, ಮಾನ್ಯ ಸದಾನಂದಗೌಡರು ಇದರ ಬಗ್ಗೆ ಹೇಳಿದರು, 3-4 ಪಂಚಾಯಿತಿಗೆ ಒಬ್ಬ ಕಾರ್ಯದರ್ಶಿಯವರು ಇದ್ದಾರೆ. ಇನ್ನು ತಾವು ಕಾರ್ಯದರ್ಶಿಗಳ ಹುದ್ದೆಯನ್ನು ತುಂಬಿರುವುದಿಲ್ಲ. ಅವರ ಸಂಖ್ಯೆಯನ್ನು ಜಾಸ್ತಿ ಮಾಡಿದರೂ ಸಹ ಕಾರ್ಯದರ್ಶಿಯವರು ಇಲ್ಲದಿದ್ದರೆ ತಾವು ಏನು ಮಾಡುವುದು? ಕಾರ್ಯದರ್ಶಿ ಹುದ್ದೆಯು ಮಹತ್ವದ ಸ್ಥಾನವನ್ನು ಪಡೆದಿರುವುದರಿಂದ ಶೀಘ್ರವಾಗಿ ಹುದ್ದೆಯನ್ನು ತುಂಬಬೇಕು ಹಾಗೆಯೇ ಅವರನ್ನು ಕೇಂದ್ರಸ್ಥಾನದಲ್ಲಿರುವಂತೆ ಮಾಡಬೇಕು. ಅವರು ನಿಗದಿತ ವೇಳೆಯೊಳಗೆ ಪ್ರತಿಹಳ್ಳಿಗಳಿಗೆ ಹೋಗಿ ಜನರಿಗೆ ಸಿಕ್ಕಿ ಅವರ ಕೆಲಸವನ್ನು ಮಾಡಿಕೊಡಬೇಕು. ಪಂಚಾಯಿತಿಯೊಳಗೆ ಮನೆಯ ಪರವಾನಗಿಯನ್ನು ಕೊಡುವವರು ಯಾರು? ಹೊಸ ಮನೆಯನ್ನು ಕಟ್ಟುವುದಕ್ಕೆ ಪರವಾನಗಿ ಅರ್ಜಿ ಕೊಡದೆ ಅವನೇ ಮನೆಯನ್ನು ಕಟ್ಟಿಕೊಂಡು ಬಿಡುತ್ತಾನೆ. ಏಕೆಂದರೆ ಅವನ ಮನೆಯಲ್ಲಿ 25 ಓಟುಗಳಿದ್ದರೆ ಸಾಕು, ಅಲ್ಲಿಗೆ ಸದಸ್ಯರು, ಕಾರ್ಯದರ್ಶಿಗಳು ಹೋಗುವುದಿಲ್ಲ ಮತ್ತು ಅವನನ್ನು ಏನು ಎಂದು ಕೇಳುವುದಿಲ್ಲ. ಇದು ನಡೆದಿರುವ ವಿಚಾರದ ಬಗ್ಗೆ ನಾನು ಹೇಳುತ್ತಿದ್ದೇನೆ. ಅಲ್ಲಿ ಅತಿಕ್ರಮಣ ಹೆಚ್ಚಾಗಿರುವುದೇ ಇವರಿಂದ ಇದರ ಕಡೆ ತಾವು ಗಮನವನ್ನು ಹರಿಸಬೇಕು. ಈ ಕೆಲಸವು ಮೆಂಬರುಗಳ ಕಡೆಯಿಂದ ಆಗುವುದಿಲ್ಲ, ಅದನ್ನು ಕಂಟ್ರೋಲ್ ಮಾಡುವುದು ಆಗಬೇಕು. ಅಲ್ಲಿಯ ಕಾರ್ಯದರ್ಶಿಗಳು ಕೂಡ ಹೋಗಿ ನೋಡುವುದಿಲ್ಲ ಮತ್ತು ನೋಟೀಸ್‌ನ್ನು ಆತನಿಗೆ ಕೊಡುವುದಿಲ್ಲ. ಹಾಗೆಯೇ ಅವನು ಮನೆಯನ್ನು ಕಟ್ಟಿಕೊಂಡು ಬಿಡುತ್ತಾನೆ. 100ಕ್ಕೆ 80ರಷ್ಟು ಜನರು ಹಳ್ಳಿಗಳಲ್ಲಿ ಈಗ ಪರವಾನಗಿಯಿಲ್ಲದೆ ಮನೆಯನ್ನು ಕಟ್ಟಿಕೊಂಡಿದ್ದಾರೆ. ಜನತಾಪ್ಲಾಟ್‌ನ್ನು ಬಹಳ ಚೆಂದವಾಗಿ, ಅವರು ಎಲ್ಲಾ ರಸ್ತೆಗಳನ್ನು ಬಂದ್ ಮಾಡಿ ಪ್ಲಾಟನ್ನು ಕಟ್ಟಿಕೊಂಡಿದ್ದಾರೆ, ತಾವು ಹೋಗಿ ನೋಡಿಕೊಂಡು ಬನ್ನಿ. ಇದರ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ತಾವು ಅನುಭವಸ್ಥರು ಇದ್ದೀರಿ ಅದನ್ನು ತಾವು ಮಾಡಬೇಕೆಂದು ಕೂಡ ನಾವು ಹೇಳುತ್ತಿದ್ದೇವೆ. ಇನ್ನೊಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಈ ಸದನದಲ್ಲಿ ಹಿರೇಕೆರೂರು ಶಿಸಕರು ಇಲ್ಲ, ತಾವು ಪಂಚಾಯಿತಿಯನ್ನು ಮಾಡಬೇಕಾದರೆ ಜನಸಂಖ್ಯೆಯ ಆಧಾರದ ಮೇಲೆ ಮಾಡುತ್ತೀರಿ

ಮಿನಿಮಮ್ ಜನಸಂಖ್ಯೆ ಎಂದರೆ 5,000 ಇರಬೇಕೆಂದು ತಾವು ಹೇಳುತ್ತೀರಿ. ಅದಕ್ಕಿಂತ ಕಡಿಮೆ ಜನಸಂಖ್ಯೆ ಇದ್ದರೆ ಪಂಚಾಯಿತಿಯನ್ನು ಮಾಡುವುದಿಲ್ಲವೇ? ನಾನು ನಮ್ಮ ನಾಡಿನ ಬಗ್ಗೆ ಹೇಳುತ್ತಿದ್ದೇನೆ, ನಾನು ಇದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಹಿರೇಕೆರೂರಿನಲ್ಲಿನ ಒಂದು ಊರಿಗೆ ನಾನು ಹೋಗಿದ್ದೆ. ಸೊಸೈಟಿ ಅಮಾಲ್ಗಮೇಷನ್ ಪ್ರಕಾರ ಆ ಊರಿನ ಜನಸಂಖ್ಯೆ ಕಡಿಮೆ ಇದೆ ಎಂದು ತಿಳಿದುಕೊಂಡು ದೊಡ್ಡ ಊರಿಗೆ ಸೊಸೈಟಿಯನ್ನು ತಂದಿದ್ದಾರೆ. ಆಮೇಲೆ ಆ ಊರಿನವರು ನನ್ನ ಕಡೆಗೆ ಬಂದು ಹೇಳಿದರು. ಹೀಗೆ ಈ ಜನಸಂಖ್ಯೆಯ ಆಧಾರವನ್ನು ಹಿಡಿದುಕೊಂಡರೆ ಇದು ಹೇಗೆ ಆಗುತ್ತದೆ? ಇದರ ಬಗ್ಗೆ ನೀವು ಉತ್ತರವನ್ನು ಕೊಡಬೇಕು. ಒಂದು ಪಂಚಾಯಿತಿ ಕೇಂದ್ರಸ್ಥಾನವಿರುವಂಥ ಊರಿಗೆ ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ರಾಷ್ಟ್ರ ಪ್ರಶಸ್ತಿ ಬಂದಿತ್ತು. ಜನಸಂಖ್ಯೆ ಕಡಿಮೆ ಮಾಡಿದ್ದಕ್ಕೆ ಆ ಊರಿಗೆ ಈ ಪ್ರಶಸ್ತಿಯು ಲಭ್ಯವಾಗಿತ್ತು. ಅಲ್ಲಿ 2000 ಇದ್ದಂತಹ ಜನಸಂಖ್ಯೆ ಹಾಗೆಯೇ ಇದೆ. ಆದರೆ, ಇವರು 4000 ಎಂದು ಕಳೆದ 10 ವರ್ಷಗಳಿಂದ ಈ ಅಂಕಿಅಂಶವನ್ನು ತೋರಿಸಿ ಬಿಟ್ಟರು. ನನ್ನ ಅನುಭವದಲ್ಲಿ ಹೇಳುವ ಮಾತೆಂದರೆ, ಅಲ್ಲಿರುವವರೆಲ್ಲರೂ ಬಂದು ನನಗೆ ಅರ್ಜಿ ಕೊಟ್ಟಾಗ ನಾನು ಮತ್ತೆ ಸೊಸೈಟಿಯನ್ನು ಕಿತ್ತುಹಾಕಿದೆ. ಪಂಚಾಯಿತಿಯನ್ನು ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಆರ್ಡರ್ ಮಾಡಿ ಬಂದಿದ್ದೆ. ಅಲ್ಲಿಯ ಜನರು ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಜನಸಂಖ್ಯೆಯನ್ನು ಕಡಿಮೆ ಮಾಡಿದರು. ಇಂತಹವರಿಗೆ ಅಲ್ಲಿ ಶಿಕ್ಷೆಯಾಗಿದೆ. ಯಾವ ಊರು ಹಿಂದೆ ಕೇಂದ್ರಸ್ಥಾನವಾಗಿತ್ತೋ ಮತ್ತು ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶಸ್ತಿಯನ್ನು ಗಳಿಸಿತ್ತೋ ಅಲ್ಲಿ ಎಷ್ಟೇ ಜನಸಂಖ್ಯೆ ಇದ್ದರೂ ಕೂಡ ಆ ಊರನ್ನು ಕಿತ್ತು ಬೇರೆ ಊರಿಗೆ ಸೇರಿಸಬಾರದು, ಈ ರೀತಿ ಮಾಡುವುದಕ್ಕೆ ನೀವು ಸುತ್ತೋಲೆಯನ್ನು ಕಳುಹಿಸುತ್ತೀರೋ ಅಥವಾ ಇನ್ನೇನೋ ಕ್ರಮ ತೆಗೆದುಕೊಂಡು ಇದನ್ನು ಕನ್ಸಿಡರ್ ಮಾಡುತ್ತೀರೋ ಅದನ್ನು ನಾನು ತಿಳಿಯಬಯಸುತ್ತೇನೆ. ನಾನು ಜಿಲ್ಲಾಧಿಕಾರಿಯವರಿಗೆ ಪಂಚಾಯಿತಿ ಮಾಡಿ ಎಂದು ಹೇಳಿದ್ದೆ, ಆದರೆ ಅದು ಇನ್ನು ಆದ ಹಾಗೆ ಕಾಣುತ್ತಿಲ್ಲ, ಪಂಚಾಯಿತಿ ಮೆಂಬರ್ ಆಗಬೇಕಾದರೆ ಇವರು ಹೊಸ ನಿಯಮವನ್ನೇ ಮಾಡಿದ್ದಾರೆ. ನಮಗೇನು ಅವಶ್ಯಕತೆ ಇಲ್ಲ, ನಾವು ನಾಲ್ಕೈದು ಬಾರಿ ಅಧಿಕಾರದಲ್ಲಿದ್ದೆವು.

7-00 ಪಿ.ಎಂ

ಛೇರ್ಮನ್: ತಾವು ದಯವಿಟ್ಟು ಮುಂದುವರೆಸಿ.

ಶ್ರೀ ಎಸ್.ಎಸ್.ಪಾಟೀಲ್: ನನಗೆ ಇನ್ನೂ ಒಂದು ಗಂಟೆ ಬೇಕು. ನಾನು ಕೃಷಿ ಮೇಲೆ ಮಾತನಾಡಿಲ್ಲ.

ಛೇರ್ಮನ್: ಅಧ್ಯಕ್ಷರು ಬರುತ್ತಾರೆ. ಅವರು ಬರುವವರೆಗೆ ನೀವು ಮಾತನಾಡಿ.

(ಗೊಂದಲ)

ಶ್ರೀ ಎಸ್.ಜಿ.ನಂಜಯ್ಯನಮಠ: ಐದಾರು ಮಕ್ಕಳಾದವರಿಗೆ ಮುಂದಿನ ಸಲ ವಿಧಾನಸಭೆಗೆ ಟಿಕೇಟ್ ಕೊಡಬಾರದು ಎಂದು ನಿರ್ಣಯ ಮಾಡಬೇಕು.

ಶ್ರೀ ಎಸ್.ಎಸ್.ಪಾಟೀಲ್: ಟಿಕೇಟ್ ಅಲ್ಲ, ಡಿಸ್‌ಕ್ವಾಲಿಫೈ ಆಗುತ್ತದೆ ಎಂದು ಹೇಳಿಬಿಡೋಣ. ಹಿಂದೆ ಇದ್ದವರು ನಾವು ಸಹಿತ ಹೋಗಬೇಕು. ಹಳೆ ಮಂದಿಯೆಲ್ಲ ಹೋಗಿಬಿಡುತ್ತಾರೆ. ಯುವಕರಿಗೆ ಅವಕಾಶ ಸಿಗಲಿ.

ಛೇರ್ಮನ್: ನೀವು ಮುಂದುವರೆಸಿ.

ಶ್ರೀ ಎಸ್.ಎಸ್.ಪಾಟೀಲ್: ಆಮೇಲೆ ಖರೀದಿಯಲ್ಲಿ ಅವ್ಯವಹಾರ. ನಿಮ್ಮ ಖರೀದಿ ಕಮಿಟಿ ಇದೆಯಲ್ಲ, ಜಿಲ್ಲಾ ಪಂಚಾಯತ್ ಖರೀದಿ ಕಮಿಟಿಯಲ್ಲಿ ಹೋಗುವುದಕ್ಕೆ ದೊಡ್ಡ ದಾಂಧಲೆಯೇ ಆಗುತ್ತದೆ. ಖರೀದಿ ಕಮಿಟಿಯ ಒಂದು ಉದಾಹರಣೆಯನ್ನು ನಾನು ಹೇಳುತ್ತೇನೆ. ಹಿಂದಿನ ಅಲ್ಪಸಂಖ್ಯಾತರು ಮತ್ತು ಹಿಂದುಳಿದವರ್ಗಗಳ ಸಚಿವರಾಗಿದ್ದ ಮಾನ್ಯ ಕೃಷ್ಣಾರೆಡ್ಡಿಯವರು ನಮಗೆ ಒಂದು ಎಸ್‌ಸಿ/ಎಸ್‌ಟಿ ಹಾಸ್ಟೆಲ್‌ನ್ನು ಮಂಜೂರು ಮಾಡಿದ್ದರು. ಈಗ ಅವರು ನಿಮ್ಮ ಮಿತ್ರರಂತೆ. ನಿಮ್ಮ ಮಿತ್ರರು ಇಲ್ಲಿಗೆ ಬಂದರು ಮತ್ತು ನಮ್ಮ ಮಿತ್ರರು ಅಲ್ಲಿಗೆ ಹೋದರು. ಅಲ್ಲಿ ನಮ್ಮ ಮಿತ್ರರು ಅವರ ಮಗ್ಗುಲದಲ್ಲಿ ಕುಳಿತಿದ್ದಾರೆ. ನನ್ನ ಸ್ವಂತ ಊರಿನಲ್ಲಿ ಹಾಸ್ಟೆಲ್ ಉದ್ಘಾಟನೆಯಾಯಿತು. ನಾನು ಮತ್ತು ಕೃಷ್ಣಾರೆಡ್ಡಿಯವರು ಕೂಡಿಯೇ ಹೋಗಿದ್ದೆವು. ಹೊಸ ಕುರ್ಚಿಗಳನ್ನು ಆವಾಗ ತಂದು ಹಾಕಿದ್ದಾರೆ. ಮಂತ್ರಿಗಳ ಕುರ್ಚಿಯೇ ಮುರಿದುಬಿದ್ದಿತು.......

ಶ್ರೀ ಪಿ.ಜಿ.ಆರ್.ಸಿಂಧ್ಯ: ಏಳು ಗಂಟೆಯಾಯಿತು. ನಾಳೆ ಮಿಟ್ ಮಾಡೋಣ.

ಶ್ರೀ ಎಸ್.ಎಸ್.ಪಾಟೀಲ್: ನಾಳೆ ಚರ್ಚೆ ಮಾಡೋಣ ಬಿಡಿ. ಇದು ಅಸೆಂಬ್ಲಿ, ಎರಡು ದಿವಸ ಹೆಚ್ಚು ಮಾಡಿದರೆ ಆಗುತ್ತದೆ.....

(ಗೊಂದಲ)

ಛೇರ್ಮನ್: ಅಧ್ಯಕ್ಷರು, ಪೀಠಕ್ಕೆ ಬರಬೇಕು. ಅವರು ಬರುತ್ತಿದ್ದಾರೆ. ಅವರು ಬರುವವರೆಗೆ ಸ್ವಲ್ಪ ಶಾಂತವಾಗಿರಿ. ನೀವು ಮುಂದುವರೆಸಿ.

ಶ್ರೀ ಎಸ್.ಎಸ್.ಪಾಟೀಲ್: ಮತ್ತೆ ನಾವು ಒಂದು ಲಗ್ನಕ್ಕೆ ಹೋಗಬೇಕು. ಇನ್ನೂ ನಾನು ಮಾತನಾಡುವುದು ಇದೆ.

ಛೇರ್ಮನ್: ನೀವು ಮಾತನಾಡಿ ಮುಗಿಸಿಬಿಡಿ.

ಶ್ರೀ ಎಸ್.ಎಸ್.ಪಾಟೀಲ್: ನಾಳೆ ಮುಂದುವರೆಸುತ್ತೇನೆ.

(ಗೊಂದಲ)

ಛೇರ್ಮನ್: ಇಲ್ಲದಿದ್ದರೆ ಬೇರೆಯವರು ಅವಕಾಶ ತೆಗೆದುಕೊಳ್ಳುತ್ತಾರೆ. ಬಹುತೇಕ ಅಧ್ಯಕ್ಷರು ಬರುತ್ತಾರೆ. ಅವರು ಬರುವವರೆಗೂ ಮುಂದುವರೆಸಬೇಕೆನ್ನುವ ಆಜ್ಞೆ ಇದೆ.

ಶ್ರೀ ಡಿ.ವಿ.ಸದಾನಂದಗೌಡ: ಅಧ್ಯಕ್ಷರೇ, ಏನಾದರೂ ವಿಶೇಷ ಕಲಾಪಗಳು ಇದ್ದರೆ ನಾವು ಸಭೆಯನ್ನು ಸ್ವಲ್ಪ ಮುಂದುವರೆಸಿಕೊಂಡು ಹೋಗಿರುವುದು ಹಿಂದಿನಿಂದ ನಡೆದು ಬಂದಂಥ ಪದ್ಧತಿ. ಇವತ್ತು ಮತ್ತು ನಾಳೆ ಸಾಯಂಕಾಲ ಚರ್ಚೆ ನಡೆಯಲಿಕ್ಕೆ ಇದೆ. ಈಗಾಗಲೇ ಗಂಟೆ ಏಳು ಆಯಿತು. ಬೆಳಿಗ್ಗೆಯಿಂದ ನಾವು ಇಲ್ಲಿ ಕುಳಿತುಕೊಂಡು ಭಾಗವಹಿಸುತ್ತಿದ್ದೇವೆ. ವಿಶೇಷ ಸಂದರ್ಭಗಳನ್ನು ಬಿಟ್ಟರೆ 6 ಗಂಟೆವರೆಗೆ ಮಾತ್ರ ನಾವು ಯಾವಾಗಲೂ ಸಭೆಯನ್ನು ನಡೆಸುವುದು. ಅಧ್ಯಕ್ಷರ ಸ್ಥಾನದಿಂದ ಏನೆಲ್ಲ ಮಾತುಗಳು ಬಂದವು, ಅವುಗಳಿಗೆಲ್ಲ ನಾವು ಹೃತ್ಪೂರ್ವಕ ಬೆಂಬಲ ಕೊಟ್ಟಿದ್ದೇವೆ. ಹೀಗಿರುವಾಗ ಇವತ್ತು ರೂಲ್ 69ರಲ್ಲಿ ಚರ್ಚೆ ಮಾಡಬೇಕಾಗಿದ್ದನ್ನು ನಾಳೆ ತೆಗೆದುಕೊಳ್ಳೋಣ ಎಂದು ಅವರು ಹೇಳಿದ್ದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ಈಗ ಗಂಟೆ ಏಳಾಯಿತು. ನಮಗೆ ಬೇರೆಬೇರೆ ಅನೇಕ ಕಾರ್ಯಕ್ರಮಗಳು ಇವೆ. ನಾವೆಲ್ಲರೂ ಕೂಡ ಸಭೆಯನ್ನು ನಾಳೆಗೆ ಮುಂದುವರೆಸಬೇಕೆಂದು ಅಪೇಕ್ಷೆ ಮಾಡುತ್ತಿದ್ದೇವೆ. ತಾವು ದಯವಿಟ್ಟು ಮುಂದೂಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಈ ಸದನದ ಕಾರ್ಯಕಲಾಪಗಳು ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ವರದಿಯಾಗಬೇಕಾಗುತ್ತದೆ. ಇದೊಂದು ಪ್ರಮುಖ ವಿಚಾರ ನಮಗೆಲ್ಲರಿಗೂ ಗೊತ್ತಿರತಕ್ಕಂಥಾದ್ದು. 7 ಗಂಟೆ ಆದಮೇಲೆ ಅವರು ಹೋಗುವುದು ಯಾವಾಗ ಮತ್ತು ಮಾಧ್ಯಮಗಳಲ್ಲಿ ಬರೆಯುವುದು ಯಾವಾಗ? ಸಾಮಾನ್ಯವಾಗಿ ನಾವು ಒಂದು ಗಂಟೆ ಮುಂಚಿತವಾಗಿ ಬರುತ್ತೇವೆ. 11 ಗಂಟೆಗೆ ಸಭೆ ಎಂದರೆ ಹತ್ತು-ಹತ್ತೂವರೆ ಗಂಟೆಗೆ ಬರುತ್ತೇವೆ. ನಿಯಮಾವಳಿ ಪ್ರಕಾರವೇ ಇದನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ ಎಂದು ಮಾನ್ಯ ಸಭಾನಾಯಕರು ಸಹಿತ ನಿನ್ನೆ ಹೇಳಿದ್ದಾರೆ, ಅಪ್ಪಣೆ ಕೊಡಿಸಿದ್ದಾರೆ. ಆದ್ದರಿಂದ ಏಳು ಗಂಟೆಯಾದ ನಂತರವೂ ಕುಳಿತುಕೊಳ್ಳುವುದರಲ್ಲಿ ಅರ್ಥ ಇಲ್ಲ. ನಾಳೆ ಬೆಳಿಗ್ಗೆ ಬೇಕಾದರೆ ಸ್ವಲ್ಪ ಮುಂಚಿತವಾಗಿ ಸೇರೋಣ. ನಾಳೆಗೆ ಹತ್ತು ಗಂಟೆಗೆ ಇಟ್ಟುಕೊಳ್ಳಿ.

ಛೇರ್ಮನ್: ಸನ್ಮಾನ್ಯ ಅಧ್ಯಕ್ಷರು ಬರುತ್ತೇನೆ ಎಂದು ಹೇಳಿ ಕಳಿಸಿದ್ದಾರೆ. ಅದು ನನ್ನ ವ್ಯಾಪ್ತಿಯಲ್ಲಿ ಇಲ್ಲ. ಅವರು ಹೇಳುವವರೆಗೆ ಸಭೆಯನ್ನು ಮುಂದೆ ಹಾಕುವ ಪರಿಸ್ಥಿತಿಯಲ್ಲಿ ನಾನು ಇಲ್ಲ. ಅವರು ಬರುತ್ತಾರೆ, ಅವರು ಬರುವವರೆಗೆ ತಾವು ಶಾಂತರೀತಿಯಿಂದ ಕೂಡಬೇಕು. ತಾವು ದಯವಿಟ್ಟು ಮುಂದುವರೆಸಿ.

(ಗೊಂದಲ)

ಒಬ್ಬ ಸದಸ್ಯರು: ಅಧ್ಯಕ್ಷರು ಬರುವವರೆಗೆ ಬಂದರೆ ಏನಾದರೂ ವಿಶೇಷ ಇದೆಯಾ?

ಶ್ರೀ ಡಿ.ವಿ.ಸದಾನಂದಗೌಡ: ಅಧ್ಯಕ್ಷಸ್ಥಾನಕ್ಕೆ ನಾವು ಗೌರವ ಕೊಡುತ್ತೇವೆ. ಈಗ ಸಭೆಯನ್ನು ಮುಂದೂಡಬೇಕಾಗುತ್ತದೆ. ಬೇರೆ ಬೇರೆ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಕೆ.ಎಚ್.ಹನುಮೇಗೌಡ: ಮುಂದೂಡದೇ ಇದ್ದರೆ ಏನಾದರೂ ಅನಾಹುತ ಆಗುತ್ತದೆಯೇ ಹೇಳಿ. ಏನಾದರೂ ಅನಾಹುತ ಆಗುತ್ತದೆ ಎನ್ನುವುದಾದರೆ ನಾವು ಕುಳಿತು ಕೊಳ್ಳುತ್ತೇವೆ. ಇದು ಮಾಮೂಲಿಯಾಗಿ ನಡೆಯುವಂಥಾದ್ದು. ಇದಕ್ಕೆ ಒಂದುಮಿತಿ ಇಲ್ಲವೆ?

ಶ್ರೀ ಕಾಗೋಡು ತಿಮ್ಮಪ್ಪ: ಅಧ್ಯಕ್ಷರು ಈಗ ಇರತಕ್ಕಂಥ ಸಂದಿಗ್ಧತೆಯನ್ನು ಹೇಳುತ್ತಿದ್ದಾರೆ. ಅಧ್ಯಕ್ಷರು ಇನ್ನೇನು ಬರುತ್ತಾರೆ. ಅವರು ಬರುವವರೆಗೆ ಒಂದೆರಡು ನಿಮಿಷ ಕಾಯುವುದಕ್ಕೆ ಆಗುವುದಿಲ್ಲವೇನು?

(ಮಾನ್ಯ ಅಧ್ಯಕ್ಷರು ತಮ್ಮ ಸ್ಥಾನದಲ್ಲಿ ಉಪಸ್ಥಿತರಾದರು)

ಅಧ್ಯಕ್ಷರು: ಇನ್ನು ಯಾರಾದರೂ ಮಾತನಾಡುತ್ತೀರಾ? ಪಾಟೀಲರೇ ತಾವು ಮುಂದುವರೆಸಿ.

ಶ್ರೀ ಕೆ.ಎಚ್.ಹನುಮೇಗೌಡ: ಸ್ವಾಮಿ, ನಾವು ಸಾಕಾಗಿ ಕುಳಿತಿದ್ದೇವೆ. ಇವತ್ತು ಅರ್ಧಗಂಟೆ ಮಾತನಾಡದೆ ಹಿಂದೆ ಹೋದರೆ ಅನಾಹುತ ಏನೂ ಆಗುವುದಿಲ್ಲ. ನಾಳೆ ಬೆಳಿಗ್ಗೆ ಬಂದು ಪ್ರಾರಂಭ ಮಾಡಬಹುದು. ಎಲ್ಲರೂ ಬೇಸರವಾಗಿದ್ದೇವೆ.

ಅಧ್ಯಕ್ಷರು: ಹನುಮೇಗೌಡರೇ, ಮೊನ್ನೆ ನಿಮ್ಮ ಹಾಸನ ಹಾಲುಡ್ಯೈರಿ ಬಗ್ಗೆ ಮೂರು ಗಂಟೆ ಮಾತನಾಡಿದ್ದೇವಲ್ಲ. ನಿಮ್ಮ ಸಬ್ಜೆಕ್ಟ್ ಬಂದರೆ ಮಾತ್ರ ಮಾತನಾಡಬೇಕು, ಬೇರೆ ಸಬ್ಜೆಕ್ಟ್ ಬಂದರೆ ಮಾತನಾಡಬಾರದೇನು?

ಶ್ರೀ ಕೆ.ಎಚ್.ಹನುಮೇಗೌಡ: ಆಯಿತು ಸ್ವಾಮಿ. ನಾಲೆ ಬೆಳಗಿನ ತನಕ ಸಭೆ ನಡೆಸಿ.

ಅಧ್ಯಕ್ಷರು: ನೀವು ಮಾತನಾಡಿ.

ಶ್ರೀ ಎಸ್.ಎಸ್.ಪಾಟೀಲ್: ನಮ್ಮ ನಾಯಕರೆಲ್ಲ ಎದ್ದುಹೋಗಿಬಿಟ್ಟಿದ್ದಾರೆ.

ಅಧ್ಯಕ್ಷರು: ನೀವು ಮಾತನಾಡಿ.

(ಗೊಂದಲ)

ಶ್ರೀ ಎಸ್.ಜಿ.ನಂಜಯ್ಯನಮಠ: ಇವರಿಗೆ ಅಷ್ಟೂ ತಾಳ್ಮೆ ಇಲ್ಲ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್: ನಾವು ಅದೆಲ್ಲ ಮಾಡಿಯೇ ಇಲ್ಲಿ ಬಂದಿದ್ದೇವೆ.

ಶ್ರೀ ಎಚ್.ಎಸ್.ಮಹದೇವಪ್ರಸಾದ್: ನೀವು ಭಾಷಣ ಕೇಳುವುದಕ್ಕೆ ಅಲ್ಲಿ ಕುಳಿತಿದ್ದೀರೋ ಅಥವಾ ಮಂತ್ರಿಮಂಡಲ ಸೇರುವುದಕ್ಕೆ ಕುಳಿತಿದ್ದೀರೋ?

ಅಧ್ಯಕ್ಷರು: ದಯವಿಟ್ಟು ಮುಂದುವರೆಸಿ.

ಒಬ್ಬ ಸದಸ್ಯರು: ಎಸ್.ಎಸ್.ಪಾಟೀಲರಿಗೆ ಹೀಗೆ ಅವಕಾಶ ಕೊಟ್ಟರೆ ಅಧಿವೇಶನ ಮುಗಿಯುವವರೆಗೆ ಅವರು ಒಬ್ಬರೇ ಮಾತನಾಡುತ್ತಾರೆ.

ಅಧ್ಯಕ್ಷರು: ತಾವು ಮಾತನಾಡದೇ ಇದ್ದರೆ, ರೂಲಿಂಗ್ ಪಾರ್ಟಿಯವರು ಮಾತನಾಡುತ್ತಾರೆ.

ಶ್ರೀ ಎಸ್.ಜಿ.ನಂಜಯ್ಯನಮಠ: ನಿಮ್ಮ ಭಾಷಣ ಕೇಳುವುದಕ್ಕೆ ನಾವು ತಯಾರಾಗಿ ಕುಳಿತಿದ್ದೇವೆ. ನಿಮ್ಮ ಸ್ನೇಹಿತರೆಲ್ಲ ಎದ್ದು ಹೋಗಿದ್ದಾರಲ್ಲ?

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್: ನಾನು ಮಾತನಾಡುತ್ತಿದ್ದೇನೆ. ನಾನು ಅಲ್ಲಿ ಕುಳಿತೇ ಇಲ್ಲಿ ಬಂದಿದ್ದೇನೆ. ನೀವು ಏನು ಮಾಡಿದ್ದೀರಿ ಅದನ್ನು ನಾವೂ ಮಾಡಿದ್ದೇವೆ. ನೀವು ಏಕೆ ಕುಳಿತಿದ್ದೀರಿ ಎಂಬುದು ನಮಗೆ ಗೊತ್ತಿದೆ. ನನಗೆ ಎಲ್ಲ ಗೊತ್ತಾಗುತ್ತದೆ.

(ಗೊಂದಲ)

ಅಧ್ಯಕ್ಷರು : ನೀವು ಮಾತನಾಡಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಸಭಾಧ್ಯಕ್ಷರೇ, ಒಂದು ತಮಗೆ ನಾನು ಏನು ಹೇಳುವುದು ಎಂದರೆ ಸನ್ಮಾನ್ಯ ಮಂತ್ರಿಗಳು ಈಗ ಎರಡೂವರೆ ವರ್ಷ ಎಂದು ತಂದಿದ್ದಾರಲ್ಲ, ನಾವೂ 20 ತಿಂಗಳು ಮಾಡಿದ್ದೇವೆ. ಇದು ತಪ್ಪು ಎಂದು ಅವತ್ತು ಕೂಡ ನಾನು ಹೋರಾಟ ಮಾಡಿದ್ದೇನೆ. ಯಾವುದೇ ಅಧ್ಯಕ್ಷರು, ಉಪಾಧ್ಯಕ್ಷರಿಗೆ ಐದು ವರ್ಷ ಅವಧಿ ಇರಬೇಕು. ಹರಿಜನರು ಇರಲಿ, ಯಾರೇ ಇರಲಿ, ಇದು ಏಕೆ ರೋಟೇಶನ್ ತರುವುದು? ಇದು ತಪ್ಪಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ನಿರ್ಧಿಷ್ಟ ಅವಧಿ ಇಲ್ಲದೇ

ಇದ್ದರೆ ಇದು ಸರಿಯಾಗುವುದಿಲ್ಲ. ಈ ಕಾರಣದಿಂದ ದಯವಿಟ್ಟು ಐದು ವರ್ಷ ಮಾಡುವುದು ಸರಿಯೆಂದು ನನ್ನ ಒಂದು ವಾದ.

ಶ್ರೀ ಎಂ.ವೈ.ಘೋರ್ಪಡೆ: ಇದು ನಿಮ್ಮ ಕಾಲಕ್ಕೆ ಆಗಿದ್ದು.

ಶ್ರೀ ಎಸ್.ಎಸ್.ಪಾಟೀಲ್: ಅದು ತಪ್ಪು ಎಂದು ನಾನೇ ಹೇಳುತ್ತಿದ್ದೇನೆ. ಈಗ ನಮ್ಮ ಗೃಹಸಚಿವರು ಬಂದಿದ್ದಾರೆ. ಈಗಾಗಲೇ ಎಷ್ಟು ಹೊಡೆದಾಟ ಆಗಿದೆ. ಯಾವ ಸರ್ಕಾರ ಇದ್ದರೂ ಹೀಗೆ ಆಗುತ್ತದೆ. ನೀವು ಬಂದಮೇಲೆ ಆಗಿದೆಯೆಂದು ನಾನು ಟೀಕೆ ಮಾಡುವುದಕ್ಕೆ ತಯಾರಿಲ್ಲ. ಅದರಲ್ಲೂ ಜಿಲ್ಲಾ ಪಂಚಾಯತ್ ಬೇರೆ, ತಾಲ್ಲೂಕು ಪಂಚಾಯತ್ ಬೇರೆ. ಹಳ್ಳಿಮಟ್ಟದಲ್ಲಿ ದೊಡ್ಡ ಹೋರಾಟ ಆಗುತ್ತಿದೆ. ಮೊನ್ನೆ ನೋಡಿದರೆ ಎಂತೆಂಥ ಹೊಡೆದಾಟವಾಗಿದೆ. ಮೊನ್ನೆ ಗೃಹಸಚಿವರೇ ಉತ್ತರ ಕೊಟ್ಟರು. ಹತ್ತು ಮಂದಿ ಒಂದು ಕಡೆ ಇದ್ದಾರೆ, ಒಬ್ಬನೇ ಒಂದು ಕಡೆ ಇದ್ದಾನೆ. ಆದರೆ ಒಬ್ಬನೇ ಅಧ್ಯಕ್ಷ ಆಗಿಬಿಟ್ಟ. ಹತ್ತು ಮಂದಿ ಬಿಡಲಿಲ್ಲ, ಅವನನ್ನು ಹಿಡಿದುಹಾಕಿಬಿಟ್ಟರು. ಅದಕ್ಕೆ ಗೃಹಸಚಿವರು ಉತ್ತರ ಕೊಟ್ಟರು. ಇದು ದೊಡ್ಡ ದೊಡ್ಡ ಹಳ್ಳಿಗಳಲ್ಲಿ ನಡೆಯತಕ್ಕಂಥ ವ್ಯವಸ್ಥೆ. ತಿದ್ದುವುದಕ್ಕೆ ಸಾಧ್ಯವಿದ್ದರೆ ಅದನ್ನು ತಾವು ತರಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಂಡು ಇನ್ನು, ಗ್ರಾಮಸಭೆಗಳ ಬಗ್ಗೆ ಮಾನ್ಯ ಅಧ್ಯಕ್ಷರೇ ತಮಗೂ ಅನುಭವ ಇದೆ. ಇವತ್ತು ಗ್ರಾಮಸಭೆಗಳು ಹೇಗೆ ನಡೆಯುತ್ತಿವೆ? ತಮಗೆ ಗೊತ್ತಿರುವಂತೆ ಎಲ್ಲ ಅಧಿಕಾರಿಗಳನ್ನು ಕೊಟ್ಟುಬಿಟ್ಟಿದ್ದಾರೆ, ಪ್ರತಿಯೊಂದು ಅಧಿಕಾರವನ್ನೂ ಕೊಟ್ಟಬಿಟ್ಟಿದ್ದಾರೆ. ಅವರು ಚೇರ್ಮನ್‌ರಿಂದ ಸಹಿಮಾಡಿಸಿಕೊಂಡು ತಂದು ಕೊಟ್ಟುಬಿಡುತ್ತಾರೆ. ಇದು ನಡೆದಿದೆ. ನಮ್ಮ ಜಿಲ್ಲೆಯಲ್ಲಿ ಎಲ್ಲ ಪಕ್ಷದವರೂ, ಡಿ.ಆರ್.ಪಾಟೀಲರು, ಹೆಚ್.ಕೆ.ಪಾಟೀಲರು ಎಲ್ಲರೂ ಸೇರಿ ಮಾತನಾಡಿಕೊಂಡು ವೀಡಿಯೋ ಹಚ್ಚಿಸಲು ಹೇಳಿದೆವು. ಗ್ರಾಮಸಭೆ ನಡೆದ ಬಗ್ಗೆ ವೀಡಿಯೋ ಮಾಡಿಕೊಂಡು ತನ್ನಿ ಎಂದು ಹೇಳಿದಾಗ ವೀಡಿಯೋದವನು ಏನು ಮಾಡಿದ ಎಂದರೆ ಒಂದಿಷ್ಟು ಮಂದಿಯನ್ನು ಕೂಡಿಸಿಕೊಂಡು ವೀಡಿಯೋ ಹೊಡೆಸಿಕೊಂಡು ಬಂದಿದ್ದಾನೆ. ಪರಿಸ್ಥಿತಿ ಹೀಗಾದರೆ ಏನು ಮಾಡುವುದು? ಆದ್ದರಿಂದ, ಈ ಗ್ರಾಮಸಭೆ ಕೂಡ ಹೀಗೆ ನಡೆಯುತ್ತಿದೆ. ಅಲ್ಲಿ ನಿಜವಾದ ಆಯ್ಕೆ ಆಗುವುದಿಲ್ಲ.

ಅಲ್ಲಿ ಅಧಿಕಾರಿಗಳು ಹೋಗುವುದಕ್ಕೆ ಏಕೆ ಹಿಂದೆ ಮುಂದೆ ನೋಡುತ್ತಾರೆಂಬುದನ್ನೂ ಹೇಳಿಬಿಡುತ್ತೇನೆ. ಅಲ್ಲಿ ತಿರುಗ ಮುರುಗ ನಡೆಯುವುದೇನೆಂದರೆ, ಜನತಾಮನೆ ಆಮೇಲೆ ಭಾಗ್ಯಜ್ಯೋತಿ. ಇದರ ಗುದ್ದಾಟ ನಡೆಯುತ್ತದೆ. ಮತ್ತೆ ಏನೂ ಊರು ಅಭಿವೃದ್ಧಿ ಕೇಳುವುದಿಲ್ಲ, ಮತ್ತೊಂದು ಕೇಳುವುದಿಲ್ಲ, ಮಗದೊಂದು ಮಾಡುವುದಿಲ್ಲ. ಬರೀ ಚರ್ಚೆ ನಡೆಯುವುದು ಅದು. ಆ ಕಾರಣದಿಂದ ಗ್ರಾಮಸಭೆಯನ್ನು ಹೇಗೆ ಮಾಡುತ್ತೀರಿ, ಅದಕ್ಕೆ ಏನೇನು ಕೊಡುತ್ತೀರಿ? ನೀವು ಸಹಕಾರಿ ಮೂವ್‌ಮೆಂಟ್ ಮುಗಿಸಿಯೇ ಬಿಡುತ್ತೀರಿ. ಆ ಬಿಲ್

ಬಂದಾಗ ಮಾತನಾಡುತ್ತೇನೆ. ಆಗಲೇ ಬಸವಣ್ಣನವರ ವಚನವನ್ನು ಹೇಳಿದ್ದೇನೆ. ಆಗ ಮಾನ್ಯ ತಿಮ್ಮಪ್ಪನವರು ಇರಲಿಲ್ಲ, ಅಧ್ಯಕ್ಷರೂ ಇರಲಿಲ್ಲ.

ಶ್ರೀ ಹೆಚ್.ಎಂ.ರೇವಣ್ಣ: ಸಹಕಾರಿ ಬಿಲ್ ತಂದಾಗ, ನಾಮಕರಣ ಬೇಡ ಬೇಡ ಎಂದು, ಅವರೇ ತಂದಿದ್ದರು. ಅವರಿಗೆ ಕಷ್ಟ ಏನೆಂದು ಗೊತ್ತಿದೆ. ಇವತ್ತು ಹೇಳುವುದಕ್ಕೆ ಹೊರಟಿದ್ದೇನೆ ಎಂದು ಹೇಳುತ್ತಾರೆ. ಸಹಕಾರಿ ಕ್ಷೇತ್ರದಲ್ಲಿ ನಾಮಕರಣ ತರಬಾರದು ಎಂದು ಅವರೇ ಹೇಳುತ್ತಿದ್ದರು.

ಶ್ರೀ ಎಸ್.ಎಸ್.ಪಾಟೀಲ್: ಅದಕ್ಕೆ ನಾನೇನು ಹೇಳಿದೆ ಎಂದರೆ, ಅದಕ್ಕೇ ನಾವು ಇಲ್ಲಿ ಬಂದು ಕುಳಿತಿದ್ದೇವೆ ಎಂದು ಹೇಳಿದೆ. ಅವರೂ ಬಿಡುತ್ತಾರೆ ಬಿಡಿ ಎಂದು ಅಧ್ಯಕ್ಷರ ಅಪ್ಪಣೆಯಾಗಿಬಿಟ್ಟಿದೆ. ಆವತ್ತು ನೀವು ಇರಲಿಲ್ಲವೆಂದು ಕಾಣುತ್ತೆ. ಆಮೇಲೆ ಈ ಗ್ರಾಮಸಭೆಯಲ್ಲಿ ಫಲಾನುಭವಿಗಳ ಆಯ್ಕೆ ಇದೆಯಲ್ಲ, ಒಮ್ಮೆ ಫಲಾನುಭವಿಗಳ ಆಯ್ಕೆ ತಯಾರು ಮಾಡಿ ಇಟ್ಟುಬಿಡಿ. ಅಲ್ಲಿ ಆರಿಸುವುದಕ್ಕೆ ಕೊಡಬೇಡಿ. ಅಲ್ಲಿ ಸರಿಯಾಗಿ ನಡೆಯುತ್ತಾ ಇಲ್ಲ, ನಾವು ನೋಡಿದ್ದೇವೆ. ಬರೀ ಶ್ರೀಮಂತರು ಪಟ್ಟಿಯಲ್ಲಿ ಇರುತ್ತಾರೆ. ನಿಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ಊರಿನಲ್ಲಿ ಒಬ್ಬ ಹೆಣ್ಣುಮಗಳು ಬಂದರು. ನನಗೆ ಜನತಾ ಮನೆ ಕೊಡಿ ಎಂದು ಕೇಳಿದಳು. ನೀವು 4 ಎತ್ತು ಕಟ್ಟಿದ್ದೀರಿ, ಒಂದು ಬೆಚ್ಚನ ಮನೆಇದೆ, ನಿನಗೆ ಹೇಗೆ ಜನತಾ ಮನೆ ಕೊಡುವುದಕ್ಕೆ ಬರುತ್ತೆ ಎಂದು ಹೇಳಿದೆ. ಆಗ, ಆಕೆ ದನ ಕಟ್ಟುವುದಕ್ಕೆ ನಮಗೆ ಬೇಕು ಎಂದಳು. ದನ ಕಟ್ಟುವುದಕ್ಕೆ ಕೊಡಲು ಬರುತ್ತದೆಯೇ ಎಂದು ಕೇಳಿದೆ ಅಂತಹವರಿಗೆ ಕೊಟ್ಟಿದ್ದಾರೆ ಎಂದು ಹೇಳಿದಳು. ಅಂದರೆ ಹೆಣ್ಣುಮಕ್ಕಳ ಬುದ್ಧಿ ಹೇಗಿದೆ ನೋಡಿ, ಅವರು ನನಗೆ ಹೇಳಬೇಕಾಯಿತು. ದನ ಕಟ್ಟಿದ್ದಾರೆ ನೋಡಿ, ನಡೆಯಿರಿ ಎಂದಳು. ಅವರಿಗೆ ಊರಿನಲ್ಲಿ ಮನೆ ಇವೆ, ಅವುಗಳನ್ನು ಬಾಡಿಗೆ ಕೊಟ್ಟಿದ್ದಾರೆ. ಯಾವ ಬಡವನಿಗೆ ಮನೆ ಸಿಗಬೇಕಾಗಿತ್ತೋ ಅವರಿಗೆ ಸಿಗಲಿಲ್ಲ. ಇವರು ಬಾಡಿಗೆ ಕೊಟ್ಟಿದ್ದಾರೆ. ಇದು ನಡೆಯತಕ್ಕ ವ್ಯವಸ್ಥೆ. ಅದಕ್ಕೆ ನಾನೇನು ಹೇಳುತ್ತೇನೆಂದರೆ, ತಾವೇನು ಒಂದು ಮಾರ್ಗಸೂಚಿ ಕಳುಹಿಸಿದ್ದೀರಿ, ಅದರ ಪ್ರಕಾರ ಫಲಾನುಭವಿಗಳ ಆಯ್ಕೆ ಮಾಡಿ ಇಟ್ಟುಬಿಡಿ. ಆ ಗ್ರಾಮಸಭೆಯಲ್ಲಿ ಇದನ್ನು ಕೊಡಬೇಡಿ. ಅಲ್ಲಿ ಯಾರು ಯಾರು ಕುಂತಿರುತ್ತಾರೆ, ಅವರ ಮಕ್ಕಳು, ಮರಿ ಅವರಿಗೇ ಬರೆದುಕೊಂಡುಬಿಟ್ಟಿರುತ್ತಾರೆ. ಬೇಕಾದರೆ ನೀವು ಅದನ್ನು ತೆಗೆದುನೋಡಿ. ಇದರ ಬಗ್ಗೆ ನಿಮಗೂ ಅನುಭವ ಇದೆ, ನಮಗೂ ಅನುಭವ ಇದೆ. ಇದು ಬಹಳ ಕಡೆ ನಡೆಯುತ್ತಾ ಇದೆ. ಇವತ್ತು 80 ಪರ್ಸೆಂಟ್ ಬಡವರು ಇದ್ದಾರೆ, ಈ ಗುಡಿಸಲಿನವರು ಏಕೆ ಉಳಿಯಬೇಕು? ಅವರು ಏಕೆ ಇರಬೇಕು ಹೇಳಿ. ಮೊನ್ನೆ ನಾನು ಇದನ್ನೆಲ್ಲಾ ಮಾಡಿಸಿ, ಚೀಟಿ ಎತ್ತುವುದಕ್ಕೆ ಶುರು ಮಾಡಿದಮೇಲೆ, ನಮ್ಮ ಕ್ಷೇತ್ರದಲ್ಲಿ ಎಲ್ಲರೂ ನನ್ನ ಮೈಮೇಲೆ ಬೀಳುವುದಕ್ಕೆ ಶುರುಮಾಡಿದರು. ತಾಲ್ಲೂಕು ಪಂಚಾಯ್ತಿಯವರು ಇದರಲ್ಲಿ ನಮಗೆ ಇದೆ, ಜಿಲ್ಲಾ ಪಂಚಾಯ್ತಿಯವರು ಇದರಲ್ಲಿ ನಮಗೆ ಇದೆ ಎಂದರು. ಅದಕ್ಕೆ ನಾನು ಹೇಳಿದೆ, ಅದು

ಆಗುವುದಿಲ್ಲ ಎಂದೆ. ಬಡವರ ಲಿಸ್ಟ್ ಮಾಡಿ ತರಿಸಿದೆ. ಚೀಟಿ ಎತ್ತಿಬಿಡುತ್ತೇನೆಂದು ಹೇಳಿದೆ. ಆ ಪಾರ್ಟಿ ಈ ಪಾರ್ಟಿ ಪ್ರಶ್ನೆ ಅಲ್ಲ. ಅವರು ಗುಡಿಸಲಿನಲ್ಲಿಯೇ ಇರಬೇಕು, ಎಂದು ಕಂಡೀಷನ್ ಮಾಡಿದೆ. ಒಂದುವೇಳೆ ಮನೆ ಇದ್ದೂ, ಅದರಲ್ಲಿ ಬಂದರೆ ರದ್ದು ಎಂದು ಹೇಳಿದೆ. ಆ ರೀತಿ ಮಾಡಿ, ಇದರ ಬಗ್ಗೆ ಗೈಡ್‌ಲೈನ್ಸ್ ಕಳುಹಿಸಿಕೊಡಿ. ಗೈಡ್‌ಲೈನ್ಸ್ ಕಳುಹಿಸಿ, ಚೀಟಿ ಎತ್ತಿ ತೆಗೆಯಬೇಕು. ಒಂದುವೇಳೆ ಮನೆ ಇದ್ದು, ಅವರೂ ಚೀಟಿಯಿಂದ ಬಂದರೆ, ಅವರಿಗೆ ಕ್ಯಾನ್ಸಲ್ ಎಂದು ಆಗಬೇಕು. ನಾನು ಆ ರೀತಿ ಮಾಡಿದ್ದೇನೆ. ಇಲ್ಲದೇಹೋದರೆ ನಿಜವಾಗಿಯೂ ಬಡವರಿಗೆ ಸಿಗುವುದಿಲ್ಲ. ಬಹಳ ನೋವು ಎನಿಸುತ್ತದೆ. 4-4 ಜೊತೆ ಎತ್ತುಗಳನ್ನು ಮನೆಯಲ್ಲಿ ಕಟ್ಟಿಕೊಂಡಿದ್ದಾರೆ. ಈ ಗ್ರಾಮಸಭೆಯಲ್ಲಿ ಕೂಡ ಈ ರೀತಿಯ ಅನ್ಯಾಯ ನಡೆಯುತ್ತದೆ. ಫಲಾನುಭವಿಗಳ ಆಯ್ಕೆ ಸರಿಯಾಗಿ ಆಗುತ್ತಾ ಇಲ್ಲ. ಆ ಕಾರಣದಿಂದ ಫಲಾನುಭವಿಗಳ ಆಯ್ಕೆಯನ್ನು ನೀವೇ ತಯಾರು ಮಾಡಿ, ಗೈಡ್‌ಲೈನ್ಸ್ ಕೊಟ್ಟು ಆ ಪಟ್ಟಿ ತಯಾರು ಮಾಡಿಸಿ, ಆಶ್ರಯ ಮನೆಗಳನ್ನು ಕಮಿಟಿಯಲ್ಲಿ ಚೀಟಿ ಎತ್ತಿ ತೆಗೆದುಬಿಡಿ. ಇದರಿಂದ ಯಾರಿಗೂ ಅನ್ಯಾಯವಾಗುವುದಿಲ್ಲ. ಸರಿಯಾದ ಬಡವರಿಗೆ ಸಿಗುತ್ತದೆ. ಆದ್ದರಿಂದ ಗ್ರಾಮಸಭೆಯಲ್ಲಾಗುವ ಈ ಫಲಾನುಭವಿಗಳ ಪಟ್ಟಿ ಬಗ್ಗೆಯೂ ಕೂಡ ತಾವು ಹೇಳಬೇಕು. ಇನ್ನು ಶೌಚಾಲಯಗಳ ಬಗ್ಗೆ ನನಗೆ ಬಹಳ ನೋವು ಅನಿಸುತ್ತದೆ. ನಮ್ಮ ಹಳ್ಳಿಯ ಹೆಣ್ಣುಮಕ್ಕಳು ಬಹಿರ್ದೆಸೆಗೆ ಮರ್ಯಾದೆಯಿಂದ ಹೋಗುವಂಥ ವ್ಯವಸ್ಥೆ ಮಾಡುವುದಕ್ಕಾಗಲಿಲ್ಲ. ಇದು ತಮಗೂ ಗೊತ್ತಿದೆ, ನಮಗೂ ಗೊತ್ತದೆ. ನಮ್ಮ ಕ್ಷೇತ್ರದಲ್ಲಿ ಮತ್ತು ನಮ್ಮ ಜಿಲ್ಲೆಯಲ್ಲಿ ಒಂದು ಕಾರ್ಯಕ್ರಮ ಹಾಕಿಕೊಂಡೆ. ಪ್ರತಿ ಹಳ್ಳಿಗಳಲ್ಲಿ ಕನಿಷ್ಟ ಒಂದೊಂದು ಕೇರಿಗೆ ಒಂದೊಂದು ಶೌಚಾಲಯ ಕಟ್ಟಬೇಕು. ಇ.ಎ.ಎಸ್. ಸ್ಕೀಮ್ ಮತ್ತೊಂದರಲ್ಲಿ ಉಳಿದ ಹಣದಿಂದ ಮಾಡಲು ಹೊರಟೆ. ಇವರೆಲ್ಲಾ ಏನು ಮಾಡುತ್ತಾರೆಂದರೆ, ತಮಗೆ ಏನು ಬೇಕೋ ಅದನ್ನು ಬರೆದುಕೊಂಡು ಬರುತ್ತಾರೆ. ಮಾಡಲೇ ಇಲ್ಲ. ಎಲ್ಲಿ ಸ್ವಲ್ಪ ಬಿಗಿ ಇಟ್ಟು ಮಾಡಿದೆವು, ಅಲ್ಲಿ ಶೌಚಾಲಯಗಳು ಆದವು. ಹಳ್ಳಿಗಳಲ್ಲಿ ಶೌಚಾಲಯ ಕಟ್ಟುವುದಕ್ಕೆ ಹೋಗಿ, ಅಲ್ಲಿ ಫಿಕ್ಸ್ ಮಾಡುವ ಬೇಸಿನ್‌ಗೆ ನೀರು ಬೇಕು. ಅದನ್ನೆಲ್ಲಾ ಮಾಡುವುದಕ್ಕೆ ಹೋಗಿಯೇ ಈಗ ನೀರಿಲ್ಲದ ಹಾಗೆ ಆಗಿದೆ. ಹಳ್ಳಿಗಳಲ್ಲಿ ಅದು ಆಗುವುದಕ್ಕೆ ಸಾಧ್ಯವಿಲ್ಲ. ಜನತಾ ಮನೆ ಕಟ್ಟಿಕೊಟ್ಟಿದ್ದೇವೆ. ಆ ಮನೆಗಳಿಗೆ ವೈಯಕ್ತಿಕ ಶೌಚಾಲಯಗಳನ್ನು ಹೇಳಿದ್ದಾರೆ. ಅಲ್ಲಿ ಇದನ್ನು ಮಾಡಿ ಕೊಡಬೇಕೆಂದು ಕಂಡೀಷನ್ ಮಾಡಿದಿರಿ. ಅದರಲ್ಲಿ ಯಾರಾದರೂ ಹೋಗುತ್ತಾರೆಯೇ ಎಂಬುದನ್ನು ನೋಡಿ. ಅವೆಲ್ಲಾ ಸ್ಟೋರ್ ರೂಮ್ ಆಗಿವೆ. ನನ್ನ ಕ್ಷೇತ್ರದಲ್ಲಿ ಮಾಡಿರುವುದನ್ನು ತಾವು ನೋಡಬಹುದು. ಗ್ರಾಮಾಂತರ ಪ್ರದೇಶದಲ್ಲಿ ಹಗೇವು, ಪಾಯಿಖಾನೆ ಎಂದು ಹಿಂದೆ ಇದ್ದವು. ಅವು ಬಹಳ ಸ್ವಚ್ಛವಾಗಿಯೂ ಇರುತ್ತವೆ, ಆ ಮಲವೂ ಉಪಯೋಗವಾಗುತ್ತದೆ. ನಮ್ಮ ಹೊಲಕ್ಕೆ ಉಪಯೋಗವಾಗುತ್ತದೆ, ವೇಸ್ಟ್ ಆಗುವುದಿಲ್ಲ. ಅಂತಹ ಪಾಯಿಖಾನೆಗಳನ್ನು ತೆಗೆದುಕೊಂಡು ಬನ್ನಿ. ಬೇಕಾದರೆ, ನಿಮ್ಮ ಅಧಿಕಾರಿಗಳನ್ನು ಕಳುಹಿಸಿ, ನೋಡಿಕೊಂಡು

ಬರಲಿ. ನಾನು, ನಮ್ಮ ಹಳ್ಳಿಯಲ್ಲಿ ಆ ರೀತಿಯಾಗಿ ಮಾಡಿಸಿದ್ದೇನೆ. ಒಂದು ಕಡೆ 4-4 ಜನ ಕೂಡಬಹುದು. 30-40 ಸಾವಿರ ಖರ್ಚುಮಾಡಿದರೆ, 4-5 ಜನ ತಾಯಂದರು ಕೂಡಲಿಕ್ಕೆ ಬರುತ್ತದೆ.

ಅಧ್ಯಕ್ಷರು: ಪಾಟೀಲರೇ, ನೀವು ಸುಮಾರು ಒಂದೂವರೆ ಗಂಟೆ ಕಾಲವನ್ನು ತೆಗೆದು ಕೊಂಡಿದ್ದೀರಿ. ನಾಳೆ ನಿಮ್ಮ ಪಕ್ಷದವರು ಯಾರೂ ಮಾತನಾಡುವುದಕ್ಕಾಗುವುದಿಲ್ಲ. ಇದೇ ಲಾಸ್ಟ್, ಮುಗಿಸಿಬಿಡಿ. ಇಲ್ಲದೇ ಹೋದರೆ ಒಂದು ಕೆಲಸ ಮಾಡಿ, ನಾಳೆ ಮುಂದುವರಿಸಿ ನಮಗೆ ಮೇಲ್ಮನೆಯಿಂದ ಒಂದು ಅರ್ಜೆಂಟ್ ಮೆಸೇಜ್ ಬಂದಿದೆ.

ಶ್ರೀ ಎಸ್.ಎಸ್.ಪಾಟೀಲ್: ಆಯಿತು, ನಾಳೆ ಮುಂದುವರಿಸುತ್ತೇನೆ.